ಅಧ್ಯಕ್ಷರು:- ಪ್ರಸ್ತುತ ಕಾರ್ಯಸೂಚಿ ಪ್ರಕಾರ, ನೆರೆಹಾವಳಿ ಬಗ್ಗೆ ಮುಂದುವರಿದ ಚರ್ಚೆ ನಡೆಯಬೇಕು. ಅದನ್ನು ಸಂಸದೀಯ ಸಚಿವರು ಬೇಡ ಎಂದು ಹೇಳಲಿಲ್ಲ ಮತ್ತು ಇದರ ಮಹತ್ವವನ್ನು ಕಡೆಗಣಿಸಲಿಲ್ಲ. ಅವರು ಈ ಸದನಕ್ಕೆ ಮಾಡಿದಂಥ ಒಂದು ಸೀಮಿತವಾದ ಕೋರಿಕೆ ಏನೆಂದರೆ, ಅಕಾಮಡೇಷನ್ ಬೇಕು. ಏಕೆಂದರೆ ಅನಿವಾರ್ಯತೆ, ನಾಳೆ ಈ ಮನೆಯಿಂದ ಈ ಮಸೂದೆಗಳು ಪಾಸಾಗಿ, ಅನಂತರ ಆ ಮನೆಗೆ ಚರ್ಚೆಗೆ ಹೋಗಬೇಕಾಗುತ್ತದೆ. ಅದಕ್ಕೆ ಅರಿವು ಮಾಡಿಕೊಡುವುದಕ್ಕೆ, ಜೊತೆಗೆ ಶಾಸನ ರಚನೆಯನ್ನು ನೋಡಿದಾಗ, ಜಿಜ್ಞಾಸೆ ಇರತಕ್ಕ ವಿಧೇಯಕಗಳು ನನಗೇನೂ ಕಾಣಲಿಲ್ಲ. ಆದ್ದರಿಂದ ಜಿಜ್ಞಾಸೆಗೆ ಒಳಪಡದೇ ಇರುವ ವಿಧೇಯಕಗಳನ್ನು ತಾವು ದೊಡ್ಡ ಮನಸ್ಸುಮಾಡಿ, ಅನಿವಾರ್ಯತೆಯನ್ನೂ ಗಮನದಲ್ಲಿಟ್ಟು, ಆ ಮನೆಗೂ ಅನುಕೂಲವಾಗತಕ್ಕ ರೀತಿಯಲ್ಲಿ ಎಂದು ಸದನಗಳಿಗೂ ಕೆಲಸ ಸಮತೂಕವಾಗಿ, ಜವಾಬ್ದಾರಿಯಿಂದ, ಹೊಣೆಗಾರಿಕೆಯನ್ನು ಹರಿಸತಕ್ಕ ರೀತಿಯಲ್ಲಿ ಸಹಕಾರ ಕೊಡಿ ಎಂದು ಕೋರಿದ್ದಾರೆ. ಇದರ ಬಗ್ಗೆ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ ಸಾಕಷ್ಟು ಸಹಕಾರ ಕೊಟ್ಟಿದ್ದೇವೆ. ಈಗಾಗಲೇ 6-7 ಬಿಲ್ ಪಾಸ್ ಆಗಿವೆ. ಹಾಗಾಗಿ, ಈ ಬಿಲ್‌ಗೆ ನಾವು ಸಹಕಾರ ಕೊಡಬಾರದು ಎಂಬ ಉದ್ದೇಶ ಇಲ್ಲ. ಆದರೆ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನೆರೆಹಾವಳಿ ಚರ್ಚೆಯಾಗಲಿ ಅನಂತರ ಬಿಲ್ ತೆಗೆದುಕೊಳ್ಳಬಹುದು. ಇದಾದ ನಂತರ ಗೊಬ್ಬರದ ವಿಷಯ ಚರ್ಚೆ ಮಾಡಬಹುದು.

ಅಧ್ಯಕ್ಷರು:- ಕಾರ್ಯಸೂಚಿಯಲ್ಲಿ ಹಾಗೆಯೇ ಇರುವುದು. ನೆರೆಹಾವಳಿಯಾದ ಮೇಲೆ ಶಾಸನ ರಚನೆ.... ಅನಂತರ ಗೊಬ್ಬರದ ವಿಷಯ, ನಂತರ ಬಿಲ್ಲುಗಳು ಇವೆ. ಹಾಗಾಗಿ, ತಮ್ಮಲ್ಲಿ ವಿನಂತಿ ಏನೆಂದರೆ, ನೆರೆ ಹಾವಳಿ ಚರ್ಚೆ ಮುಗಿಯಲಿ, ಆದರ ನಂತರ ಬಿಲ್ಲುಗಳನ್ನು ತೆಗೆದುಕೊಳ್ಳಬಹುದು, ನಂತರ, ಗೊಬ್ಬರದ ವಿಷಯ ತೆಗೆದುಕೊಳ್ಳಬಹುದು. 13ನೇ ತಾರೀಖಿನವರೆಗೂ ಕೌನ್ಸಿಲ್ ಇದೆ. ಆದ್ದರಿಂದ ತೊಂದರೆ, ಕಷ್ಟ ಏನೂ ಆಗುವುದಿಲ್ಲ.

ಶ್ರೀ ಹಾರ್‍ನಹಳ್ಳಿ ರಾಮಸ್ವಾಮಿ:- ಸಭಾಧ್ಯಕ್ಷರಿಗೆ ಮತ್ತು ವಿರೋಧ ಪಕ್ಷದ ನಾಯಕರಿಗೆ ನನ್ನ ಅರಿಕೆ ಏನೆಂದರೆ, ಇವತ್ತು ಯಾವುದಾದರೊಂದು ಕಾಲವನ್ನು ನಿಗದಿ ಮಾಡಿ, ಇವತ್ತೆ ಸಭೆ ಮುಗಿಯುವುದರೊಳಗಾಗಿ, ಈ ವಿಧೇಯಕಗಳು ಸದನದ ಪರಿಶೀಲನೆಗೆ ಒಳಪಟ್ಟು ಈ ಕಾರ್ಯ ಮುಗಿಯಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ:- ಸಂಜೆ ಐದೂವರೆ ಗಂಟೆಗೆ ಬೇಕಾದರೆ ಬಿಲ್ಲುಗಳನ್ನು ತೆಗೆದುಕೊಳ್ಳಬಹುದು.

ಅಧ್ಯಕ್ಷರು:- ಸಂಜೆ 5 ಗಂಟೆಗೆ ತೆಗೆದುಕೊಳ್ಳೋಣ.

**ನಿಯಮ 68ರ ಮೇರೆಗೆ ನೆರೆಹಾವಳಿಯಿಂದ ರೈತರಿಗೆ ತೊಂದರೆ ಮತ್ತು ಪರಿಹಾರ.**

† ಶ್ರೀ ಬಿ. ಎಸ್. ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೆ, 68ನೇ ನಿಯಮದ ಮೇರೆಗೆ ಇತ್ತೀಚೆಗೆ ಉಂಟಾದಂತಹ ನೆರೆಹಾವಳಿಯಿಂದ ಈ ರಾಜ್ಯದ ರೈತರ ಮೇಲೆ ಏನು ದುಷ್ಪರಿಣಾಮವಾಗಿದೆ, ಶ್ರೀ ಸಾಮಾನ್ಯರ ಮೇಲೆ ಏನು ದುಷ್ಪರಿಣಾಮವಾಗಿದೆ ಅವರಿಗೆ ಬದುಕುವುದಕ್ಕೆ ಆಗದೇ ಇರುವಂತಹ ಉಸಿರು ಕಟ್ಟುವಂತಹ ಒಂದು ವಾತಾವರಣ ಏನು ಉಂಟಾಗಿದೆ, ಈ ಘಟನೆ ನಡೆದು ಈಗಾಗಲೇ 50 ದಿವಸಗಳು ಕಳೆದುಹೋಗಿವೆ. ಬಹಳ ತಿಂಗಳುಗಳ ನಂತರ ವಿಧಾನಸಭೆ ಅಧಿವೇಶನ ಪ್ರಾರಂಭವಾದಾಗ, ಅತ್ಯಂತ ಮಹತ್ವಕೊಟ್ಟು

ಈ ನೆರೆಹಾವಳಿ ಬಗ್ಗೆ ಚರ್ಚೆ ಮಾಡಿ, ರೈತರಿಗೆ ಏನು ನೆರವನ್ನು ಕೊಡಬೇಕು ಅದನ್ನು ಇಲ್ಲಿ ನಿಶ್ಚಯ ಮಾಡಿ ನಿರ್ಧಾರ ಮಾಡಿ, ನಾವು ಸದನದಿಂದ ವಾಪಸ್ಸು ನಮ್ಮ ಕ್ಷೇತ್ರಗಳಿಗೆ ಹೋಗುವುದರ ಒಳಗಾಗಿ, ಪರಿಹಾರವನ್ನು ಘೋಷಣೆ ಮಾಡುತ್ತದೆ, ಅದಕ್ಕೆ ಆದ್ಯತೆಯನ್ನು ಕೊಡುತ್ತದೆಂದು ನಾನು ಭಾವಿಸಿದ್ದೆ. ಆದರೆ ಬೇರೆಬೇರೆ ಕಾರಣಗಳಿಂದ ಯಾವ ಮಹತ್ವವನ್ನು ಈಗ ಕೊಡಬೇಕಾಗಿತ್ತೋ ಅದನ್ನು ಕೊಡದೇ ಬೇರೆಬೇರೆ ವಿಷಯಗಳಿಗೆ ಮಹತ್ವವನ್ನು ಕೊಟ್ಟು ಈ ನಾಡಿನ ರೈತನ, ಈ ದೇಶಕ್ಕೆ ಅನ್ನ ಕೊಡುವಂಥ ಅನ್ನದಾತನ ಬಗ್ಗೆ ವಿಧಾನಸಭೆಯ ಅಧಿವೇಶನ ಮುಗಿಯುವಂಥ ಸಂದರ್ಭದಲ್ಲಿ ಈಗ ಇದನ್ನು ಪ್ರಾರಂಭ ಮಾಡಿದ್ದೇವೆ. ನಿಜಕ್ಕೂ ಸಹ ಇದರಿಂದ ಈ ನಾಡಿನ ರೈತರ ಮನಸ್ಸಿಗೆ ತುಂಬಾ ಖೇದವಾಗಿದೆ. ನಾವು ಕರ್ತವ್ಯ ಚ್ಯುತಿ ಮಾಡಿದ್ದೇವೆ ಎನ್ನುವಂಥ ಮಾತನ್ನು ಸಹ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಹುಶಃ ಕಳೆದ ಶತಮಾನದಲ್ಲಿ ಹಿಂದೆಂದೂ ಕಾಣದಂಥ ಅನಾಹುತ ನೆರೆಹಾವಳಿಯಿಂದ ಆಗಿದೆ. ಸರ್ಕಾರ ತನ್ನ ವರದಿಯಲ್ಲಿ ಅಂಕಿಅಂಶಗಳನ್ನು ಒದಗಿಸಿ ಕೊಟ್ಟಿದೆ. ನೆರೆಹಾವಳಿಯಿಂದ ಯಾವ ಸಂದರ್ಭ ಬಂತು. ಯಾವಾಗ ರೈತ 6-7 ತಿಂಗಳು ಬೆವರು ಸುರಿಸಿ ತನ್ನ ಶ್ರಮ ಹಾಕಿ ಪೈರುಗಳು ಕಟಾವಿಗೆ ಬಂದು ಮನೆಗೆ ಫಸಲು ಬರುತ್ತದೆ, ಸಿಗುತ್ತದೆ, ಎರಡು ಹೊತ್ತು ಗಂಜಿ ಊಟ ಮಾಡಬಹುದು, ನೆಮ್ಮದಿಯಿಂದ ಜೀವನ ಮಾಡಬಹುದು ಎಂದು ಯೋಚನೆ ಮಾಡಿದಂತಹ ಸಂದರ್ಭದಲ್ಲಿ, ಒಳ್ಳೆಯ ಮಳೆಯಾಗಿದೆ, ಒಳ್ಳೆಯ ಬೆಳೆ ಸಿಗುತ್ತದೆ ಎಂದು ಬಹಳ ಕಾತುರತೆಯಿಂದ ಯೋಚನೆ ಮಾಡಿದಂಥ ಕಾಲದಲ್ಲಿ ನವೆಂಬರ್ 16ರಿಂದ 19ನೇ ತಾರೀಖಿನವರೆಗೆ ಬಹುಶಃ ನಮ್ಮ ಜೀವಮಾನದಲ್ಲಿ ನಾವು ಎಂದೂ ಕಾಣದಂತಹ ಒಂದು ನೆರೆಹಾವಳಿಯಿಂದ ಈ ನಾಡಿನ ರೈತ ತಬ್ಬಲಿ ಆದ. ಆದರೆ ಒಂದು ಮಾತನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಸನ್ಮಾನ್ಯ ವೀರಪ್ಪಮೊಯಿಲಿಯವರು ಅಧಿಕಾರವನ್ನು ವಹಿಸಿಕೊಂಡ ಮೇಲೆ ಒಂದು ರೀತಿಯಲ್ಲಿ ಅವರನ್ನು ಪರೀಕ್ಷೆ ಮಾಡುವ ರೀತಿಯಲ್ಲಿ ರೈತನನ್ನು ನೆರೆಹಾವಳಿ ಕಾಡಿಸಿತು. ಆದರೆ ದುಃಖದಿಂದ ಒಂದು ಮಾತನ್ನು ಹೇಳುತ್ತೇನೆ. ಈ ನೆರೆಹಾವಳಿಯಿಂದ ರೈತರ ಮೇಲೆ, ಬಡವನ ಮೇಲೆ, ಈ ಕೂಲಿಕಾರ್ಮಿಕರ ಮೇಲೆ ಏನು ಕೆಟ್ಟ ಪರಿಣಾಮ ಏನಾಗಿತ್ತೋ ಅದನ್ನು ಬಗೆಹರಿಸುವುದರಲ್ಲಿ ಸರ್ಕಾರ ಸಂಪೂರ್ಣ ವಿಫಲವಾಯಿತು. ನಿರ್ಲಕ್ಷದಿಂದ ಈ ಸಮಸ್ಯೆಯನ್ನು ಬಗೆಹರಿಸುವಂಥ ಯಾವುದೇ ಪ್ರಯತ್ನ ಮಾಡಿಲ್ಲ. 50 ದಿವಸಗಳು ಕಳೆದುಹೋಯಿತು. ಪರಿಹಾರವನ್ನು ಕೊಡುವುದರಲ್ಲಿ ತಾವು ಸಂಪೂರ್ಣ ವಿಫಲರಾಗಿದ್ದೀರಿ. ನೀವೇ ಕೊಟ್ಟಿರುವಂಥ ವರದಿಯ ಪ್ರಕಾರ ರಾಜ್ಯದಲ್ಲಿ ಸುಮಾರು 306 ಕೋಟಿ ರೂಪಾಯಿಯ ಆಸ್ತಿಪಾಸ್ತಿ, ಪೈರು ನಷ್ಟವಾಗಿದೆ. ಇದು ರೆವಿನ್ಯೂ ಇಲಾಖೆಯ ಅಧಿಕಾರಿಗಳು ಮನೆಯಲ್ಲಿ ಕುಳಿತುಕೊಂಡು ಕೊಟ್ಟಂಥ ವರದಿ. ಅಧಿಕಾರಿಗಳು ಬಹುತೇಕ ಕಡೆ ಜಮೀನಿಗೆ ಹೋಗಲಿಲ್ಲ. ಹಳ್ಳಿಗಳಿಗೆ ಹೋಗಲಿಲ್ಲ ಎಂದು ನಾನು ಹೇಳುತ್ತೇನೆ. ಶಿವಮೊಗ್ಗ ಜಿಲ್ಲೆಯಲ್ಲಿ, ಮೈಸೂರು ಜಿಲ್ಲೆಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಬಂದು ಕೆಲವು ಕಡೆ ವಾಸ್ತವಿಕ ಸ್ಥಿತಿಯನ್ನು ಸರ್ಕಾರಕ್ಕೆ ತಿಳಿಸುವುದರಲ್ಲಿ ಕೆಲವು ಜಿಲ್ಲೆಗಳಲ್ಲಿ ಅಧಿಕಾರಿಗಳು ಸಂಪೂರ್ಣ ವಿಫಲರಾಗಿದ್ದಾರೆ. ಅದರ ಆಧಾರದ ಮೇಲೆ ಇವತ್ತು ತಾವು ವರದಿಯನ್ನು ಕೊಟ್ಟಿದ್ದೀರಿ. ಕರ್ನಾಟಕ ರಾಜ್ಯದಲ್ಲಿ ಸುಮಾರು 306 ಕೋಟಿ ರೂಪಾಯಿ ಲುಕ್ಸಾನು ಆಗಿದೆ ಎಂದು ನೀವು ಹೇಳಿದ್ದೀರಿ. ಆದರೆ ನಾನು ಹೇಳುತ್ತೇನೆ ಇವತ್ತು ತಾವು ಸರಿಯಾದ ವರದಿಯನ್ನು ತರಿಸಿಕೊಂಡಿದ್ದರೆ ಆ ಲುಕ್ಸಾನು 500 ಕೋಟಿಗೂ ಹೆಚ್ಚು ದಾಟಬಹುದು. ಆ ರೀತಿ ಸರಿಯಾದ ವರದಿಯನ್ನು ತಾವು ತರಿಸಿಕೊಳ್ಳಲಿಲ್ಲ, ಪರಿಹಾರವನ್ನು ಕೊಡುವುದರಲ್ಲಿ ಪ್ರಾಮಾಣಿಕ ಪ್ರಯತ್ನವನ್ನೂ ಸಹ ತಾವು ಮಾಡಲಿಲ್ಲ. ಬಹುಶಃ ಪ್ರಕೃತಿ ಮುನಿಸಿಕೊಂಡರೆ ಆದರ ವಿರುದ್ಧ ಜಗತ್ತಿನ ಯಾವ ಶಕ್ತಿಯೂ ಸಹ ಎದೆ ಒಡ್ಡಿ ನಿಲ್ಲುವುದಕ್ಕೆ ಸಾಧ್ಯ ಇಲ್ಲ

ಎನ್ನುವುದು ನವೆಂಬರ್ ತಿಂಗಳಿನಲ್ಲಿ ಆದಂಥ ನೆರೆಹಾವಳಿಯಿಂದ ಪ್ರತ್ಯಕ್ಷ ಅನುಭವಕ್ಕೆ ನಮಗೆ ಬಂದಿದೆ. ಅಧ್ಯಕ್ಷರೆ ತಮಗೆ ಗೊತ್ತಿರುವ ಹಾಗೆ 6-7 ವರ್ಷಗಳಿಂದ ರೈತ ಏನು ಪಾಪ ಮಾಡಿದ್ದಾನೋ, ಏನು ತಪ್ಪು ಮಾಡಿದ್ದಾನೋ, ಗೊತ್ತಿಲ್ಲ. ಬರಗಾಲಕ್ಕೆ ತುತ್ತಾದ, ಅತಿವೃಷ್ಟಿಗೆ ತುತ್ತಾದ, ನೆರೆಹಾವಳಿಗೆ ತುತ್ತಾದ. ಈ ನಾಡಿನ ರೈತ, ಈ ದೇಶದ ರೈತ, ಪ್ರಕೃತಿ ಜೊತೆ ಒಂದು ರೀತಿ ಜೂಜು ಆಡುತ್ತಾ ಇದ್ದಾನೆ. ಯಾವರೀತಿ ಜೂಜಿನಲ್ಲಿ ಗೆಲ್ಲುವುದು ಅಸಂಭವೋ, ಅಪರೂಪವೋ ಅದೇ ರೀತಿ ರೈತನೂ ಸಹ ಈ ಪ್ರಕೃತಿ ವಿಕೋಪಕ್ಕೆ ತುತ್ತಾಗಿ ತಾನು ನೆಮ್ಮದಿ ಜೀವನ ಮಾಡುವುದಕ್ಕೆ ಆಗದೇ ಇರುವಂತಹ ಒಂದು ದಾರುಣ ಪರಿಸ್ಥಿತಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಇದೆ. ಮೂಲತಃ ಕರ್ನಾಟಕ ರಾಜ್ಯ ಕೃಷಿಯನ್ನು ಅವಲಂಬಿಸಿರತಕ್ಕಂತಹ ರಾಜ್ಯ. ಶೇಕಡ 68 ಭಾಗ ಗ್ರಾಮೀಣ ಪ್ರದೇಶಗಳಲ್ಲಿ ಜನರು ಕೃಷಿ ಅವಲಂಬಿತರಾಗಿದ್ದಾರೆ. ಆದರೆ ಅವನ ಪರಿಸ್ಥಿತಿಯನ್ನು ತಿಳಿದುಕೊಂಡು ಅವನಿಗೆ ನೆರವು ಕೊಡುವಂತಹ ಯಾವುದೇ ಪ್ರಾಮಾಣಿಕ ಪ್ರಯತ್ನ ಕಳೆದ 7-8 ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಆಗಿಲ್ಲ. ಒಂದು ರೀತಿ ಕೈಗೆ ಬಂದ ತುತ್ತು ಬಾಯಿಗೆ ಬಾರದಂತಹ ರೀತಿಯಲ್ಲಿ ರೈತ ಗೊಂದಲದ ವಾತಾವರಣದಲ್ಲಿ ಸಿಕ್ಕಿದ್ದಾನೆ. ನಾನು ನೊಂದು ಒಂದು ಮಾತನ್ನು ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ 3 ವರ್ಷಗಳಲ್ಲಿ 3 ಜನ ಮುಖ್ಯಮಂತ್ರಿಗಳನ್ನು ಈ ನಾಡಿನ ಜನರು ಕಂಡರು. 7 ಬಾರಿ ಮಂತ್ರಿಮಂಡಲದ ರಚನೆ ಮಾಡಿದರು ಮೊದಲನೆಯ ಬಾರಿಗೆ ಶ್ರೀ ವೀರೇಂದ್ರಪಾಟೀಲರು ಸದನದ ಒಳಗೆ ಬಂದ ದಿವಸ ನಾನು ಹೇಳಿದೆ ಸ್ವಾಮಿ ಈ ನಾಡಿನ ಜನತೆಗೆ ಭರವಸೆ ಕೊಟ್ಟು ಬಂದಿದ್ದೀರಿ. ನಾವು ಹಿಂದೆ ಆದಂತಹ ತಪ್ಪನ್ನು ಮಾಡುವುದಿಲ್ಲ, ನೀವು ಪರಿಹಾರ ಕೊಡುತ್ತೇವೆಂದು ಹೇಳಿದ್ದೀರಿ. ನೀವು ಕೊಟ್ಟಂಥ ಆಶ್ವಾಸನೆ ಏನೆಂದರೆ ದಿನಾಂಕ 2-10-89ರವರೆಗೂ ಏನು ರೈತನ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿ ಅಧಿಕಾರಕ್ಕೆ ಬಂದಿರಿ, ಇದನ್ನು ಮಾಡಿಲ್ಲ, ಆ ರೈತನ ಶಾಪಕ್ಕೆ ನೀವು ಗುರಿಯಾಗುತ್ತೀರಿ ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ಧರಣಿ ಕುಳಿತುಕೊಂಡಾಗ 3-4 ದಿವಸ ಕಾರ್ಯಕಲಾಪಗಳು ನಡೆಯಲಿಲ್ಲ. ಮತ್ತು ಒಂದು ಲಕ್ಷ ಜನ ರೈತರನ್ನು ಕರೆದುಕೊಂಡು ಬಂದು ವಿಧಾನಸೌಧ ಮುತ್ತಿಗೆ ಹಾಕತಕ್ಕಂಥ ಪ್ರಯತ್ನ ಮಾಡಿದರೂ ಈ ನಾಡಿನ ರೈತರ ಕೂಗು ಈ ಮೂರನೇ ಮಹಡಿಯಲ್ಲಿರತಕ್ಕಂಥ ರಾಜಮಹಾರಾಜರುಗಳಿಗೆ ತಿಳಿಯಲಿಲ್ಲ. ರೈತರನ್ನು ನಿರ್ಲಕ್ಷಿಸಿ ಅವರ ಶಾಪಕ್ಕೆ ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರಪಾಟೀಲರು ಗುರಿಯಾಗಿ ಅಧಿಕಾರವನ್ನು ಕಳೆದುಕೊಂಡರು. ಹಿಂದುಳಿದ ವರ್ಗದಿಂದ ಬಂದಂತಹ ಬಡವರ ಬಗ್ಗೆ ರೈತರ ಬಗ್ಗೆ ಕೂಲಿಕಾರ್ಮಿಕರ ಬಗ್ಗೆ ಹರಿಜನ ಗಿರಿಜನ ಬಂಧುಗಳ ಬಗ್ಗೆ ಕಳಕಳಿ ಇಟ್ಟಿರತಕ್ಕಂಥ ಒಬ್ಬ ವ್ಯಕ್ತಿ ಮುಖ್ಯಮಂತ್ರಿಯಾಗಿ ಬಂದಂತಹ ಸಮಯದಲ್ಲಿ ನಾವು ಆಸೆ ಇಟ್ಟುಕೊಂಡಿದ್ದೆವು ನಮ್ಮ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿ ಬಂದರು ಎಂದು ಅನೇಕ ಬಾರಿ ಈ ಸದನದಲ್ಲಿ ವಿನಂತಿ ಮಾಡಿ ಈ ರಾಜ್ಯದ ರೈತರಿಗೆ ಬರಗಾಲಕ್ಕೆ ತುತ್ತಾಗಿದ್ದಾರೆ ಅವರಿಗೆ ನೆರವು ಸಿಗಬೇಕೆಂದು ಹೇಳಿದಾಗ, ಅವತ್ತು ವಿರೋಧಪಕ್ಷದ ನಾಯಕರಾಗಿದ್ದ ಡಿ.ಬಿ. ಚಂದ್ರೇಗೌಡರು, ವಾಟಾಳ್ ನಾಗರಾಜ್‌ರವರು, ನಾನು ಬೈರೇಗೌಡರು, ಸನ್ಮಾನ್ಯ ಬಂಗಾರಪ್ಪನವರ ನಾಯಕತ್ವದಲ್ಲಿ 21ನೇ ಸೆಪ್ಟೆಂಬರ್ 91ರಂದು ಪ್ರಧಾನ ಮಂತ್ರಿಗಳನ್ನು ಭೇಟಿಮಾಡಿದೆವು. ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರ ದಿನಾಂಕ 2-10-89ಕ್ಕೆ ಸಹಕಾರ ಸಂಘಗಳಲ್ಲಿ ಮಾಡಿರತಕ್ಕಂಥ ಸಾಲ ಮನ್ನಾ ಮಾಡುತ್ತೇವೆಂದು, ಆ ಸಾಲ ಮನ್ನಾ ಯೋಜನೆ ಅನೇಕ ಜನ ಬಡವರಿಗೆ ಸಿಕ್ಕಿಲ್ಲ ನೇಕಾರರಿಗೆ ಸಿಕ್ಕಿಲ್ಲ, ಕೃಷಿ ಕಾರ್ಮಿಕರಿಗೆ ಸಿಕ್ಕಿಲ್ಲ ಈ ಷರತ್ತುಗಳಿಂದ ಆ ಷರತ್ತುಗಳನ್ನು ತೆಗೆದು ಹಾಕಿ ರೈತನಿಗೆ ನೆರವು ಕೊಡಬೇಕೆಂದು ಮಾಡಿದ ಒಕ್ಕೊರಲಿನ ಮನವಿಗೆ ನಾವೆಲ್ಲಾ ಸಹಿ ಮಾಡಿ ಪ್ರಧಾನ ಮಂತ್ರಿಗಳಿಗೆ ಕೊಟ್ಟಿದ್ದೇವೆ. ನಾನು ಈ ಸಮಸ್ಯೆಯನ್ನು

ಬಗೆಹರಿಸುತ್ತೇನೆ, ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎನ್ನತಕ್ಕಂಥ ಭರವಸೆಯನ್ನು ಸನ್ಮಾನ್ಯ ಪ್ರಧಾನ ಮಂತ್ರಿಗಳು ಕೊಟ್ಟರು. ಆದರೆ ಅವರ ಕಾಲದಲ್ಲೂ ಇದು ಸಹಿ ಆಗಿಲ್ಲ. ಈ ಮಾತನ್ನು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಬೇಕಾದಷ್ಟು ಜನ ರಸ್ತೆಗಳಲ್ಲಿ ತಿರುಗಾಡುತ್ತಿದ್ದ ಪುಡಾರಿಗಳು ಕೋಟ್ಯಾಧಿಪತಿಗಳಾದರು, ಸರ್ಕಾರದ ಬೊಕ್ಕಸ ಲೂಟಿ ಆಯಿತು ಆದರೆ ಈ ನಾಡಿನ ಜನರು ಯಾರಿದ್ದಾರೆ ಅವರನ್ನು ಅಧಿಕಾರಕ್ಕೆ ತಂದಂತಹ ರೈತರ ಕಣ್ಣೀರು ಒರೆಸತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಯಾರೂ ಮಾಡಲಿಲ್ಲ. ಅವನಿಗೆ ಸಾಲ ಮನ್ನಾ ಮಾಡಲಿಲ್ಲ, ಅವನಿಗೆ ನೆರವು ಕೊಡಲಿಲ್ಲ ರೈತನ ಕೂಗು ಅವರಿಗೆ ಕೇಳಿಸಲಿಲ್ಲ. ರೈತರನ್ನು ನಿರ್ಲಕ್ಷ್ಯ ಮಾಡಿದ್ದಕ್ಕೆ ಎರಡನೆಯ ಬಾರಿಗೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಬಂಗಾರಪ್ಪನವರು ಪದಚ್ಯುತಿಗೊಂಡರು. ನಾನು ಸನ್ಮಾನ್ಯ ವೀರಪ್ಪಮೊಯಿಲಿಯವರಿಗೆ ಒಂದು ಎಚ್ಚರಿಕೆಯ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಟಿ.ಎಂ. ಮಂಜುನಾಥ್:- ಒಂದು ನಿಮಿಷ ತಾವು ಈಲ್ಡ್ ಆಗುವುದಾದರೆ...

ಶ್ರೀ ಬಿ.ಎಸ್. ಯಡಿಯೂರಪ್ಪ:- ಬಂಗಾರಪ್ಪನವರ ಸರ್ಕಾರದಲ್ಲಿ ನೀವು ಮಂತ್ರಿಗಳಾಗಿದ್ದವರು ಶಾಸಕರಾಗಿದ್ದವರು ನಿಮ್ಮ ಅನ್ಯಾಯ ಅದರಲ್ಲಿ ಸೇರಿದೆ. ನಿಮ್ಮ ಮಾತನ್ನು ಕೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ.

ಶ್ರೀ ಟಿ.ಎಂ. ಮಂಜುನಾಥ್:- ಶ್ರೀ ವಿರೇಂದ್ರಪಾಟೀಲರ ಬಗ್ಗೆ ಅವರು ಮಾತನಾಡಿದರು ಅದರ ಬಗ್ಗೆ ನಾನು ಇಲ್ಲಿ ಹೇಳಬೇಕಾಗುತ್ತದೆ. ಅವಕಾಶ ಕೊಡಬೇಕು. ತಾವು ಏನು ಪ್ರಸ್ತಾವನೆ ಮಾಡಬೇಕೋ ಅದನ್ನು ಬಿಟ್ಟು ಬೇರೆ ಕಡೆ ಇವತ್ತಿನ ದಿವಸ ತಾವು ಪ್ರಸ್ತಾವನೆ ಮಾಡುತ್ತಿದ್ದೀರಿ. ಒಂದು ಮಾತು ಬಹಳ ಪ್ರಮುಖವಾದುದನ್ನು ನಾನು ಹೇಳುತ್ತೇನೆ. ಸನ್ಮಾನ್ಯ ವೀರೇಂದ್ರಪಾಟೀಲರು ಈ ರಾಷ್ಟ್ರದ ಜನತೆಗೆ ನಾಡಿನ ಜನತೆಗೆ ಸಾಲ ಮನ್ನಾ ಮಾಡುತ್ತೇನೆ ಎಂದು ಮಾತು ಕೊಟ್ಟು ಅದರಿಂದ ವಿಮುಕ್ತರಾಗಿ ಅಧಿಕಾರವನ್ನು ಕಳೆದುಕೊಂಡರು ಎನ್ನುವಂತಹ ಅಪಾದನೆ ಮಾಡಿದರು. ನಾನು ಅವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಸಾಲ ಮನ್ನಾ ಬಗ್ಗೆ ವಿಶೇಷವಾದ ಪ್ರಸ್ತಾವನೆ ಈ ಸದನದಲ್ಲಿ ನಡೆದಿದೆ. ಸನ್ಮಾನ್ಯ ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರಪಾಟೀಲರು ಸಮಾಧಾನಕರವಾದಂತಹ, ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಂತಹ ವಿಚಾರಗಳನ್ನು ಯಡಿಯೂರಪ್ಪನವರ ಮನಸ್ಸು ಒಪ್ಪುವಂತೆ, ರಾಷ್ಟ್ರದ ರೈತರ ಮನಸ್ಸು ಒಪ್ಪುವಂತೆ ಅವರು ಆಗಲೇ ಹೇಳಿದ್ದಾರೆ. ದಯಮಾಡಿ ಅವರು ಪ್ರಸ್ತಾವನೆ ಮಾಡಬೇಕಾದರೆ ಅಸಂಬಂಧವಾಗಿರತಕ್ಕಂಥ ಇದಕ್ಕೆ ಸಂಬಂಧ ಇಲ್ಲದೆ ಇರತಕ್ಕಂಥ ಮಾತುಗಳನ್ನು ಆಡತಕ್ಕಂಥಾದ್ದು ಈ ಸಭೆಯಲ್ಲಿ ಸಲ್ಲದು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ ವೀರೇಂದ್ರಪಾಟೀಲರು ಅಧಿಕಾರ ಕಳೆದುಕೊಂಡಿದ್ದು ಕೇವಲ ರೈತರ ಶಾಪ ಒಂದೇ ಅಲ್ಲ, ನಾನಾ ಕಾರಣಗಳಿಂದ ಅವರು ರಾಜಿನಾಮೆ ಕೊಟ್ಟರು ಅದರಲ್ಲಿ ನಿಮ್ಮ ಷಡ್ಯಂತರಗಳೂ ಸೇರಿದ್ದವು. ನೀವೂ ಸಹ ಅವರ ರಕ್ಷಣೆ ಮಾಡಲಿಲ್ಲ ಇವೆಲ್ಲವೂ ಸೇರಿಕೊಂಡು ಅವರು ರಾಜೀನಾಮೆ ಕೊಡುವಂತಹ ಪರಿಸ್ಥಿತಿ ಬಂತು. ನಾನು ಇಲ್ಲ ಎಂದು ಹೇಳುವುದಿಲ್ಲ ಒಂದು ಮಾತು ಮಾತ್ರ ಸತ್ಯ. ನಾನು ಏನನ್ನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ಕಳೆದ ಮೂರು ವರ್ಷಗಳಿಂದ ರೈತರ ಮೇಲೆ ಪ್ರಹಾರ ಆಯಿತು. ರೈತನ ಬದುಕನ್ನು ಹಸನು ಮಾಡುವ ಯಾವುದೇ ಪ್ರಾಮಾಣಿಕ ಪ್ರಯತ್ನ ಆಗದೇ ಅವನು ಪ್ರಕೃತಿ ವಿಕೋಪಕ್ಕೆ ಸಿಕ್ಕು ಬರಗಾಲಕ್ಕೆ ಸಿಕ್ಕು ಅತಿವೃಷ್ಟಿಗೆ ಸಿಕ್ಕು ನೆರೆಹಾವಳಿಗೆ ಸಿಕ್ಕು ಕಣ್ಣೀರಲ್ಲಿ ಕೈತೊಳೆಯುತ್ತಿರುವ ಈ ಒಂದು ರೈತಾಪಿ ವರ್ಗವನ್ನು ರಕ್ಷಣೆ ಮಾಡುವುದಕ್ಕೆ ತಾವು ಏನು ಕ್ರಮವನ್ನು ತೆಗೆದುಕೊಂಡಿರಿ ಅದನ್ನು ಹೇಳಬೇಕಾಗುತ್ತದೆ. ಈ ಚರ್ಚೆಗೆ

ಸನ್ಮಾನ್ಯ ಕಂದಾಯ ಸಚಿವರು ಉತ್ತರ ಕೊಟ್ಟರೆ ನಾವು ಒಪ್ಪುವುದಿಲ್ಲ ಏಕೆಂದರೆ, ಇದು ರೈತನ ಬೆಳೆ ನಾಶದ ಬಗ್ಗೆ ಪ್ರಶ್ನೆ. ರಸ್ತೆಗಳು ಸೇತುವೆಗಳು ಕೊಚ್ಚಿಕೊಂಡು ಹೋಗಿವೆ. ಜಾನುವಾರು ನಾಶ ಆಗಿದೆ. ಪ್ರಕೃತಿ ವಿಕೋಪಕ್ಕೆ ಅನೇಕ ತರಹದ ಗೊಂದಲ ವಾತಾವರಣ ಉಂಟಾಗಿದೆ; ಸುಮಾರು 500 ಕೋಟಿ ರೂಪಾಯಿಗಳ ಆಸ್ತಿ ಲುಕ್ಸಾನು ಆಗಿರುವ ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳೇ ಎದ್ದು ನಿಂತುಕೊಂಡು ಇದಕ್ಕೆ ಉತ್ತರವನ್ನು ಕೊಡಬೇಕಾಗಿದೆ. ಕಳೆದ 50 ದಿವಸಗಳಲ್ಲಿ ನೀವು ಏನು ಕಾರ್ಯಕ್ರಮಗಳನ್ನು ರೂಪಿಸಿದ್ದೀರಿ? ಎಷ್ಟು ಪರಿಣಾಮವನ್ನು ಕೊಟ್ಟಿರಿ? ಮುಂದೆ ಏನು ಮಾಡಬೇಕು ಎಂದಿದ್ದೀರಿ? ಇದರ ಬಗ್ಗೆ ಸ್ಪಷ್ಟವಾದ ಉತ್ತರ ಕೊಡದೇ ಇದ್ದರೆ ಯಾವ ಸ್ಥಿತಿ ಸನ್ಮಾನ್ಯ ಬಂಗಾರಪ್ಪನವರಿಗೆ ಬಂತೋ ಅದೇ ಸ್ಥಿತಿ ಸನ್ಮಾನ್ಯ ವೀರಪ್ಪಮೊಯಿಲಿಯವರಿಗೂ ಬರುತ್ತದೆ. ರೈತನ ಶಾಪಕ್ಕೆ ತಾವು ಗುರಿಯಾಗುತ್ತೀರಿ. ಹೆಚ್ಚು ಕಾಲ ರೈತ ಸಂಯಮದಿಂದ, ತಾಳ್ಮೆಯಿಂದ ಮನೆಯಲ್ಲಿ ಕುಳಿತುಕೊಳ್ಳುವುದಿಲ್ಲ. ಯಾವ ರೀತಿ ಒಂದು ಕಟ್ಟೆಯಲ್ಲಿ, ಜಲಾಶಯದಲ್ಲಿ ನೀರುತುಂಬಿ ಅದಕ್ಕೆ ಬೇರೆ ಕಡೆ ನೀರು ಹೋಗುವುದಕ್ಕೆ ಮಾರ್ಗ ಇಲ್ಲದೇ ಹೋದಾಗ ಯಾವ ರೀತಿ ಅದು ಒಡೆದು ಹೋಗುತ್ತದೆಯೋ ಬರ್‌ಸ್ಟ್ ಆಗುತ್ತದೆಯೋ ಅದೇ ರೀತಿ ಕಳೆದ 7-8 ವರ್ಷದಲ್ಲಿ ರೈತನ ಭಾವನೆಗಳಿಗೆ ನಿಮ್ಮ ಸರ್ಕಾರವೂ ಸ್ಪಂದಿಸದೇ ಅವನಿಗೆ ನೆರವು ಕೊಡದೇ ಅವನು ಉಸಿರು ಕಟ್ಟುವಂಥ ವಾತಾವರಣ ಏನು ಇದೆ, ಈ ಒಂದು ವಾತಾವರಣದಿಂದ ರೈತ ಬೀದಿಗೆ ಇಳಿದರೆ ಬಹುಶಃ ಅವನ ಶಾಪಕ್ಕೆ ನಿಮ್ಮ ಸರ್ಕಾರವು ತುತ್ತಾಗುತ್ತದೆ. ಅದಕ್ಕೆ ಅವಕಾಶವನ್ನು ಮಾಡಿಕೊಡದೆ ತಾವು ಕಾರ್ಯಕ್ರಮವನ್ನು ರೂಪಿಸಬೇಕು ಎನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ, ಅಧ್ಯಕ್ಷರೆ ನನ್ನ ಮಾತನ್ನು ತಾವು ಕೇಳಬೇಕು ಅಧಿಕಾರಿಗಳು ಕೊಟ್ಟಿರುವ ವರದಿಯಲ್ಲಿ ಅಂಕಿ ಅಂಶಗಳು ಸರಿ ಇಲ್ಲದೆ ಇದ್ದರೂ ಸಹಾ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಅದೇ ರಿಪೋರ್ಟ್ ಕಳುಹಿಸಿಕೊಟ್ಟಿದ್ದಾರೆ. ರಾಜ್ಯದಲ್ಲಿ ಒಟ್ಟು 9 ಜಿಲ್ಲೆಗಳಲ್ಲಿ 81 ತಾಲ್ಲೂಕುಗಳಲ್ಲಿ ನೆರೆಹಾವಳಿಯಿಂದ ರೈತ ಸಂಕಷ್ಟಕ್ಕೆ ಸಿಕ್ಕಿದ್ದಾನೆ ಎನ್ನುವ ಮಾತನ್ನು ಹೇಳಿದ್ದಾರೆ. ರಾಜ್ಯದಲ್ಲಿ ಒಟ್ಟು 306 ಕೋಟಿ ರೂಪಾಯಿ ಲಾಸ್ ಆಗಿದೆ ಎಂದು ತಾವು ಹೇಳಿದ್ದೀರಿ. ಸರ್ಕಾರಿ ಆಸ್ತಿ ಪಾಸ್ತಿ ಇರಬಹುದು, ರೈತನ ಆಸ್ತಿ ಪಾಸ್ತಿ ಇರಬಹುದು ನಾನು ಪ್ರಾರಂಭದಲ್ಲಿ ಹೇಳಿದ್ದೇನೆ. ಈ ಅಂಕಿ ಅಂಶಗಳು ಸರಿಯಿಲ್ಲ ಎಂದು ಏಕೆಂದರೆ ಈ ಒಂದು ಮುಖ್ಯಮಂತ್ರಿ ಸ್ಥಾನ ಬದಲಾವಣೆ ಆದಂಥ ಸಂದರ್ಭದಲ್ಲಿ ಅಧಿಕಾರಿಗಳು ಗೊಂದಲದಲ್ಲಿ ಇದ್ದರು ಯಾರು ಏನು ಮಾಡಬೇಕೋ ತೋಚುತ್ತಾ ಇರಲಿಲ್ಲ, ತಮ್ಮ ಬಗ್ಗೆ ಚಿಂತೆ ಮಾಡುತ್ತಿರುವಂಥ ಕಾಲ ಅದು. ಆ ಟೈಮ್‌ನಲ್ಲಿ ಸರಿಯಾದಂಥ ವರದಿಯನ್ನು ತರಿಸಿಕೊಳ್ಳಲಿಲ್ಲ. ಕೆಲವು ಜಿಲ್ಲಾಧಿಕಾರಿಗಳು, ಕೆಲವು ರೆವಿನ್ಯೂ ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡಿರಬಹುದು. ನಿಮ್ಮ ವರದಿ ಸರಿಯಲ್ಲ ಎನ್ನುವುದಕ್ಕೆ ನಾನು ದಾಖಲೆಯನ್ನು ಕೊಡುತ್ತೇನೆ. ಆ ಲಾಸ್ 306 ಕೋಟಿ ಅಲ್ಲ 500 ಕೋಟಿ ದಾಟುತ್ತದೆ. ಈಗಾಗಲೇ ರೆವಿನ್ಯೂ ಸಚಿವರಿಗೆ ಬಂದಿರುವ ಸಾವಿರಾರು ಪತ್ರಗಳು, ನಮ್ಮ ಹತ್ತಿರ ಇರುವಂಥ ದಾಖಲೆಗಳನ್ನು ಕೊಟ್ಟಾಗ ನಿಮಗೆ ಮನವರಿಕೆಯಾಗಬಹುದು. ಈ ಲಾಸ್ ಎಸ್ಟಿಮೇಟ್ ಸರಿಯಲ್ಲ ಎನ್ನುವ ಮಾತನ್ನು ಹೇಳುತ್ತೇನೆ ಮತ್ತು ಆ ಮಾತಿಗೆ ಸಾಕ್ಷಾಧಾರಗಳನ್ನು ಒದಗಿಸಿಕೊಡುವವನಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ ಕರ್ನಾಟಕ ರಾಜ್ಯದಲ್ಲಿ 2,40,000 ಹೆಕ್ಟೇರು ಬೆಳೆ ನಾಶವಾಗಿದೆ ಎಂದು ಹೇಳಿದ್ದೀರಿ. ಒಟ್ಟು 9 ಜಿಲ್ಲೆಗಳಲ್ಲಿ ಶಿವಮೊಗ್ಗ, ಬಳ್ಳಾರಿ, ಧಾರವಾಡ, ಉತ್ತರ ಕನ್ನಡ, ಚಿತ್ರದುರ್ಗ, ಮೈಸೂರು ಚಿಕ್ಕಮಗಳೂರು, ದಕ್ಷಿಣ ಕನ್ನಡ. ಸನ್ಮಾನ್ಯ ಅಧ್ಯಕ್ಷರೆ ನಾನು ಹೇಳುತ್ತಿದ್ದೇನೆ ದಯಮಾಡಿ ಯಾವುದಾದರೂ ಒಂದು ಜಿಲ್ಲೆಯಲ್ಲಿ ನಮ್ಮ ಶಾಸಕರನ್ನು ಆ ಜಿಲ್ಲೆಯವರನ್ನು ಕರೆದುಕೊಂಡು ಹೋಗಿ ನಿಮ್ಮ ಜಿಲ್ಲಾಧಿಕಾರಿಗಳು, ನಿಮ್ಮ ರೆವಿನ್ಯೂ ಅಧಿಕಾರಿಗಳು ಕೊಟ್ಟಿರುವಂಥ ವರದಿಯಲ್ಲಿ ಬೆಳೆ

ನಾಶ ಆಗಿದೆ ರಸ್ತೆಗಳು ಹೋಗಿದೆ. ಬ್ರಿಡ್ಜ್‌ಗಳು ಹೋಗಿವೆ ಜಾನುವಾರು ಹೋಗಿದೆ. ಈ ವರದಿ ಸರಿ ಇದೆ ಎಂದು ತಾವು ಏನಾದರೂ ಒಂದು ಜಿಲ್ಲೆಯ ಬಗ್ಗೆ ನಮಗೆ ಮನದಟ್ಟು ಮಾಡಿಕೊಟ್ಟರೆ ತಾವು ಹೇಳಿದಂಥ ಮಾತನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಎಲ್ಲರಿಗೂ ಗೊತ್ತಿರುವ ಸಂಗತಿ ಆ ವರದಿ ಸರಿಯಲ್ಲ ಎಂದು ಹೇಳಿ. ನಿಮ್ಮ ವರದಿ ಪ್ರಕಾರ ಎರಡು ಲಕ್ಷ ನಲವತ್ತು ಸಾವಿರ ಹೆಕ್ಟೇರು ಬೆಳೆ ನಾಶ ಆಗಿದೆ ಎಂದು ಹೇಳಿದ್ದೀರಿ. ನನ್ನ ಪ್ರಕಾರ ಇದು ಐದುಲಕ್ಷ ಹೆಕ್ಟೇರಿಗೂ ಹೆಚ್ಚು ನಾಶ ಆಗಿದೆ. ಈ ಅಂಶಗಳು ಕಡಿಮೆಯಾಗಿದೆ ಅದಕ್ಕೂ ಕಾರಣ ಇದೆ. ನೀವು ಏನು ಹೇಳಿದ್ದೀರಿ, ಸಣ್ಣ ರೈತ, ಅತಿ ಸಣ್ಣ ರೈತ ಯಾರು ಇದ್ದಾರೆ ಅವರ ವರದಿಯನ್ನು ಮಾತ್ರ ನಿಮ್ಮ ಅಧಿಕಾರಿಗಳು ಕಳುಹಿಸಿಕೊಟ್ಟಿದ್ದಾರೆ. ಸಣ್ಣ, ದೊಡ್ಡ ರೈತ ಎಂದು ಹೇಳಿ ಅದನ್ನೂ ವಿಂಗಡಿಸಿದ್ದೀರಿ. ನವೆಂಬರ್ ತಿಂಗಳಿನಲ್ಲಿ ಕಟಾವು ಆಗಿದ್ದಂಥ ಬಣವೆಗಳು, ನಮ್ಮ ಪೌರಾಡಳಿತ ಸಚಿವರು ಮಾನ್ಯ ಚೌಡಾರೆಡ್ಡಿಯವರು ನಮ್ಮ ತಾಲ್ಲೂಕಿನ ಮರದ ಕೆರೆಗೆ ಬಂದಿದ್ದರು. ಸನ್ಮಾನ್ಯ ರಂಗನಾಥರವರೇ ಕಿಟ್ಟದಹಳ್ಳಿ, ಮಡ್ಡಿಕೋಟೆ ಭಾಗದಲ್ಲಿರುವ ಸಾವಿರಾರು ಬಣವೆಗಳು ಕೊಚ್ಚಿಕೊಂಡು ಹೋಗಿ ಮರದಕೆರೆಗೆ ಬಂದು ನಿಂತಿತ್ತು. ಲಕ್ಷಾಂತರ ಜನ ಅದನ್ನು ನೋಡಿದ್ದಾರೆ. ದೊಡ್ಡ ಜಾತ್ರೆಯಂತೆ ಜನ ಸೇರಿದ್ದರು. ಮಂತ್ರಿಗಳಿಗೆ ನಾನು ಕರೆದುಕೊಂಡು ಹೋಗಿ ತೋರಿಸಿದೆ. ಇದು ಕೇವಲ ನನ್ನ ತಾಲ್ಲೂಕಿನಲ್ಲಿ ಅಲ್ಲ, ಬಳ್ಳಾರಿ ಜಿಲ್ಲೆಗೆ ಹೋಗಿ, ಹೆಲಿಕ್ಯಾಪ್ಟರ್ ಹೋಗಿತ್ತು. ಸುಮಾರು 4-5 ರಿಂದ 8-10 ಅಡಿ ನೀರು ನಿಂತಿತ್ತು ಹಳ್ಳಿಗಳು ನೀರಿನಲ್ಲಿ ಮುಳುಗಿದ್ದವು 3-4 ದಿವಸ ಜನ ಮರಗಳ ಮೇಲೆ, ಮನೆಗಳ ಮೇಲೆ ನಿಂತಿದ್ದರು. ಅವರನ್ನು ರಕ್ಷಣೆ ಮಾಡುವಂಥ ಪ್ರಯತ್ನ ಮಾಡಿದ್ದಾರೆ. ದೋಣಿಗಳನ್ನು ತೆಗೆದುಕೊಂಡು ಹೋಗಿದ್ದೀರಿ, ತಾವು ಯೋಚನೆ ಮಾಡಿ, ಯಾವ ಭಾಗದಲ್ಲಿ 5-6 ದಿವಸ 8-10 ಅಡಿ ನೀರು ನಿಂತಿರುತ್ತದೆ. ಅಲ್ಲಿ ಬಣವೆಗಳು ಉಳಿಯುತ್ತದೆಯೇ, ಬೆಳೆ ಉಳಿಯುತ್ತದೆಯೇ ಜಾನುವಾರು ಉಳಿಯುತ್ತವೆಯೇ ಭಗವಂತನ ಇಚ್ಛೆ ಹೆಚ್ಚು ಸಾವು ಆಗಿಲ್ಲ, ಆ ಒಂದು ವಾತಾವರಣ ಗೊತ್ತಾದ ತಕ್ಷಣ ಓಡಿ ಬಂದರು, ಹೊರಗೆ ಬಂದು ಉಳಿದುಕೊಂಡರು. ನಾವು ದೇವರ ರಕ್ಷಣೆಗೆ ಅಚ್ಚರಿಪಡಬೇಕು. ಆದರೆ ಒಟ್ಟು ನಾಶವಾಗಿದೆ ಎಂದು ನೋಡಬೇಕು. ಇಂಥ ವಿಚಾರಗಳಲ್ಲಿ ಬರೀ ಸರಕಾರವನ್ನು ದೂರುವುದರಲ್ಲಿ ಯಾವುದೇ ಸಮಸ್ಯೆಗಳು ಬಗೆಹರಿಯುವುದಿಲ್ಲ. ಕಳೆದ ಶತಮಾನಗಳಲ್ಲಿ ಕಂಡರಿಯಲಾರದಂತ ನೆರೆಹಾವಳಿ ಬಂದಾಗ ಯಾವ ರೀತಿಯಾಗಿ ಈ ಸರಕಾರದವರು ಜನತೆಗೆ ಸ್ಪಂಧಿಸಬೇಕು? ತಮ್ಮ ಎಲ್ಲಾ ಕೆಲಸಕಾರ್ಯಗಳನ್ನು ಬದಿಗೊತ್ತಿ, ತಮ್ಮ ರಾಜಕೀಯ ಗೊಂದಲುಗಳು ಏನೇ ಇದ್ದರೂ ಕೂಡ ಅವುಗಳನ್ನು ಬದಿಗಿಟ್ಟು ಈ ಬಗ್ಗೆ ಆದ್ಯಗಮನ ಕೊಡಬೇಕಾಗಿತ್ತು. ಒಂದು ವಿಚಾರವನ್ನು ನಾನು ಶ್ಲಾಘನೆ ಮಾಡುತ್ತೇನೆ. ಆಗತಾನೆ ಮಂತ್ರಿಮಂಡಳವನ್ನು ಹೊಸದಾಗಿ ರಚನೆ ಮಾಡಿದ್ದರು. ಅವರು ಮೊದಲ ದಿವಸವೇ ಪ್ರಮಾಣ ವಚನ ಸ್ವೀಕಾರ ಮಾಡುತ್ತಿದ್ದ ಹಾಗೆಯೇ ನೀವು ನಿಮ್ಮ ಸಚಿವರುಗಳನ್ನು ಬೇರೆ ಬೇರೆ ಜಿಲ್ಲೆಗಳಿಗೆ ಕಳುಹಿಸಿಕೊಟ್ಟಿದ್ದೀರಿ. ಅವರೆಲ್ಲರಿಗೂ ಎಲ್ಲಾ ಜಿಲ್ಲೆಗಳಿಗೆ ಹೋಗಿ ಪರಿಸ್ಥಿತಿಯನ್ನು ನೋಡಿಕೊಂಡು ಬಂದಿದ್ದಾರೆ. ಆದರೆ ಅದಕ್ಕೆ ಪರಿಹಾರವನ್ನು ಒದಗಿಸಿಕೊಡತಕ್ಕಂಥ ಪ್ರಾಮಾಣಿಕ ಪ್ರಯತ್ನ ಏನಾದರೂ ಆಗಿದೆಯೇ? ಯಾವ ರೀತಿಯಾಗಿ ನೀವು ಅವರಿಗೆ ಪರಿಹಾರವನ್ನು ಕೊಟ್ಟಿದ್ದೀರಿ? ಸುಮಾರು 82 ಹಳ್ಳಿಗಳು ಸಂಪೂರ್ಣವಾಗಿ ನೀರಿನಲ್ಲಿ ಮುಳುಗಿ ಹೋದುವು. ಈ ತರಹದಲ್ಲಿ ಮುಳುಗಿ ಹೋದ ಹಳ್ಳಿಗಳನ್ನು ಬೇರೆ ಕಡೆಗೆ ಶಿಫ್ಟ್ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮಗಳನ್ನು ರೂಪಿಸಿದ್ದೀರಾ? ಈ ಬಗ್ಗೆ ಶಾಶ್ವತವಾಗಿ ಸಮಸ್ಯೆಯನ್ನು ಬಗೆ ಹರಿಸುವ ದೃಷ್ಟಿಯಿಂದ ಯಾವ ಯೋಜನೆಗಳು ನಿಮ್ಮ ಮುಂದೆ ಇವೆ? 421 ಸಾವಿರ ಜಾನುವಾರುಗಳನ್ನು ನೀವು ಕೊಟ್ಟಿದ್ದೀರಿ. ಆದರೆ ಅದರ ಹತ್ತು ಪಟ್ಟು ಜಾಸ್ತಿ ಸತ್ತು ಹೋಗಿರಬಹುದು. ಬಳ್ಳಾರಿಯಲ್ಲಿ ಎಷ್ಟು ಸಾವಿರಾರು ಕುರಿಗಳು

ನೀರಿನಲ್ಲಿ ತೇಲಿ ಹೋಗಿವೆ ಎಂಬ ಬಗ್ಗೆ ಅಂಕಿಅಂಶಗಳನ್ನು ಬೇಕಾದರೆ ನಾನು ಕೊಡುತ್ತೇನೆ. ನಿಮ್ಮ ಪ್ರಕಾರ ಸಂಪೂರ್ಣವಾಗಿ ಮನೆಗಳು ನಾಶವಾಗಿರುವುದು 55,320 ಮಾತ್ರ. ಹಾಗೆ ನೆಲ ಸಮವಾದ ಮನೆಗಳನ್ನು ಕಟ್ಟಿದ್ದೀರಾ? ಈಗಾಗಲೇ ನಮ್ಮ ಮುಖ್ಯಮಂತ್ರಿಗಳು ಹೇಳಿದ್ದಾರಲ್ಲ, ಆಶ್ರಯ ಯೋಜನೆಯಡಿಯಲ್ಲಿ ನಾಳೆಯಿಂದಲೇ ಕಟ್ಟಿಕೊಡುವುದಕ್ಕೆ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದರು, ಹೇಳಿ 50 ದಿವಸಗಳು ಆಯಿತು, ಮನೆಗಳನ್ನು ಕಟ್ಟಿಕೊಡುವ ಯಾವ ಕೆಲಸವೂ ಪ್ರಾರಂಭವಾಗಿಲ್ಲ. ಆಶ್ರಯ ಯೋಜನೆಯಲ್ಲಿ ನೀವು 15 ಸಾವಿರ ರೂಪಾಯಿಗಳನ್ನು ಕೊಡುತ್ತೀರಿ. ಅದು ಸಾಕಾಗುತ್ತದೆಯೇ? ಕಂಟ್ರಾಕ್ಟರ್‌ಗಳೇ 20 ಸಾವಿರ ಕೇಳುತ್ತಾ ಇದ್ದಾರೆ. ಪೂರ್ಣವಾಗಿ ಮನೆಗಳು ಹಾಳಾಗದಿದ್ದಲ್ಲಿ ಅವುಗಳಿಗೆ 2-3 ಸಾವಿರ ರೂಪಾಯಿಗಳೆಂದು ಮಾಡಿದ್ದೀರಿ. ಎರಡು ಸಾವಿರ ನಗದಾಗಿ ಮತ್ತು ಸಾಮಗ್ರಿಗಳನ್ನು ಕೊಳ್ಳಲು ಮೂರು ಸಾವಿರ ಕೊಟ್ಟರೆ ಸಾಕೆ? ನೀವು ಬಡವರಿಗೆ ಈ ರೀತಿಯಲ್ಲಿ ಭಿಕ್ಷೆ ಕೊಡುತ್ತಾ ಇದ್ದೀರಾ? ನೀವು ಕೊಡುವ ಐದು ಸಾವಿರ ರೂಪಾಯಿಗಳಲ್ಲಿ ಒಂದು ಗೋಡೆ ಕಟ್ಟಲು ಕೂಡ ಆಗಲಾರದು. ಯಾರು ಹಲವಾರು ವರ್ಷಗಳಿಂದ ಚಿಕ್ಕಮನೆಗಳನ್ನು ಕಟ್ಟಿಕೊಂಡಿದ್ದಾರೆ, ಅವರುಗಳು ಹೆಚ್ಚಾಗಿ ಹರಿಜನಗಿರಿಜನರು ಬಡವರು, ಕೂಲಿಗಾರರಾಗಿದ್ದಾರೆ. ಹರಿಜನ-ಗಿರಿಜನರ ಉದ್ಧಾರವನ್ನು ಮಾಡುತ್ತೇವೆಂದು ಹೇಳಿ ಕೊಳ್ಳುವವರು ನೀವುಗಳು. ಮಳೆಯಿಂದಾಗಿ ಅವನ ಮನೆ ಹೋಗುವುದರ ಜೊತೆಗೆ ಆತನು ದುಡಿದು ಮಾಡಿದ ತಟ್ಟೆ, ಬಟ್ಟೆ, ಎಲ್ಲವನ್ನೂ ಕಳೆದುಕೊಂಡಿದ್ದಾನೆ. ಇಷ್ಟೆಲ್ಲಾ ಇದ್ದೂ ಕೂಡ ನೀವುಗಳು ಅಂಥವರಿಗೆ 5 ಸಾವಿರ ರೂಪಾಯಿಗಳನ್ನು ಭಿಕ್ಷೆಯಾಗಿ ಕೊಡಿತ್ತಿದ್ದೀರಿ ಇದರಿಂದ ಆತನ ಉದ್ಧಾರ ಸಾಧ್ಯವೇ? ನೀವು ಈ ರೀತಿಯಲ್ಲಿ ರೈತರಿಗೆ ಕೊಡುವ ಪರಿಹಾರವು ಸಾಕೆ? ಇನ್ನು ಬೆಳೆ ನಾಶದ ಬಗ್ಗೆ 500 ರೂಪಾಯಿಗಳನ್ನು ಒಂದು ಹೆಕ್ಟೇರ್‌ಗೆ ಎಂದು ಮಾಡಿದ್ದೀರಿ. ಮಾನ್ಯ ಕಂದಾಯ ಸಚಿವರು ಕೂಡ ಕೃಷಿಕರು, ಅವರಿಗೆ ವಿಷಯಗಳು ಗೊತ್ತಿವೆ. ಒಂದು ಎಕರೆ ಹತ್ತಿ ಬೆಳೆಯಲು ಎಷ್ಟು ಬೇಕಾಗುತ್ತದೆ, ಇತರ ಬೆಳೆಗಳನ್ನು ಬೆಳೆಯಲು ಎಷ್ಟು ಬೇಕಾಗುತ್ತದೆ ಎಂಬುದನ್ನು ಅವರು ಬಲ್ಲರು. ಈ ಅಧಿಕಾರ ಸ್ಥಾನವೇನೂ ಯಾರಿಗೂ ಶಾಶ್ವತವಲ್ಲ. ತಾವುಗಳು ಮುಖ್ಯಮಂತ್ರಿಗಳ ಮೇಲೆ ಪ್ರಭಾವಬೀರಿ ಈ ನಾಡಿನ ರೈತರಿಗೆ ನೆರವು ಕೊಡುವುದಕ್ಕೆ ನಿಮ್ಮಿಂದ ಸಾಧ್ಯವೆ? ಇಲ್ಲವಾದಲ್ಲಿ ತಾವುಗಳು ಹಿರಿಯ ಸಚಿವರಾಗಿ ಅಲ್ಲಿ ಒಂದು ಕ್ಷಣಕಾಲ ಕುಳಿತರೂ ಅದು ಅಪರಾಧವಾಗುತ್ತದೆ. ಏಕೆಂದರೆ ಒಂದು ಎಕರೆಯಲ್ಲಿ ಹತ್ತಿ, ಗೋಧಿ, ಜೋಳ ಬೆಳೆಯಲು ಎಷ್ಟು ಖರ್ಚು ಬರುತ್ತದೆ? ಕಾಂಪ್ಲೆಕ್ಸ್ ಗೊಬ್ಬರಕ್ಕೆ 800 ರೂಪಾಯಿಗಳು, ಇತರ ಖರ್ಚು ವೆಚ್ಚಗಳು ಎಷ್ಟು ಬರುತ್ತವೆ? ಅದರಲ್ಲಿ ಎರಡು ಕ್ವಿಂಟಾಲ್ ಗೋಧಿ ಬಂದರೆ ಒಂದೂವರೆ ಸಾವಿರ ರೂಪಾಯಿಗಳ ಉತ್ಪನ್ನವಾಯಿತು. ನೀವು ಕೊಡುವ ಪರಿಹಾರ ಎಲ್ಲಿಗೆ ತಗಲುತ್ತದೆ?

ಶ್ರೀ ಬಿ. ಸ್ವಾಮಿರಾವ್:- ನಿಮ್ಮ ಉತ್ತರಪ್ರದೇಶ ಸರಕಾರದವರು ಎಷ್ಟು ಪರಿಹಾರವನ್ನು ಕೊಟ್ಟಿದ್ದಾರೆ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಹತ್ತಿಯ ಹೊಲಕ್ಕೆ ಒಂದು ಲೀಟರ್ ಔಷಧಿ ಸಿಂಪಡಿಸಬೇಕೆಂದರೆ 800 ರೂಪಾಯಿಗಳು ಆಗುತ್ತದೆ. ಎರಡು ಲೀಟರ್‌ಗೆ 1600 ರೂಪಾಯಿಗಳು ಆಯಿತು. ಬಿತ್ತನೆ ಬೀಜ 300-400 ರೂಪಾಯಿಗಳವರೆಗೆ ಆಗುತ್ತದೆ. ಇತರ ಖರ್ಚುಗಳು ಎಂದರೆ ಭೂಮಿಯನ್ನು ಉಳುಮೆ ಮಾಡುವುದು ಇತ್ಯಾದಿಯಾಗಿ ಎಷ್ಟೆಲ್ಲಾ ಖರ್ಚು ಬರುತ್ತದೆ ಎಂಬುದು ತಮಗೆಲ್ಲರಿಗೂ ತಿಳಿದಿದೆ. ಒಂದು ಎಕರೆಗೆ ನಾಟಿ ಮಾಡುವುದಕ್ಕೆ ಇವತ್ತು 500ರಿಂದ 600ರೂ. ತಗೊಳ್ಳಿದ್ದಾರೆ ಗೊತ್ತಿದೆಯೇ? ಒಂದು ಎಕರೆ ಫಸಲನ್ನು ಕೊಯ್ಲುಮಾಡಿ ಬಣವೆ ಹಾಕಿಕೊಡುವುದಕ್ಕೆ 400 ರಿಂದ 500 ರೂ. ಆಗಿದೆ ಗೊತ್ತಿದೆಯೇ? ಆ ಬಣವೆಯನ್ನು ಬಡಿದು ಚೊಕ್ಕಟ ಮಾಡುವುದಕ್ಕೆ ಒಂದು ಎಕರೆಗೆ ಸುಮಾರು 250-300ರೂ ಖರ್ಚಾಗುತ್ತದೆ ಗೊತ್ತೆ? ಇದೆಷ್ಟಾಯಿತು? ನಾಲ್ಕೂವರೆ ಸಾವಿರ ರೂ ವರೆಗೆ ದಾಟುತ್ತದೆ. ಸ್ವಾಮಿ ನಾನು ನಿಮ್ಮನ್ನು ಕೇಳುತ್ತೇನೆ. ಈ ನಾಡಿನ ರೈತ ಆರೇಳು ತಿಂಗಳು ಶ್ರಮಹಾಕಿ ಒಂದೆಕರೆ ಹತ್ತಿ ಭತ್ತ

ಬೆಳೆಯುವುದಕ್ಕೆ ತಲಾ 4-5 ಸಾವಿರ ರೂ ಸಾಲ ತಂದು ಭಿಕ್ಷೆ ತಂದು, ಮನೆ ಮಂದಿಯೆಲ್ಲ ವರ್ಷದ 356ದಿವಸ ದುಡಿದು ಬೆಳೆಗಳು ಕೈಗೆ ಸಿಗಬಹುದೆನ್ನುವ ಸಂದರ್ಭದಲ್ಲಿ ಈ ರೀತಿ ಸರ್ವನಾಶವಾಯಿತಲ್ಲ ಅಂತಹವನಿಗೆ 200 ರೂ ಭಿಕ್ಷೆ ಕೊಡುವುದಕ್ಕೆ ಹೋಗುತ್ತೀರಲ್ಲ ಅದಕ್ಕೆ ನಿಮ್ಮ ಸರ್ಕಾರಕ್ಕೆ ಧಿಕ್ಕಾರ ಅಂತ ಹೇಳಬೇಕಲ್ಲವೆ? ಸದನದ ಒಂದು ಸಮಿತಿ ಮಾಡಿದಿರಿ? ಇವರಿಗೇನು ಪರಿಹಾರ ಕೊಡಬೇಕಾಗಿದೆ, ಯಡಿಯೂರಪ್ಪನವರೇ ರಾಜಕೀಯ ಮಾಡುವುದು ಬೇಡ ಬನ್ನಿ ಹೋಗೋಣ, ವರದಿ ತರೋಣ ಏನೆಲ್ಲ ಪರಿಹಾರ ಒದಗಿಸಿಕೊಡಬೇಕು ಈ ವರ್ಷ, ದುಡ್ಡು ಹೇಗೆ ತರಬೇಕು ಎನ್ನುವ ಪ್ರಾಮಾಣಿಕ ಪ್ರಯತ್ನ ನಿಮ್ಮದೇನಾದರೂ ಆಯಿತ್ತೆ ಆಗಲಿಲ್ಲ. ನೀವೇನು ಹೇಳುತ್ತೀರಿ ಕೇಂದ್ರಸರ್ಕಾರಕ್ಕೆ 200 ಕೋಟಿ ರೂ ಪರಿಹಾರ ಕೇಳಿದ್ದೇವೆ, ಮಗಳ ಹೆರಿಗೆಗೆ ಸೂಲಗಿತ್ತಿ ಸಲುವಾಗಿ ಕಾಯ್ತಿದ್ದರಂತೆ, ಅದಕ್ಕೆ ಸೂಲಗಿತ್ತಿ ಕಾಯಬೇಕಾಗಿಲ್ಲ, ತಾಯಿ ಇದ್ದರೆ ಸಾಕು ಹೆರಿಗೆ ಮಾಡಿಸೋಕೆ. ಕೇಂದ್ರವನ್ನು ತೋರಿಸುತ್ತ ಇದ್ದೀರಿ? ತಾಯಿಯೋ ವ್ಯಾದಿಯಲ್ಲಿರುವ ರಾಜ್ಯ ಸರ್ಕಾರದ ನಿಮ್ಮ ಪಾಲೇನು? ಜವಾಬ್ದಾರಿಯೇನು? 40 ಕೋಟಿ ರೂ ಇದುವರೆಗೂ ನೀವು ಖರ್ಚು ಮಾಡಿಲ್ಲವೇ? ನೀವು ಕೇಳಿರುವುದು ಬರೀ 300 ಕೋಟಿ ನಾನು ಹೇಳುತ್ತೇನೆ 500 ರೂ ಕೋಟಿ ಆದರೂ ಇವರಿಗೆ ಪರಿಹಾರ ಕೊಡುವುದಕ್ಕಾಗುವುದಿಲ್ಲ. ಈ ದಿಕ್ಕಿನಲ್ಲಿ ಕೇಂದ್ರ ಎಷ್ಟು ಕೊಡ್ತು ಸ್ವಾಮಿ? ನಿಮ್ಮ ಪ್ರಧಾನಿ ಬಂದರೇ? ಎಲ್ಲಾ ಸಂದರ್ಭದಲ್ಲಿ ಕೇಂದ್ರದ ನಾಯಕತ್ವ ಅದು ಯಾವುದೇ ಪಕ್ಷ ಇರಬಹುದು, ಕರ್ನಾಟಕ ರಾಜ್ಯವನ್ನು ಮರೆತಿರಿ, ಮಲತಾಯಿ ಧೋರಣೆ ಮುಂದುವರೆದುಕೊಂಡು ಬಂತು. ಈ ಜನ ಕಾಂಗ್ರೆಸಿಗೇ ವೋಟ್ ಕೊಟ್ಟು ಅನೇಕ ಕಾಲದಿಂದ ಅಧಿಕಾರಕ್ಕೆ ತಂದರು. ನಿಮ್ಮ ಪ್ರಭಾವ ಬೀರಿದರೇನು? ಕೇಂದ್ರದಲ್ಲಿ ನಿಮ್ಮ ಸರ್ಕಾರ ಇರಲಿಲ್ಲವೇ? ಏಕೆ ಪ್ರಧಾನಿಯನ್ನು ಕರೆದುಕೊಂಡು ಬರಲಿಲ್ಲ ಅದೇ ಸಂದರ್ಭದಲ್ಲಿ? ಏಕೆ ಹಳ್ಳಿಗಳಿಗೆ ಹೋಗಿ ತಕ್ಷಣ ಪರಿಹಾರ, ಘೋಷಣೆ ಮಾಡಿಸಲಿಲ್ಲ? ಏಕೆ ಈ ನಾಡಿನ ಜನಕ್ಕೆ ನ್ಯಾಯ ಒದಗಿಸಿ ಕೊಡಲಿಲ್ಲ? ನಾನು ಹೇಳ್ತೇನೆ. ನಿಮಗೆ ಇವತ್ತು ಖರ್ಚು ಮುಖ್ಯ ಈ ನಾಡಿನ ರೈತನಲ್ಲ ಆ ಕಳಕಳಿ ನಮಗಿದ್ದಿದ್ದರೆ ಈ ರೀತಿ ನೀವು ಮಾಡ್ತಾ ಇರಲಿಲ್ಲ. ಅಧ್ಯಕ್ಷರೇ, ನಾನು ಒಂದು ಮಾತು ಹೇಳುತ್ತೇನೆ. ಈ ನಾಡಿನ ರೈತ ಬಂದು ವಿಧಾನಸೌಧ ಮುತ್ತಿಗೆ ಹಾಕಬೇಕೆಂದು ನಿರ್ಲಕ್ಷ್ಯ ಮಾಡಿ, ಇಲ್ಲದೇ ಇದ್ದರೆ ಯಡಿಯೂರಪ್ಪನವರೇ ರಾಜಕೀಯ ನೀವೂ ಮಾಡಬೇಡಿ ನಾವೂ ಮಾಡೋದಿಲ್ಲ ಬನ್ನಿ ಕುಳಿತುಕೊಳ್ಳೋಣ ಸದನದ ಒಂದು ಸಮಿತಿ ಮಾಡಿ ಹೋಗೋಣ, ರೈತನ ಪರಿಸ್ಥಿತಿ ತಿಳಿದುಕೊಳ್ಳೋಣ, ಇದನ್ನು ನಾನು ಒತ್ತಾಯ ಮಾಡುತ್ತಿದ್ದೇನೆ. ನಾಳೆ ಬಜೆಟ್ ಅಧಿವೇಶನ ಸೇರುವುದಕ್ಕೆ ಮುಂಚೆ ಗವರ್ನರ್ ಬಂದು ಅಲ್ಲಿ ಕುಳಿತು ಭಾಷಣ ಮಾಡುವುದಕ್ಕೆ ಮುಂಚೆ ಈ ನೆರೆಹಾವಳಿಗೆ ಸಿಕ್ಕಿರುವ ರೈತನಿಗೆ ಪರಿಹಾರ ಒದಗಿಸಿಕೊಡುವ ದೃಷ್ಟಿಯಿಂದ, ನೆರೆಹಾವಳಿಗೆ ಸಿಕ್ಕಿ ನೂರಾರು ಕೆರೆಕಟ್ಟೆಗಳು ಏನು ನಿರ್ನಾಮವಾಗಿವೆ ರಸ್ತೆಗಳು ಹೋಗಿವೆ, ಬ್ರಿಜ್‌ಗಳು ತೇಲಿಕೊಂಡು ಹೋಗಿವೆ, ಇದಕ್ಕೆ ಪರಿಹಾರ ಒದಗಿಸಿಕೊಡುವ ದೃಷ್ಟಿಯಿಂದ ಸರಿಯಾದ ಒಂದು ವರದಿ ಗವರ್ನರ್ ಭಾಷಣದಲ್ಲಿ ಬರದೇ ಇದ್ದರೆ ಅಷ್ಟರೊಳಗೆ ಸದನದ ಸಮಿತಿ ಮಾಡಿ ವರದಿ ತರಿಸಿ ನಮ್ಮೆಲ್ಲರನ್ನೂ ಕನ್ವಿನ್ಸ್ ಮಾಡಿ ನಾವೆಲ್ಲ ಒಂದಾಗಿ ಕಾರ್ಯಕ್ರಮ ರೂಪಿಸುವಂತಹ ಒಂದು ಕಾರ್ಯಕ್ರಮವನ್ನು ತಾವು ರೂಪಿಸದೇ ಇದ್ದರೆ ಬಹುಶಃ ನಾವು ಸದನದ ಒಳಗಡೆ ಬರುವುದಿಲ್ಲ, ಹೊರಗಡೆ ಹೋಗಬೇಕಾಗುತ್ತದೆ. ನಾಡಿನ ರೈತನನ್ನು ಜಾಗೃತಿ ಮಾಡಬೇಕಾಗುತ್ತದೆ, ನಾಳೆಯಿಂದ ಆ ಕೆಲಸ ಪ್ರಾರಂಭಮಾಡಿದ್ದೇವೆ. ಈ ರಾಜ್ಯದ ಪ್ರತಿ ತಾಲೂಕು ಕೇಂದ್ರಕ್ಕೆ ಹೋಗುತ್ತಿದ್ದೇವೆ. ನಂಬಿಕೊಂಡು ಬಂದಂಥ ನಿಮ್ಮ ಕಾಂಗ್ರೆಸ್ ಕೇಂದ್ರದಲ್ಲೂ ಇದೆ ರಾಜ್ಯದಲ್ಲೂ ಇದೆ ಈ ರೀತಿ ಅತಿವೃಷ್ಟಿಗೆ ತುತ್ತಾಗಿ ಇಂತಹ ಒಂದು ನೆರೆಹಾವಳಿಯು ಸಂದರ್ಭದಲ್ಲೂ ಸಹ ಅದು ಕೇಂದ್ರಸರ್ಕಾರ ರಾಜ್ಯ ಸರ್ಕಾರವನ್ನು ನಿಮ್ಮನ್ನು ನಿರ್ಲಕ್ಷ್ಯದಿಂದ ಜೀತದಾಳುಗಳಂತೆ ದುರುಪಯೋಗ ಮಾಡುತ್ತಿದೆ ಎಂದು ಹೇಳಿ ಆ ಜನರನ್ನು ಬೀದಿಗಿಳಿಸುವಂತಹ ಅನಿವಾರ್ಯದ ಕೆಲಸಕ್ಕೆ ನಮ್ಮನ್ನು ಕೈಹಾಕಿಸಬೇಡಿ. ಕೃಷಿ ಸಚಿವ ಹುಚ್ಚಮಾಸ್ತಿಗೌಡರು ಇದ್ದಾರೆ

ಹಿರಿಯರು, ಅನುಭವ ಇದೆ, ಕಷ್ಟಪಟ್ಟು ಶ್ರಮಹಾಕಿ ನಮ್ಮ ಮನೆತನಗಳ ರೈತರ ಪರಿಸ್ಥಿತಿ ಏನೂಂತ ನಮಗೆಲ್ಲ ಅರಿವಿದೆ. ರಾಜಶೇಖರಮೂರ್ತಿಗಳೇ ನಾನು ನಿಮಗೆ ಕೈ ಜೋಡಿಸುತ್ತೇನೆ: ಜಿಲ್ಲಾಧಿಕಾರಿಗಳನ್ನು ಕಳುಹಿಸಿ, ನಾನೂ ಸುಮಾರು 25-30 ಎಕರೆ ಜಮೀನು ಮಾಡುತ್ತಿದ್ದೇನೆ. ನಾನು ನಿನ್ನೆ ಶಿಕಾರಿಪುರಕ್ಕೆ ಹೋಗಿ ಬತ್ತ ಒಕ್ಕಲಾಗಿದೆ, 300 ಚೀಲ ನನ್ನ ಗದ್ದೆಯಲ್ಲಿದೆ. ಮಳೆ ಬಂದು ಬಣವೆಗಳು ನೀರಿನಲ್ಲಿ ನಿಂತ ಪರಿಣಾಮ ಬತ್ತದ ಬೆಲೆ 400ರೂ ಇದ್ದುದು ಸುಗ್ಗಿ ಬಂದಾಗ 300-325 ರೂಗಳಿಗೂ ಯಾರೂ ಕೇಳುತ್ತಾ ಇಲ್ಲ. ನೀರಿನಲ್ಲಿ ಬಣವೆ ನಿಂತು ಚೊಕ್ಕಟ ಮಾಡಿದ ರೈತನ ಬತ್ತವನ್ನು 200 ರೂ.ಗೂ ಕೇಳುವುದಕ್ಕೆ ಯಾರೂ ಇಲ್ಲ, ನಾನು ಒಕ್ಕಲು ಮಾಡಿ ಚೀಲದಲ್ಲಿ ತುಂಬಿದ ಬತ್ತವನ್ನು ಇನ್ನೂ ಮನೆಗೇ ತರಲಿಲ್ಲ. ಗದ್ದೆಯಲ್ಲೇ ಇದೆ. ಯಡಿಯೂರಪ್ಪಂದೇ ಈ ಸ್ಥಿತಿಯಾದರೆ ಸಾಮಾನ್ಯ ರೈತ ಯಾರು ಎರಡು-ಮೂರು ಎಕರೆ, ನಾಲ್ಕು ಎಕರೆ ಇಟ್ಟುಕೊಂಡಿದ್ದಾನೆ, ಅವನ ಬೆಳೆ ನಾಶವಾದರೆ ಅವನು ಯಾವ ರೀತಿ ಬದುಕುವುದಕ್ಕೆ ಸಾಧ್ಯ ಇದೆ, ನಾವು ನೆರವನ್ನು ಕೊಡದಿದ್ದರೆ ನಾವು ಏನು ಮಾಡುವುದಕ್ಕೆ ಸಾಧ್ಯ ಇದೆ? ಈ ಬಗ್ಗೆ ತಾವು ಯೋಜನೆಯನ್ನು ಮಾಡಬೇಕು ಎಂದು ವಿನಂತಿಯನ್ನು ಮಾಡುತ್ತೇನೆ. ರೈತನಿಗೆ ಅನೇಕ ಕಾರಣಗಳಿಂದ ವೈಜ್ಞಾನಿಕವಾಗಿ ಬೆಲೆಯನ್ನು ಕೊಡುವುದಕ್ಕಾಗಲಿಲ್ಲ. ಈ ಸದನದಲ್ಲಿ ಚರ್ಚೆಯಾಯಿತು. ತಂಬಾಕು ಬೆಳೆಗಾರರದು ಒಂದು ವಿಚಿತ್ರವಾದಂಥ ಪರಿಸ್ಥಿತಿ ಇದೆ. ಇವತ್ತು 50-60ರೂ ಒಂದು ಕೆ.ಜಿ.ಗೆ ಕೇಳುತ್ತಿದ್ದವರು 36-40 ರೂಪಾಯಿಗಳಿಗೆ ಕೇಳುವವರು ಇಲ್ಲ. ಅವನು ತಬ್ಬಲಿ ಆಗುತ್ತಿದ್ದಾನೆ. ಒಂದೂವರೆ, ಎರಡು ಸಾವಿರ ರೂಪಾಯಿ ಒಂದು ಕ್ವಿಂಟಾಲ್‌ಗೆ ಹತ್ತಿ ಇದ್ದಂಥದ್ದು ಇಂದು 700-800 ರೂಪಾಯಿಗೆ ಕೇಳುವವರು ಇಲ್ಲ. ಅವನ ಪರಿಸ್ಥಿತಿ ಈ ರೀತಿ ಹದಗೆಡುತ್ತಿದೆ. ನಮ್ಮ ಲೆವಿ ನೀತಿಯಿಂದ 375-400 ರೂಪಾಯಿ ಒಂದುತಿಂಗಳು ಹಿಂದೆ ಬತ್ತದ ಬೆಲೆ ಇದ್ದದ್ದು ಇವತ್ತು 300 ರೂಪಾಯಿಗೆ ಕೇಳುವವರು ಇಲ್ಲ. ರೈತ ಬೆಳೆ ಬೆಳೆದು ತಾನು ಒಕ್ಕಲು ಮಾಡಿ ಮನೆಗೆ ತರುವಂಥ ಸಂದರ್ಭದಲ್ಲಿ ಅವನ ಪರಿಸ್ಥಿತಿ ಈ ರೀತಿಯಾಗುತ್ತಿದೆ. 18 ತಿಂಗಳು ಕಬ್ಬನ್ನು ಬೆಳೆದರೆ ಎರಡು ವರ್ಷವಾದರೂ ಕಟಾವು ಆಗುವುದಿಲ್ಲ. ಪರ್ಮಿಟ್ ಸಿಗುವುದಿಲ್ಲ. 400 ರೂಪಾಯಿ ಕೊಟ್ಟು ಇವತ್ತಿನ ಬೆಲೆ ಗಗನಕ್ಕೆ ಏರತಕ್ಕಂಥ ಸಂದರ್ಭದಲ್ಲಿ, ರಸಗೊಬ್ಬರದ ಬೆಲೆ ಜಾಸ್ತಿಯಾಗಿರತಕ್ಕಂಥ ಸಂದರ್ಭದಲ್ಲಿ ರೈತ ಉಳಿಯುವುದಕ್ಕೆ ಸಾಧ್ಯ ಇಲ್ಲ. ಇಂಥ ಸಂದರ್ಭದಲ್ಲಿ ನಾನು ತಮ್ಮಲ್ಲಿ ಪ್ರಾರ್ಥನೆಯನ್ನು ಮಾಡುತ್ತೇನೆ, ರೈತನಿಗೆ ನೆರವು ಕೊಡುವ ದೃಷ್ಟಿಯಿಂದ ಎಲ್ಲಾ ಪಕ್ಷದವರನ್ನು ಸೇರಿಸಿ ಅಗತ್ಯವಿದ್ದರೆ ಸನ್ಮಾನ್ಯ ರಾಜಶೇಖರಮೂರ್ತಿಯವರೇ, ತಮ್ಮ ಅಧ್ಯಕ್ಷತೆಯಲ್ಲೋ, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲೋ ಒಂದು ಸದನದ ಸಮಿತಿಯನ್ನು ಮಾಡಿ. ಇದು ವಿಶೇಷವಾದಂಥ ಸಂದರ್ಭ. ಬೇರೆ ಸಂದರ್ಭ ಎಂದು ತಾವು ಭಾವಿಸದೆ ಆ ರೈತನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಅವನು ಮೇಲೇಳುವುದಕ್ಕೋಸ್ಕರ, ಅವನ ಕಾಲ ಮೇಲೆ ನಿಲ್ಲುವುದಕ್ಕೋಸ್ಕರ ಅವನ ರಕ್ಷಣೆಗೆ ಬರದಿದ್ದರೆ ಬಹುಶಃ ನೀವು ಮಹಾದ್ರೋಹ ಮಾಡಿದಂತಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ನಿಮ್ಮಲ್ಲಿ ವಿನಂತಿ ಮಾಡುವಂಥದ್ದು ನಿಮ್ಮಗಳಿಗೆ ಕನ್‌ವಿನ್ಸ್ ಆಗದಿದ್ದರೆ, ನಿಮ್ಮ ಕೃಷಿ ಇಲಾಖೆಯ ತಜ್ಞರನ್ನು ಕರೆಯಿಸಿ ಒಂದು ಎಕರೆ ಹತ್ತಿ ಬೆಳೆಯುವುದಕ್ಕೆ ಭತ್ತವನ್ನು ಬೆಳೆಯುವುದಕ್ಕೆ, ರಾಗಿ ಬೆಳೆಯುವುದಕ್ಕೆ, ಜೋಳ ಬೆಳೆಯುವುದಕ್ಕೆ ಏನಾದರೂ ಇವತ್ತಿನ ರೇಟಿನಲ್ಲಿ ಯೋಚನೆಮಾಡಿ. ನಾನು ಅಂದು ಕೊಂಡಿದ್ದೇನೆ, ಕನಿಷ್ಟ ನಾಲ್ಕೂವರೆ ಸಾವಿರ, ಐದು ಸಾವಿರ ಒಂದು ಎಕರೆಗೆ ಖರ್ಚು ಬರುತ್ತದೆ. ಬೇಡ, ನಾಲ್ಕು ಸಾವಿರ ರೂಪಾಯಿ ಎಂದಾದರೂ ತಾವು ನಿಗದಿ ಮಾಡಿ. ಸಣ್ಣ ರೈತ, ದೊಡ್ಡ ರೈತ ಎಂದು ಇಲ್ಲಿ ಭೇದಭಾವನೆಯನ್ನು ಮಾಡದೆ ಪ್ರತಿಯೊಂದು ಎಕರೆಗೂ ಸಹಾ ಆ ರೀತಿ ಎಕರೆಗೆ ನಾಲ್ಕು ಸಾವಿರ ರೂಪಾಯಿಯ ಒಂದು ಪರಿಹಾರವನ್ನು ಸಣ್ಣ, ದೊಡ್ಡ....

ಶ್ರೀ ಎನ್. ಚಿಕ್ಕೇಗೌಡ:- ಯಡಿಯೂರಪ್ಪನವರೇ, ಕಾಸ್ಟ್ ಆಫ್ ಕಲ್ಟಿವೇಷನ್ ಎಲ್ಲಾ ವರ್ಕ್‌ಔಟ್ ಮಾಡಿ ಬಹಳ ವರ್ಷಗಳಿಂದ ಅದು ಅಂಕಿಸಂಖ್ಯೆ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಹೇಳುತ್ತೀರಾ, ಎಕರೆಗೆ ಎಷ್ಟು ಆಗುತ್ತದೆ ಎಂದು.

ಶ್ರೀ ವಾಟಾಳ್ ನಾಗರಾಜ್:- ಹತ್ತಿಗೆ ಎಷ್ಟು ಬೀಳುತ್ತದೆ ಎಂದು ಹೇಳುತ್ತೀರಾ?

ಶ್ರೀ ಎನ್. ಚಿಕ್ಕೇಗೌಡ:- ಗೊತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಮ್ಮ ರಾಜ್ಯದ ದುರ್ದೈವ. ಅವರು ಕೃಷಿ ಸಚಿವರಾಗಿದ್ದರು ಎಂದು ನಾನು ಅಂದುಕೊಂಡಿದ್ದೇನೆ. ಈ ರಾಜ್ಯದಲ್ಲಿ ಕೃಷಿ ಸಚಿವರಾಗಿದ್ದಂಥವರಿಗೆ ಹತ್ತಿ ಬೆಳೆಯಲು ಒಂದು ಎಕರೆಗೆ ಎಷ್ಟು ಖರ್ಚು ಬರುತ್ತದೆ ಎಂದು ಗೊತ್ತಿಲ್ಲ ಎಂದರೆ ಇಂಥವರು ಸಚಿವರಾಗಿದ್ದರು ಎಂದ ಮೇಲೆ ನಮ್ಮ ರಾಜ್ಯದ ರೈತ ಹೇಗೆ ಬದುಕುವುದಕ್ಕೆ ಸಾಧ್ಯ ಇದೆ? ನಾನು ನಿಮ್ಮ ಮೇಲೆ ದೂರುತ್ತಿಲ್ಲ. ಇಲ್ಲಿ ನೀವು ಪ್ರಾಮಾಣಿಕವಾಗಿ ಹೇಳಿದ್ದೀರಿ. ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇಲ್ಲಿ ಪ್ರಶ್ನೆ ಇರುವಂಥದ್ದು ಈ ಅಂಕಿಅಂಶಗಳೆಲ್ಲ ಗೊತ್ತಿದರೂ ಸಹ ರೈತನಿಗೆ ನ್ಯಾಯ ಒದಗಿಸಿಕೊಡುವುದಕ್ಕೆ ನಮ್ಮ ಕೈಯಲ್ಲಿ ಆಗುತ್ತಿಲ್ಲ. ಹಣಕಾಸಿನ ಪರಿಸ್ಥಿತಿ ಸರಿ ಇಲ್ಲದೇ ಇರುವ ಕಾರಣ ಇರಬಹುದು. ಮತ್ತೊಂದು ಇರಬಹುದು. ಅದಕ್ಕೆ....

ಶ್ರೀ ವಾಟಾಳ್ ನಾಗರಾಜ್:- ಚಿಕ್ಕೇಗೌಡರು ಪ್ರಾಮಾಣಿಕವಾಗಿ ಸತ್ಯವನ್ನು ಒಪ್ಪಿಕೊಳ್ಳುತ್ತಿದ್ದಾರೆ. ಆ ಪ್ರಾಮಾಣಿಕತೆಯನ್ನು ಬಿಡುವುದಿಲ್ಲವೇ ಯಡಿಯೂರಪ್ಪನವರು.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ನಮ್ಮ ಕಂದಾಯ ಮಂತ್ರಿಗಳಲ್ಲಿ ವಿನಂತಿ ಮಾಡುವಂಥದ್ದು ಕೆಲವರ ಮನಸ್ಸಿನಲ್ಲಿ ತಾವು ಸ್ಟೇಟ್‌ಮೆಂಟ್ ಮಾಡಿರುವಂಥದ್ದು ನನ್ನ ಗಮನಕ್ಕೆ ಬಂದಿರುವಂಥದ್ದು ಈ ಬೆಳೆ ನಾಶ ಆದವನಿಗೆ ಕ್ರಾಪ್ ಇನ್‌ಶೂರನ್ಸ್ ಸಿಗುತ್ತದೆ ಎಂದು. ತಮಗೆ ಗೊತ್ತಿದೆ. ಕ್ರಾಪ್ ಇನ್‌ಶೂರನ್ಸ್ ಸಿಸ್ಟಂ ಏನು ಎಂದು. ಒಂದು ತಾಲ್ಲೂಕನ್ನು ಒಂದು ಯೂನಿಟ್ ಮಾಡಿದ್ದಾರೆ. ಆ ತಾಲ್ಲೂಕಿನಲ್ಲಿ 60-70 ಪರ್‌ಸೆಂಟ್ ಬೆಳೆ ನಾಶವಾಧವನಿಗೆ ಮಾತ್ರ ಈ ಪರಿಹಾರ ಸಿಗುವಂಥದ್ದು. 2-10-89ಕ್ಕೆ ಮುಂಚೆ ಯಾರು ಕೃಷಿ ಸಾಲವನ್ನು ಪಡೆದಿದ್ದರು ಬ್ಯಾಂಕುಗಳಿಂದ, ಸಹಕಾರಿ ಸಂಘಗಳಿಂದ ಆ ಸಾಲ ಮನ್ನಾ ಯೋಜನೆ ಸರಿಯಾಗಿ ಬರದೇ ಇರುವುದರಿಂದ ಹೊಸದಾಗಿ ಅವನು ಸಾಲ ತೆಗೆದುಕೊಂಡಿರುವ ಪ್ರಶ್ನೆಯೇ ಇಲ್ಲ. ಶೇಕಡ 2 ಭಾಗ ಇನ್‌ಶೂರನ್ಸ್ ಮಾಡಿಲ್ಲ. ಎರಡು ಭಾಗ ಜನ ಸಿಗುವುದಿಲ್ಲ ಕ್ರಾಪ್ ಇನ್‌ಶೂರನ್ಸ್‌ನಲ್ಲಿ. ಸಾಲ ತೆಗೆದುಕೊಂಡವನಿಗೆ ಮಾತ್ರ ಅದು ಕಂಪಲ್‌ಸರಿ. ಆದ್ದರಿಂದ ಕ್ರಾಪ್ ಇನ್‌ಶೂರನ್ಸ್‌ನಿಂದ ಏನು ರೈತನಿಗೆ ನೆರವು ಸಿಗುತ್ತದೆ, ಅದು ನೆರವು ಸಿಗುವುದಿಲ್ಲ. 2-10-89ಕ್ಕೆ ನಾವು ಒಪ್ಪಿಕೊಂಡಂತೆ ಸಾಲ ಮನ್ನಾ ಮಾಡದೇ ಇರುವುದರಿಂದ ಹೊಸದಾಗಿ ಅವನು ಸಾಲ ತೆಗೆದುಕೊಂಡಿಲ್ಲ. ಬೇರೆ ಬೇರೆ ಕಡೆಗೆ ಸಾಲ ತಂದು ಅವನು ಬೆಳೆಯನ್ನು ಬೆಳೆದಿದ್ದಾನೆ. ಅದಕ್ಕಾಗಿ ನಿಮಗೆ ಒತ್ತಾಯ ಮಾಡುವಂಥದ್ದು, ಎಕರೆಗೆ ಅವನು ನಾಲ್ಕು ಸಾವಿರ ರೂಪಾಯಿ ಖರ್ಚು ಮಾಡಿರುವಂಥ ಸಣ್ಣ ರೈತ, ದೊಡ್ಡ ರೈತ ಎಂದು ಭೇದಭಾವನೆಯನ್ನು ಮಾಡದೆ ಅವನಿಗೆ ಪರಿಹಾರವನ್ನು ಕೊಡಬೇಕು. 2-10-89ಕ್ಕೆ ಮುಂಚೆ ನಿಮ್ಮ ಸರ್ಕಾರ, ಕೇಂದ್ರ ಸರ್ಕಾರ ಆಶ್ವಾಸನೆ ಕೊಟ್ಟಂತೆ ರೈತನ ಸಾಲ ಮನ್ನಾ ಯೋಜನೆ ಇವತ್ತು ನೆನೆಗುದಿಗೆ ಬಿದ್ದಿದೆ. ಮಧ್ಯಪ್ರದೇಶದಲ್ಲಿ ಇವತ್ತು ನಮ್ಮ ಸರ್ಕಾರ ಇಲ್ಲ, ಕಿತ್ತು ಹಾಕಿದಿರಿ, ನಿಮ್ಮದೇ ಆಡಳಿತ ಇದೆ. ವೀರಪ್ಪಮೊಯಿಲಿಯವರು ಅಲ್ಲಿ ಕುಳಿತಾಗ ಈ ಒಂದು ಸಾಲ ಮನ್ನಾ ಯೋಜನೆ ಜಾರಿಗೆ ತರಬೇಕು, ಆ ವರದಿಯನ್ನು ತರಿಸಿಕೊಡಿ ಎಂದು ಮುಖ್ಯಮಂತ್ರಿಗಳು ಹೇಳಿದರು. ಅಂದು ವೀರಪ್ಪಮೊಯಿಲಿಯವರು ಸಚಿವರಾಗಿದ್ದಾಗ ಹೇಳಿದರು, ಅದನ್ನು ತರಿಸಿಕೊಟ್ಟೆ. ಚರ್ಚೆ ಮಾಡುತ್ತೇವೆ, ಸಾಲ ಮನ್ನಾ ಮಾಡುವ ಬಗ್ಗೆ ಕಾರ್ಯಕ್ರಮವನ್ನು ರೂಪಿಸುತ್ತೇವೆ ಎಂದು ಹೇಳಿದಿರಿ. ನಾನು ಒತ್ತಾಯ ಮಾಡುತ್ತಿದ್ದೇನೆ. ರೈತನನ್ನು ಋಣಮುಕ್ತನನ್ನಾಗಿ ಮಾಡುವ ದೃಷ್ಟಿಯಿಂದ, ಯಾರು 2.10.89ರಲ್ಲಿ ಸಹಕಾರಿ ಸಂಘದಿಂದ ಸಾಲಗಾರರು ಆಗಿದ್ದಾರೆ, ಅವನ ಸಾಲವನ್ನು ಮನ್ನಾ ಮಾಡಬೇಕು. 2.10.89ರ ಮುಂಚೆ ಸಾಲ

ಮನ್ನಾ ಮಾಡುತ್ತೇವೆ ಎಂದು ನಾವು ಕೂಗಿದೆವು, ನೀವು ಕೂಗಿದಿರಿ. ಸಾಲ ಕಟ್ಟುವಂತಹ ಶಕ್ತಿ ರೈತನಿಗೆ ಇಲ್ಲ ಎಂದು ನಾವು ಕೂಗಿದ್ದೇವೆ. ನೀವೂ ಕೂಗಿದ್ದೀರಿ. ರೈತರ ಹತ್ತಿರ ಕಟ್ಟಲಿಕ್ಕೆ ಹಣ ಇಲ್ಲ. 5 ಸಾವಿರ ಇದ್ದದು 10 ಸಾವಿರ ಆಗಿದೆ. ಐದು ಸಾವಿರಕ್ಕೆ ಐದು ಸಾವಿರ ಬಡ್ಡಿ ಆಗಿದೆ. 2.10.89ಕ್ಕೆ ಮುಂಚೆ ಯಾವ ರೈತ ಸಾಲಗಾರ ಇದ್ದು ಅವನಿಗೆ ನಾಲ್ಕು ಸಾವಿರ ಒಂದು ಎಕರೆಗೆ ಪರಿಹಾರ ಕೊಡುವಂಥದ್ದು ಮತ್ತು ಈ ರೀತಿ ರೈತರ ಸಾಲ ಮನ್ನಾ ಮಾಡುವಂತಹ ಯೋಜನೆಯನ್ನು ಕಾರ್ಯರೂಪಕ್ಕೆ ತರುವಂಥದ್ದು ಮುಖ್ಯ. ಎಲ್ಲೆಲ್ಲಿ ಬ್ರಿಜ್‌ಗಳು, ಕೆರೆಕಟ್ಟೆಗಳು ಒಡೆದು ಹೋಗಿವೆ. ಆ ಆಸುಪಾಸಿನಲ್ಲಿ ತೊಂದರೆ ಆಗಿದೆ. ಸುಮಾರು 250 ಮುನ್ನೂರು ಎಕರೆ, ನಾನ್ನೂರು ಎಕರೆ ಬೆಳೆ ಸಹಿತ ಕೊಚ್ಚಿಕೊಂಡು ಹೋಗಿದೆ. ಒಂದೊಂದು ಆಳು ಉದ್ದ ಗುಂಡಿಗಳು ಬಿದ್ದಿವೆ, ಸಮತಟ್ಟು ಮಾಡುವುದಕ್ಕೆ ಆಗುವುದಿಲ್ಲ. ಎರಡು ಮೂರು ಎಕರೆ ಇರುವಂಥ ರೈತ ಭೂಮಿಯನ್ನು ಮಟ್ಟ ಮಾಡುವುದಕ್ಕೋಸ್ಕರವಾಗಿ 4 ಸಾವಿರ, ಐದು ಸಾವಿರ ರೂಪಾಯಿ ಖರ್ಚು ಮಾಡುವ ಸ್ಥಿತಿ ಬರುತ್ತದೆ. ರೈತನಿಗೆ ಖರ್ಚು ಮಾಡುವಂತಹ ಶಕ್ತಿ ಇಲ್ಲ, ಸಣ್ಣ ರೈತನು ಇದ್ದಾನೆ. ಯಾರ ಕೆರೆಕಟ್ಟೆಗಳು ಒಡೆದು ಹೋಗಿ, ಭೂಮಿ ಕುಸಿದು ಹೋಗಿದೆ, ಆಳ ಬಿದ್ದು ಬೆಳೆ ಬೆಳೆಯುವುದಕ್ಕೆ ಸಾಧ್ಯ ಇಲ್ಲ. ಅವನು ತನ್ನ ಭೂಮಿಯನ್ನು ಸಮತಟ್ಟು ಮಾಡದೇ ಇದ್ದರೆ ಉಳುಮೆ ಮಾಡಲು ಸಾಧ್ಯವಿಲ್ಲ. ಅವನ ಭೂಮಿಯನ್ನು ಮಟ್ಟ ಮಾಡುವುದಕ್ಕೋಸ್ಕರವಾಗಿ ಒಂದು ಕಾರ್ಯಕ್ರಮವನ್ನು ತಾವು ಯೋಚನೆ ಮಾಡಬೇಕಾಗಿದೆ. ಬೆಳೆ ನಾಶವಾಗಿರುವ ಕಡೆ, ಅತಿವೃಷ್ಟಿಗೆ ತುತ್ತು ಆಗಿರುವ ಕಡೆ, ನೆರೆಹಾವಳಿಗೆ ತುತ್ತು ಆಗಿರುವ ಕಡೆ ರೈತನ ನೀರಾವರಿ ತೆರಿಗೆಯನ್ನು ಮನ್ನಾ ಮಾಡಬೇಕಾಗಿದೆ. ಈಗ ಇರುವ ಲೋನನ್ನು ಲಾಂಗ್ ಟರ್ಮ್ ಲೋನನ್ನಾಗಿ ಪರಿವರ್ತನೆ ಮಾಡುತ್ತಿದ್ದೇವೆ ಎಂದು ತಾವು ಹೇಳಬಹುದು. ಸನ್ಮಾನ್ಯ ಅಧ್ಯಕ್ಷರೆ, ಯಾವ ರೈತ ಬೆಳೆಯನ್ನು ಸಂಪೂರ್ಣವಾಗಿ ನಾಶ ಮಾಡಿಕೊಂಡಿದ್ದಾನೆ, ಅವನು ಚೇತರಿಸಿಕೊಳ್ಳುವುದಕ್ಕೆ ಈ ಸಂದರ್ಭದಲ್ಲಿ ಐದು ವರ್ಷ ಬೇಕು ಎನ್ನುವಾಗ ತಾವು ಕನ್‌ವರ್ಷನ್ ಮಾಡುವುದರಿಂದ ಬೇರೆ ರೂಪದಲ್ಲಿ ಸಾಲವನ್ನು ಪಾವತಿ ಮಾಡುವಂತೆ, ಶಕ್ತಿ ಇದೆಯೇ ಯೋಚನೆ ಮಾಡಿ. ಎಲ್ಲಿಂದ ತಂದು ಆತ ಅವನು ಸಾಲ ಕಟ್ಟಬೇಕು? ಆತನ ಲಾಂಗ್ ಟರ್ಮ್ ಲೋನ್ ಎಂದು ಕನ್‌ವರ್ಟ್ ಮಾಡಿದರೂ ಈ ಸಂದರ್ಭದಲ್ಲಿ ಆತನ ಸಮಸ್ಯೆ ಬಗೆಹರಿಯುವುದಿಲ್ಲ. ನೀರಾವರಿ ಅಚ್ಚುಕಟ್ಟು ಇರುವಂತಹ ಕೆಲವು ಕಡೆ ಬೇಸಿಗೆ ಬೆಳೆ ಬೆಳೆಯುವುದಕ್ಕೆ ಅನುಕೂಲ ಇದೆ. ಈ ಸಮಯದಲ್ಲಿ ಉತ್ತಮವಾದ ಬಿತ್ತನೆ ಬೀಜ ಕೊಡುತ್ತೀರಾ? ಒಂದು ಎಕರೆಗೆ ಕೊನೆಯ ಪಕ್ಷ ಎರಡು ಕ್ವಿಂಟಾಲ್ ಕಾಂಪ್ಲೆಕ್ಸ್ ಗೊಬ್ಬರ ಕೊಟ್ಟು ಅವನು ಈ ವರ್ಷ ಬೇಸಿಗೆ ಬೆಳೆ ಬೆಳೆಯುವುದಕ್ಕೋಸ್ಕರ ತಾವು ಏನಾದರೂ ಕಾರ್ಯಕ್ರಮವನ್ನು ಯೋಚನೆ ಮಾಡಬಹುದೇ? ಇನ್ನು ಒಂದು ವಿಷಯ ಗಮನಿಸದೇ ಇರುವಂಥದ್ದು ಎಂದರೆ, ನೆರೆಹಾವಳಿಯಿಂದ ಹಾಳಾದ ಭೂಮಿಯನ್ನು ಸಮತಟ್ಟು ಮಾಡುವಂತಹ ಕಾರ್ಯಕ್ರಮ ಇಲ್ಲ. ಎರಡನೆಯದು ಪಂಪುಸೆಟ್ಟುಗಳು ಹೊರಟು ಹೋಗಿದೆ. ಹಳೆ ಮೈಸೂರು ಜಿಲ್ಲೆ ಇರಬಹುದು, ಶಿವಮೊಗ್ಗ ಜಿಲ್ಲೆ ಇರಬಹುದು, ಬಳ್ಳಾರಿ ಜಿಲ್ಲೆ ಇರಬಹುದು, ಚಿತ್ರದುರ್ಗ ಜಿಲ್ಲೆ ಇರಬಹುದು, ಎಲ್ಲಾ ಕಡೆ ಪಂಪುಸೆಟ್ಟುಗಳು ಸರ್ವನಾಶ ಆಗಿವೆ. ಪಂಪ್‌ಹೌಸ್‌ಗಳು ಬಿದ್ದು ಹೋಗಿವೆ. ಮೋಟಾರ್‌ಗಳು ಬರ್ನ್ ಆಗಿ ತೇಲಿಕೊಂಡು ಹೋಗಿವೆ. ಇದಕ್ಕೆ ಯಾರು ಪರಿಹಾರ ಕೊಡಬೇಕು? ಇದನ್ನು ತಮ್ಮ ಕಾರ್ಯಕ್ರಮದಲ್ಲಿ ರೂಪಿಸಿಲ್ಲ. ಇದಕ್ಕೆ ತಕ್ಷಣ ಜಿಲ್ಲಾಧಿಕಾರಿಗಳಿಗೆ ತಾವು ಸೂಚನೆಯನ್ನು ಕೊಡಬೇಕಾಗಿದೆ. ಈಗ ಒಂದು ವಾರದ ಹಿಂದೆ ಶಿವಮೊಗ್ಗ ಜಿಲ್ಲೆಗೆ ನಿಮ್ಮ ರೆವಿನ್ಯೂ ಸೆಕ್ರೆಟರಿ-2 ಬಂದಿದ್ದರಂತೆ; ನಾನು ಕೇಳುತ್ತೇನೆ. ಅವರಿಗೆ ಏನಾದರೂ ಇದು ಗೊತ್ತೇ? ನಾನು ಯಾರನ್ನೂ ದೂರುವುದಕ್ಕೆ ಇಚ್ಛೆಪಡುವುದಿಲ್ಲ. ಅಲ್ಲಿ ನಾವು ಬಡದಾಡಿಕೊಂಡು ಒಂದಿಷ್ಟು ಪರಿಹಾರ ಕೊಡಿಸುವುದಕ್ಕೆ ಪ್ರಯತ್ನ ಮಾಡಿದ್ದೆವು. ಅಲ್ಲಿ ರೆವಿನ್ಯೂ ಸೆಕ್ರೆಟರಿ-2 ಬಂದ ಮೇಲೆ ಆ ಜಿಲ್ಲಾಧಿಕಾರಿಗಳನ್ನು ಬೆದರಿಸಿ ಬಂದರು. ಹಾಗಾಗಿ ಪರಿಹಾರ ಕೊಡುವುದು. ನಿಂತು ಹೋಗಿದೆ. ಸ್ವಾಮಿ ಹೊಸ ಸರ್ಕಾರ, ಹೊಸ ನಾಯಕತ್ವ ಬಂತು. ಮಾನ್ಯ

ರಂಗನಾಥ್ ಅವರು, ಘೋರ್ಪಡೆಯವರು, ಮಾನ್ಯ ರಾಜಶೇಖರ ಮೂರ್ತಿಯವರು, ಮಾನ್ಯ ಹುಚ್ಚಮಾಸ್ತಿಗೌಡರು, ರೈತನ ಬಗ್ಗೆ ಕಳಕಳಿ ಇರುವಂತಹ ವ್ಯಕ್ತಿಗಳು ಇದ್ದೀರಿ. ಸ್ವಲ್ಪ ಸಮಯವನ್ನು ಕೊಟ್ಟರೆ ಈ ಸಮಸ್ಯೆ ಬಗೆಹರಿಸಬಹುದೆಂದು ತಾಳ್ಮೆಯಿಂದ ಕುಳಿತಿದ್ದೆವು. ಹೊಸ ಸರ್ಕಾರದ ನಾಯಕತ್ವ ಬಂದಾಗ ಕೆಲವು ಸಮಯವನ್ನು ಕೊಡಬೇಕು ಎನ್ನುವ ದೃಷ್ಟಿಯಿಂದ ನಾವು ಸಮಯವನ್ನು ಕೊಟ್ಟರೆ ಅದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ 50 ದಿವಸ ಯಾವುದೇ ಸಮಸ್ಯೆಯನ್ನು ಬಗೆಹರಿಸುವಂತಹ ಪ್ರಾಮಾಣಿಕವಾದ ಪ್ರಯತ್ನವನ್ನು ತಾವು ಮಾಡುತ್ತಾ ಇಲ್ಲ. ಈ ಬೇಡಿಕೆಯನ್ನು ಈಡೇರಿಸುವುದಕ್ಕೆ ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಈ ಬೇಡಿಕೆಯನ್ನು ಈಡೇರಿಸುವುದಕ್ಕೋಸ್ಕರ, ಈ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೋಸ್ಕರ, ಇದಕ್ಕೆ ಪರಿಹಾರ ಹುಡುಕುವುದಕ್ಕೋಸ್ಕರ ಒಂದು ಸದನದ ಸಮಿತಿಯನ್ನು ಈಗಲೇ ತಾವು ಘೋಷಣೆ ಮಾಡಿ ಎಂದು ನಾನು ಪ್ರಾರಂಭದಲ್ಲಿ ಹೇಳಿದೆ. ತಾವು ಈ ಕೆಲಸವನ್ನು ಮಾಡಬೇಕು. ತಾವು ಕೇಳಬಹುದು ಯಡಿಯೂರಪ್ಪನವರೆ, ಹಣ ಎಲ್ಲಿಂದ ತರುವುದು ಎಂದು. ಒಂದು ಸಲಹೆ ಕೊಡುತ್ತೇನೆ. ಕೆಲವರು ಒಪ್ಪಬಹುದು, ಕೆಲವರು ಒಪ್ಪದೇ ಇರಬಹುದು. ಸುಮಾರು 150–200 ಕೋಟಿ ರೂಪಾಯಿ ಬಾಕಿ ಇರುವ ಹೆಂಡದ ದೊರೆಗಳಿಂದ ನಮ್ಮ ಸರ್ಕಾರದ ಬೊಕ್ಕಸಕ್ಕೆ ದುಡ್ಡು ಬಂದಿಲ್ಲ. ಕೋರ್ಟಿನಲ್ಲಿ ಪುಕ್ಕಟೆಯಾಗಿ ಲಿಟಿಗೇಷನ್ ಹಾಕಿಕೊಂಡು ಕುಳಿತಿದ್ದಾರೆ. ನಿಮ್ಮ ಅಧಿಕಾರಿಗಳೇ ದಾಖಲೆಗಳನ್ನು ಕೊಟ್ಟು ಅವರು ದುಡ್ಡನ್ನು ಕೊಡದ ಹಾಗೆ ಹೇಗೆ ಎಂದು ತಂತ್ರವನ್ನು ಮಾಡುತ್ತಾ ಇದ್ದಾರೆ. ಅದನ್ನು ಬಿಗಿ ಮಾಡಿ ವಸೂಲು ಮಾಡುತ್ತೀರಾ? ದೊಡ್ಡ ದೊಡ್ಡ ಉದ್ಯಮಿಗಳಿಂದ ಸುಮಾರು 150–200 ಕೋಟಿ ರೂಪಾಯಿಗಳು ತೆರಿಗೆ ರೂಪದಲ್ಲಿ ಕೆ.ಇ.ಬಿ. ಒಂದಕ್ಕೆ ಬರಬೇಕಾಗಿದೆ. ಆ ಹಣವನ್ನು ವಸೂಲು ಮಾಡುತ್ತೀರಾ? ಕಳೆದ ಎರಡು ವರ್ಷಗಳಲ್ಲಿ ಅನೇಕ ಅವ್ಯವಹಾರ ರಾಜ್ಯದಲ್ಲಿ ಆಗಿ ಸರ್ಕಾರದ ಬೊಕ್ಕಸಕ್ಕೆ ಲೂಟಿ ಆಯಿತು. ಅದನ್ನು ಪಟ್ಟಿ ಮಾಡಿ. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಸರ್ಕಾರದ ಬೊಕ್ಕಸಕ್ಕೆ ಲೂಟಿ ಆಯಿತು ನಾನು ತಮಗೆ ದಾಖಲೆಗಳನ್ನು ಕೊಡುತ್ತೇನೆ. ಇಲ್ಲಿ ಆ ವಿಚಾರ ಚರ್ಚೆ ಮಾಡೋಣ. ಕೆಲವರು ಸಚಿವರು, 25--30 ಕೋಟಿ ರೂಪಾಯಿಗಳನ್ನು ಮಾಡಿರಬಹುದು. ನಾನು ದಾಖಲೆಗಳನ್ನು ಕೊಡುತ್ತೇನೆ, ಇಲ್ಲಿ ನಾನು ಆ ವಿಷಯವನ್ನು ಚರ್ಚೆ ಮಾಡುವವನಿದ್ದೇನೆ. ಇವರಿಗೆ ಏನೇನು ಆಸ್ತಿ ಇದೆ ಎಂದು ನಾನು ತಮಗೆ ಪಟ್ಟಿ ಕೊಡುತ್ತೇನೆ. ಅಂಥವರ ಮನೆ ಜಪ್ತಿ ಮಾಡುವುದಿಲ್ಲ, ಅವರ ಆಸ್ತಿ ಮುಟ್ಟುಗೋಲು ಹಾಕುವುದಿಲ್ಲ ಆದರೆ ಈ ಒಂದು ಪರಿಹಾರಕ್ಕೆ ಐದೈದು ಕೋಟಿ ರೂಪಾಯಿ ಕೊಡಿ ಎಂದು ಹೇಳಿದರೆ, ಅದು ಆಗುವುದಿಲ್ಲ. ದೊಡ್ಡ ದೊಡ್ಡ ಅಧಿಕಾರಿಗಳು ಮೂರು ನಾಲ್ಕು ಮಹಲುಗಳನ್ನು ಮಾಡಿಕೊಂಡಿದ್ದಾರೆ. ಅಂಥ 25 ಜನರ ಪಟ್ಟಿಯನ್ನು ಕೊಡುತ್ತೇನೆ. ಅವರ ಹತ್ತಿರ 25–30 ಕೋಟಿಯಷ್ಟು ಹಣ ಇದೆ. ಅವರ ಮನೆಯನ್ನು ಜಪ್ತಿ ಮಾಡುತ್ತೇವೆ. ನಿಮ್ಮನ್ನು ಹೊರಗೆ ಹಾಕುತ್ತೇವೆ. ಪರಿಹಾರ ನಿಧಿಗೆ ಐದೈದು ಕೋಟಿ ರೂಪಾಯಿಯನ್ನು ಕೊಡಿ ಎಂದು ಹೇಳುತ್ತೀರಾ? ಅದೊಂದು 100 ಕೋಟಿ ರೂಪಾಯಿಯಾಗುತ್ತದೆ. ಅಂದರೆ ಬೇರೆ ಮಾರ್ಗವಿಲ್ಲ. ಯಾವ ಬಡವನಿಗೆ ಸೇರಬೇಕಾಗಿತ್ತೋ ಮತ್ತು ಯಾವ ಬಡ ರೈತನಿಗೆ ಸೇರಬೇಕಾಗಿತ್ತೋ ಅದು ಸೇರುತ್ತಿಲ್ಲ. ಕೂಲಿ ಕಾರ್ಮಿಕನ ಕಣ್ಣೀರನ್ನು ಒರೆಸತಕ್ಕದ್ದಕ್ಕೆ ತೆರಿಗೆಯ ಹಣ ಬರಬೇಕಾಗಿತ್ತೋ; ಆ ಹಣ ಈ ರೀತಿ ಹಗಲು ದರೋಡೆ, ಲೂಟಿಯಾಗಿರುವ ಸಂದರ್ಭ ಇದು ನಮಗೆಲ್ಲರಿಗೂ ಗೊತ್ತಿರುವ ದೃಷ್ಟಿಯಿಂದ ಅವರಿಗೂ ಒಂದು ತರಹ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಂಡಂತೆ ಆಗುತ್ತದೆ. ರೈತರ ನೆರವಿಗೆ ಬಂದಂತಾಗುತ್ತದೆ. ಈ ರೀತಿ ಏನಾದರೂ ಕಾರ್ಯಕ್ರಮವನ್ನು ರೂಪಿಸಬೇಕು. ಕೇಂದ್ರ ಸರ್ಕಾರದಿಂದ ಇದಕ್ಕೆ ಅಗತ್ಯವಾಗಿರುವ ಹಣವನ್ನು ತರಬೇಕಾಗಿದೆ. ಕೇಂದ್ರ ಸರ್ಕಾರದಿಂದ ಇದುವರೆಗೂ ಹಣ ಬಂದಿಲ್ಲ. ನೀವು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ 300 ಕೋಟಿಯಲ್ಲಿ 40 ಕೋಟಿ ಖರ್ಚುಮಾಡಿದರೆ ಆಗುವುದಿಲ್ಲ. ಈ ರೀತಿಯಾಗಿ ಜನರ ಸಮಸ್ಯೆಯನ್ನು

ಬಗೆಹರಿಸುವುದಕ್ಕೆ ವಿಶೇಷವಾದಂತಹ ಪ್ರಯತ್ನವನ್ನು ತಾವು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಒಂದು ರೀತಿಯಲ್ಲಿ ಈ ರಾಜ್ಯವನ್ನು ಹೊರದೇಶಗಳ ಕಪಿಮುಷ್ಠಿಯಲ್ಲಿ ನಮ್ಮನ್ನು ಸಿಕ್ಕಿಸುವಂತಹ ಪ್ರಯತ್ನವಾಗುತ್ತಿದೆ. ಡಂಕಲ್ ಪ್ರಪೋಸಲ್ ಪ್ರಕಾರ ಅಮೆರಿಕಾ ದೇಶದ ತಳಿಗಳನ್ನು ಬಿತ್ತನೆ ಬೀಜಗಳನ್ನು ತರುವಂತಹ ಪ್ರಯತ್ನ ಮಾಡುತ್ತಿದ್ದಾರೆ, ಈ ವಿಷವರ್ತುಲಗಳಿಗೆ ಸಿಕ್ಕಿದರೆ ಬಹುಶಃ ನಮ್ಮ ಭಾರತೀಯ ತಳಿಗಳು ಸಂಪೂರ್ಣ ನಾಶವಾಗುತ್ತದೆ. ಅಮೆರಿಕಾದ ಪೆಪ್ಸಿಕೊ ಕಂಪನಿಯವರು ಒಂದು ಕೆ.ಜಿ. ಟೊಮೊಟೊ ಬೀಜದ ಹೈಬ್ರೀಡ್ ತಳಿಗೆ 17 ಸಾವಿರ ರೂಪಾಯಿಯಂತೆ ಮಾರಾಟ ಮಾಡುತ್ತಿದ್ದಾರೆ. ನಾವು ಅದನ್ನು ಉಪಯೋಗ ಮಾಡಿದರೆ, ಮತ್ತೆ ನಾವು ಟೊಮೊಟೊ ಬೀಜವನ್ನು ಮಾಡಬೇಕೆಂದರೆ ಮತ್ತೆ ಹೊಸದಾಗಿ ಬೀಜವನ್ನು ತೆಗೆದುಕೊಂಡು ಬಂದು ಟೊಮೊಟೊ ಬೆಳೆಯನ್ನು ಬೆಳೆಯಬೇಕು. ಇದರಿಂದ ಭಾರತೀಯ ತಳಿಗಳು ನಾಶವಾಗುತ್ತದೆ. ಅಮೆರಿಕಾ ದೇಶದ ಒಂದು ರೀತಿಯ ಪಿತೂರಿಗೆ ನಾವು ಸಿಕ್ಕಿಕೊಂಡು ನಮ್ಮ ದೇಶವನ್ನೇ ಅಡ ಇಡುವಂತಹ ವಿಚಿತ್ರವಾದಂತಹ ಪರಿಸ್ಥಿತಿ ಬರುತ್ತದೆ. ಈ ರೀತಿ ಹೊರದೇಶದ ಬಿತ್ತನೆ ಬೀಜಗಳಿಗೆ ನಾವು ಮಾರುಹೋದರೆ ಈ ಪರಿಸ್ಥಿತಿ ಬರಬಹುದು. ಬಹುಶಃ ಇದರಲ್ಲಿ ಷಡ್ಯಾಂತರ ಇರಬಹುದು. ಆಹಾರದಲ್ಲಿ ನಾವು ಸ್ವಾಲಂಬಿಗಳಾಗಿದ್ದಾಗ ಹೊರದೇಶಕ್ಕೆ ಭಿಕ್ಷೆ ಕೇಳುವಂತಹ ಪರಿಸ್ಥಿತಿ ಇವರಿಗೆ ಬರಬೇಕು ಅನ್ನುವ ದೃಷ್ಟಿಯಿಂದ ವ್ಯವಸ್ಥಿತವಾಗಿ ಈ ಷಢ್ಯಂತರ ಮತ್ತು ಕುತಂತ್ರ ಇವತ್ತು ನಮ್ಮ ದೇಶದಲ್ಲಿ ನಡೆಯುತ್ತಿದೆ. ಈ ಹಿಂದೆ ಆಫ್ರಿಕಾ ಖಂಡ ಆಹಾರದಲ್ಲಿ ಸ್ವಾಲಂಬನೆಗೆ ಪ್ರಯಕ್ರಿಸಿತ್ತು. ಅಮೆರಿಕಾ ಮತ್ತು ಇತ್ಯಾದಿ ದೇಶಗಳ ಬಿತ್ತನೆ ಬೀಜದ ಹಾವಳಿಯಿಂದ 1985ರಲ್ಲಿ ಸುಮಾರು ಮುಕ್ಕಾಲರಷ್ಟು ಆಹಾರ ಧಾನ್ಯಕ್ಕೋಸ್ಕರ ಹೋರದೇಶಕ್ಕೆ ಹೋಗಿ ಭಿಕ್ಷೆಯನ್ನು ಕೇಳುವಂತಹ ಪರಿಸ್ಥಿತಿ ಬಂತು. ಅಮೆರಿಕಾ ದೇಶ ಒಂದು ರೀತಿಯ ಆಫ್ರಿಕಾಖಂಡವನ್ನು ನುಂಗುವಂತಹ ಪ್ರಯತ್ನ ಮಾಡಿತು. ಕರ್ನಾಟಕ ರಾಜ್ಯದಲ್ಲಿ ಭತ್ತದ ತಳಿಗಳು ಒಳ್ಳೆಯ ಉತ್ತಮವಾದ ತಳಿಗಳಾಗಿವೆ. ಸುಮಾರು 25-30 ಸಾವಿರ ಭತ್ತದ ತಳಿಗಳು ಇದೆ ಎಂದು ಹೇಳುತ್ತಾರೆ. ಆಂಧ್ರದ ನೆಲ್ಲೂರಿನ ಉತ್ಕೃಷ್ಟವಾದಂತಹ ''ಮೊಳಗೊಳ್ಳಲು'' ಎನ್ನುವಂತಹ ಭತ್ತದ ತಳಿ 7 ತಿಂಗಳಲ್ಲಿ ಫಸಲು ಬರುತ್ತದೆ. ಮಲ್ಲಿಗೆ ಹೂನಂತೆ ಅನ್ನ ಆಗುತ್ತದೆ. ಆದರೆ ಅಮೆರಿಕಾ ಈ ಬಿತ್ತನೆ ಬೀಜ ಐ.ಆರ್. 8 ತಳಿ 4 ಇಂಚು ಮೇಲೆ ಬೆಳೆಯುವುದಿಲ್ಲ. ಹೆಚ್ಚು ಬೆಳೆ ಬರುತ್ತದೆ. ಆದರೆ ಜಾನುವಾರುಗಳಿಗೆ ಮೇವು ಸಿಗುವುದಿಲ್ಲ. ಅನೇಕ ರೋಗರುಜಿನಗಳಿಗೆ ಆಹ್ವೈರು ಸಿಗುತ್ತವೆ. ಹೀಗಾಗಿ ನಮ್ಮ ಭೂಮಿಯ ಸತ್ವ ಹಾಳಾಗುತ್ತದೆ.

ಶ್ರೀ ಸಿ. ಬೈರೇಗೌಡ:- ಐ.ಆರ್. 8 ತಳಿ ಅಮೆರಿಕಾದಲ್ಲ. ಇಂಟರ್‌ನ್ಯಾಷನಲ್ ರೈಸ್ ರಿಸರ್ಚ್ ಎಂದು ಮನಿಲಾದಲ್ಲಿದೆ. ಅಲ್ಲಿ ಅದನ್ನು ಇವಾಲ್ವ್ ಮಾಡಿರತಕ್ಕದ್ದು. ಅದು ಅಲ್ಲಿ ತಯಾರಾಗಿರತಕ್ಕಂಥ ತಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆ ಅಂದರೆ ವಿದೇಶಕ್ಕೆ ನಾವೇನು ಮಾರುಹೋಗುತ್ತಿದ್ದೇವೆ, ಅದು ಭತ್ತದ ತಳಿಗೆ ಇರಬಹುದು ಅಥವಾ ಟೊಮೊಟೋ ಬೀಜಕ್ಕೆ ಇರಬಹುದು ಈ ರೀತಿ ಯೋಜನೆ ಏನಿದೆ ಇದರಿಂದ ಸ್ವಾಲಂಭಿಗಳಾಗಿರುವಂತಹ ನಮ್ಮ ರಾಷ್ಟ್ರವನ್ನು ಭಿಕ್ಷುಕರಾಗುವಂತಹ ಪರಿಸ್ಥಿತಿ ತರುವುದಕ್ಕೆ ಪ್ರಯತ್ನ ನಡೆಯುತ್ತಿದೆ. ಅದಕ್ಕೆ ಮಾರುಹೋಗದೆ, ನಮ್ಮಲ್ಲಿರುವಂತಹ ಉತ್ತಮ ತಳಿಗಳು ಏನಿವೆ ಅದಕ್ಕೆ ಹೆಚ್ಚಿನ ಆದ್ಯತೆ ಸಿಗಬೇಕು. ಈ ಕಪಿಮುಷ್ಠಿಗೆ ನಾವು ಸಿಗದಂತೆ ಕಾರ್ಯಕ್ರಮವನ್ನು ಸರ್ಕಾರ ಹಾಕುವುದಕ್ಕೆ ಯೋಜನೆ ಮಾಡಬೇಕೆನ್ನುವ ದೃಷ್ಟಿಯಿಂದ ಮಾತ್ರ ಸಾಧ್ಯವೆಂದು ಈ ಸಂದರ್ಭದಲ್ಲಿ ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನೆರೆಹಾವಳಿಯ ಸಂದರ್ಭದಲ್ಲಿ ಅನೇಕ ಕಡೆ ಹೆಲಿಕ್ಯಾಪ್ಟರಿನಲ್ಲಿ ಹೋಗಿ ಸರ್ವೆಯನ್ನು ಮಾಡಿಕೊಂಡು ಬಂದಿದ್ದೀರಿ. ಒಂದು ರೀತಿಯ ಏರಿಯಲ್ ಸರ್ವೆ ತಾವು ಮಾಡಿದ್ದೀರಿ. ಭೂಮಿಗೆ ಇಳಿದು ವಾಸ್ತವಿಕ ಸ್ಥಿತಿಯನ್ನು ತಿಳಿದುಕೊಳ್ಳುವಂತಹ ಪ್ರಯತ್ನ ಆಗಲಿಲ್ಲ. ನಾನು ಪ್ರಾರಂಭದಲ್ಲೇ ಹೇಳಿದಂತೆ ಈ ದೇಶದ

ಪ್ರಧಾನಿಯವರನ್ನು ನಾನು ಆರೋಪ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ಅವರು ಆಂಧ್ರಕ್ಕೆ ಹೋದರು, ತಮಿಳುನಾಡಿಗೆ ಹೋದರು, ಕೇರಳಕ್ಕೆ ಹೋದರು, ಕರ್ನಾಟಕ ವಿಚಿತ್ರವಾದಂತಹ ಪರಿಸ್ಥಿತಿಗೆ ಸಿಕ್ಕಿದಂತಹ ಸಂದರ್ಭದಲ್ಲಿ ಕರ್ನಾಟಕ ರಾಜ್ಯಕ್ಕೆ ಬಂದು ನಮಗೆ ನ್ಯಾಯ ಒದಗಿಸಿಕೊಡುವಂಥ ಪ್ರಯತ್ನ ಆಗಲಿಲ್ಲ. ನಮ್ಮವರು ಇವರ ಮೇಲೆ ಪ್ರಭಾವಬೀರಿ ನಮ್ಮ ರಾಜ್ಯಕ್ಕೆ ಕರೆದುಕೊಂಡು ಬರುವಂತಹ ಪ್ರಯತ್ನ ಕೂಡ ಅವರು ಮಾಡಲಿಲ್ಲ. ನಮ್ಮ ರಾಜ್ಯದ ರೈತರು ಅನೇಕ ರೀತಿಯಲ್ಲಿ ಪ್ರಹಾರಕ್ಕೆ ತುತ್ತಾಗಿ ಅನ್ಯಾಯಕ್ಕೆ ಒಳಗಾಗುತ್ತಿದ್ದಾರೆ. ಕಾವೇರಿ ವಿವಾದ ಸಂದರ್ಭದಲ್ಲಿ ನಮಗೆ ನ್ಯಾಯ ಸಿಗದೆ ಅನ್ಯಾಯವಾಯಿತು, ಮಹಾಜನ್ ವರದಿಯನ್ನು ಅನುಷ್ಠಾನಕ್ಕೆ ತರುವಂಥ ಸಂದರ್ಭದಲ್ಲಿ ನಮಗೆ ಅನ್ಯಾಯವಾಯಿತು. ಬಚಾವತ್ ಆಯೋಗದಲ್ಲಿ ಕೃಷ್ಣಾ ನದಿ ನೀರನ್ನು ಹಂಚಿಕೊಳ್ಳುವಂಥ ಸಂಧರ್ಭದಲ್ಲಿ ನಮಗೆ ಅನ್ಯಾಯವಾಯಿತು. ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಾಗಲಿಲ್ಲ. ನೆರೆಹಾವಳಿ ಸಂದರ್ಭದಲ್ಲಿ ಮತ್ತೆ ನಮಗೆ ಅನ್ಯಾಯವಾಗುತ್ತಿದೆ. ಇಂತಹ ಒಂದು ಸಂದರ್ಭದಲ್ಲಿ ನಾನು ತಮ್ಮನ್ನು ಒತ್ತಾಯ ಮಾಡುವುದೇನೆಂದರೆ, 200 ಕೋಟಿ ರೂಪಾಯಿಗಳು ಬೇಕೆಂದು ತಾವು ಕೇಂದ್ರ ಸರ್ಕಾರವನ್ನು ಕೇಳಿದ್ದೀರಿ. 50 ದಿವಸ ಕಳೆದು ಹೋಯಿತು. ಮತ್ತೆ ಯಾವಾಗ ನೀವು ಕೇಂದ್ರ ಸರ್ಕಾರದಿಂದ ದುಡ್ಡು ತರಿಸುತ್ತೀರಿ? ಅಥವಾ ರಾಜ್ಯ ಸರ್ಕಾರದಿಂದ ಯಾವಾಗ ದುಡ್ಡನ್ನು ತೆಗೆದಿಡುತ್ತೀರಿ? ರೈತನನ್ನು ಉಳಿಸುವಂಥ ಒಂದು ಕಾರ್ಯಕ್ರಮವನ್ನು ರೂಪಿಸುತ್ತಿದ್ದೀರಾ? ಇವೆಲ್ಲದರ ಬಗ್ಗೆ ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ಸ್ಪಷ್ಟವಾಗಿ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರೆಂದು ಹೇಳಬೇಕು. ನಾನು ಪ್ರಾರಂಭದಲ್ಲಿ ಹೇಳಿದಂತೆ ನೆನೆಗುದಿಗೆ ಬಿದ್ದಿರುವಂಥ ರೈತನ ಕೃಷಿ ಸಾಲ ಏನಿದೆ, ಅದನ್ನು ಮನ್ನಾ ಮಾಡುವುದರ ಬಗ್ಗೆ ನಾವೆಲ್ಲರೂ ಒಟ್ಟಿಗೆ ಕುಳಿತುಕೊಂಡು ಚರ್ಚೆ ಮಾಡಿ ಇದಕ್ಕೊಂದು ಮಂಗಳ ಹಾಡಬೇಕಾಗಿದೆ. ಇದರ ಬಗ್ಗೆ ನಾವು ಅನೇಕ ವರ್ಷಗಳಿಂದ ಹೋರಾಟ ಮಾಡಿಕೊಂಡು ಬರುತ್ತಿದ್ದೇವೆ. ಸಾಲ ಮನ್ನಾ ಮಾಡುವಂಥ ಅಗತ್ಯ ಇದೆ ಎನ್ನುವ ಅರಿವು ತಮಗಿದೆ. ರಸಗೊಬ್ಬರದ ಬಗ್ಗೆ ವಿಶೇಷವಾದಂಥ ಒಂದು ಚರ್ಚೆಯನ್ನು ನಾವು ಮಾಡುವವರಿದ್ದೇವೆ. ಆದರೆ, ಇವೊತ್ತು ಕೇಂದ್ರ ಸರ್ಕಾರದ ಮೇಲೆ ತಾವು ಒತ್ತಡ ತಂದು ರಸಗೊಬ್ಬರ ಬೆಲೆ ಯಾವ ರೀತಿ ಇತ್ತು, ಮೊದಲು ಸಬ್ಸಿಡಿ ಕೊಟ್ಟು ರೈತರ ಸಮೂಹವನ್ನು ಉಳಿಸುವಂಥ ಒಂದು ಪ್ರಯತ್ನ ಏನು ಆಗುತ್ತಿತ್ತು, ಅದೇ ಸಬ್ಸಿಡಿಯನ್ನು ವಾಪಸ್ಸು ಪಡೆದ ನಂತರ 250–300 ರೂಪಾಯಿಗಳಿದ್ದಂಥ ಕಾಂಪ್ಲೆಕ್ಸ್ ಗೊಬ್ಬರ 700–800 ರೂಪಾಯಿಗಳಾಗಿದೆ. ಇದಕ್ಕೆ ಸರ್ಕಾರ ಏನಾದರೂ ಪರಿಹಾರ ಹುಡುಕುತ್ತಿದೆಯೇ? ಕಡಿಮೆ ಬೆಲೆಯಲ್ಲಿಯೇ ರಸಗೊಬ್ಬರ ಸಿಗುವಂಥ ವಿಶೇಷವಾದಂಥ ಒಂದು ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಇನ್ನು ನೀರಾವರಿ ಪಂಪುಸೆಟ್ಟುಗಳಿಗೆ ಪೂರೈಸಲಾಗುತ್ತಿರುವ ವಿದ್ಯುಚ್ಛಕ್ತಿ ತುಂಬಾ ವಿಚಿತ್ರವಾಗಿದೆ. ಕಳೆದ 2–3 ವರ್ಷಗಳಿಂದ ಸಣ್ಣ ರೈತ ಡೋರ್‌ವೇರ್‌ಗಳನ್ನು ಹಾಕಿಕೊಂಡು ವಿದ್ಯುಚ್ಛಕ್ತಿಗೋಸ್ಕರ ಕಾತರನಾಗಿದ್ದಾನೆ. ಆತ ಸಾಲ ಮಾಡಿ ಬೋರ್‌ವೆಲ್ ಹಾಕಿಸಿದ್ದು, ಜನರೇಟರ್ ಇಲ್ಲ. ಬೇರೆ ಬೇರೆ ಕಾರಣಗಳಿಗೋಸ್ಕರ ಇವೊತ್ತು ಆತನಿಗೆ ವಿದ್ಯುಚ್ಛಕ್ತಿ ಪೂರೈಕೆಯ ಕನೆಕ್ಷನ್ ಕೊಟ್ಟಿಲ್ಲ. ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇದೇ ಒಂದು ಪರಿಸ್ಥಿತಿ ಇದೆ. ನಾನು ಮೊದಲೇ ಹೇಳಿದಂತೆ ಹತ್ತಿಗೆ ಸರಿಯಾದಂಥ ಬೆಲೆ ಸಿಗುತ್ತಿಲ್ಲ. ಗುಲ್ಬರ್ಗ ಜಿಲ್ಲೆಯಲ್ಲಿ ಹೋದವರ್ಷ ಬೆಳೆದಂಥ ಬೇಳೆ–ಕಾಳುಗಳಿಗೆ ಒಂದು ವಿಶಿಷ್ಟವಾದಂಥ ರೋಗ ತಗುಲಿ ಬೆಳೆ ಸರ್ವನಾಶವಾಗಿರುವುದರ ಬಗ್ಗೆ ತಮಗೆ ಗೊತ್ತಿದೆ. ಈ ರೀತಿ ಅನೇಕ ಸಮಸ್ಯೆಗಳ ಮಧ್ಯೆ ಜನರು ಕಂಗಾಲಾಗಿರುವಂಥ ಸಂದರ್ಭದಲ್ಲಿ, ಇವೆಲ್ಲಕ್ಕೂ ಸಹ ನ್ಯಾಯ ಒದಗಿಸಿಕೊಡುವಂಥ ಮತ್ತು ರೈತನ ಬದುಕನ್ನು ಸರಿಯಾಗಿ ಉತ್ತಮಪಡಿಸುವುದಕ್ಕೆ ಒಂದು ಕಾರ್ಯಕ್ರಮವನ್ನು ತಾವು ಯೋಜಿಸಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತಾ, ಕರ್ನಾಟಕ ರಾಜ್ಯದಲ್ಲಿ ಆಗಿರುವಂಥ ಅನಾಹುತದ

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಿಂದ ಬಂದವನು. ಇನ್ನೆಲ್ಲಿಯೂ ಆಗದಿರುವ ನೆರೆಹಾವಳಿ ಶಿವಮೊಗ್ಗ ಜಿಲ್ಲೆಯಲ್ಲಾಗಿದ್ದು, ಅನಾಹುತದ ಬಗ್ಗೆ ನಾನು ಒಂದು ಪ್ರಶ್ನೆ ಕೇಳಿದ್ದೆ. ನೆರೆಹಾವಳಿಯಾದಂಥ ಸಂದರ್ಭದಲ್ಲಿ ಸ್ಥಳಕ್ಕೆ ರೆವಿನ್ಯೂ ಸೆಕ್ರೆಟರಿಯವರು ಬಂದಿದ್ದರು, ರೆವಿನ್ಯೂ ಕಮೀಷನರ್ ಬಂದಿದ್ದರು, ಸಚಿವರುಗಳು ಜಿಲ್ಲಾಧಿಕಾರಿಗಳು ಬಂದಿದ್ದರು. ಹತ್ತಾರು ಸಲ ಅನೇಕ ಜನರು ಬಂದು ಹೋದರು. ನಾನು ''ಶಿಕಾರಿಪುರ ತಾಲ್ಲೂಕಿನಲ್ಲಿ ನವೆಂಬರ್ 16, 17 ಮತ್ತು 18ನೇ ತಾರೀಖಿನಂದು ಭಾರಿ ಮಳೆಯಿಂದ ಒಡೆದುಹೋದ ಕೆರೆಗಳೆಷ್ಟು?'' ಎಂದು ಕೇಳಿದೆ. ಅದಕ್ಕೆ ಉತ್ತರವಾಗಿ ಶಿಕಾರಿಪುರ ತಾಲ್ಲೂಕಿನಲ್ಲಿ 105 ಸಣ್ಣ ಮತ್ತು ದೊಡ್ಡ ಕೆರೆಗಳು ಒಡೆದುಹೋಗಿವೆ. ಆ ರೀತಿ ಒಡೆದು ಹೋಗಿರುವ ಕೆರೆಗಳ ಕೆಳಭಾಗದಲ್ಲಿದ್ದಂಥ ರೈತನ ಜಮೀನಿನ ಸ್ಥಿತಿ ಏನು? ಆದ್ಯತೆ ಮೇರೆಗೆ ಈ ಕೆರೆಗಳನ್ನು ತಕ್ಷಣ ದುರಸ್ತಿ ಮಾಡದಿದ್ದರೆ ಏನಾಗುತ್ತದೆ? ಎಂಬುದರ ಬಗ್ಗೆ ಅರಿವಿದೆಯೇ? ಬರೀ ನಮ್ಮ ತಾಲ್ಲೂಕಿನಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಈ ರೀತಿಯಾಗಿದೆ. ಹೀಗಾದರೆ ಬೆಳೆ ಬೆಳೆಯುವುದಕ್ಕೆ ಸಾಧ್ಯವೇ? ಮಳೆಗಾಲದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಬರುವ 2-3 ತಿಂಗಳುಗಳಲ್ಲಿ ತಾವು ಸಮರೋಪಾದಿಯಲ್ಲಿ ಕೆಲಸ ಮಾಡಿಸಬೇಕಾಗುತ್ತದೆ. 65 ರಸ್ತೆಗಳು ಸಂಚಾರ ಮಾಡುವುದಕ್ಕೆ ಸರಿಯಾಗಿಲ್ಲದಿರುವಂಥ ಸ್ಥಿತಿಯಲ್ಲಿವೆ. ನೀವು ಕೊಟ್ಟಿರುವ ಉತ್ತರದ ಪ್ರಕಾರ 9 ಸೇತುವೆಗಳು ಕೊಚ್ಚಿಕೊಂಡು ಹೋಗಿವೆ. ನೀವು ಕೊಟ್ಟಿರುವ ಪರಿಹಾರವೆಷ್ಟು? ನಿಮ್ಮ ಅಧಿಕಾರಿಗಳು ಕೊಟ್ಟಿರುವ ವರದಿ ಪ್ರಕಾರ ಇದಕ್ಕೆ ಪರಿಹಾರವಾಗಿ ಎರಡೂವರೆ ಕೋಟಿ ರೂಪಾಯಿಗಳಿಂದ ಮೂರು ಕೋಟಿ ರೂಪಾಯಿ ಸಿಗಬೇಕಾಗಿದೆ. ಈಗಾಗಲೇ 50ದಿವಸ ಕಳೆದುಹೋಯಿತು. ರೆವಿನ್ಯೂ ಇಲಾಖೆಯಿಂದ ಜಿಲ್ಲಾ ಪರಿಷತ್ತಿಗೆ ಎರಡು ಲಕ್ಷ ರೂಪಾಯಿಗಳನ್ನು, ಲೋಕೋಪಯೋಗಿ ಇಲಾಖೆಗೆ ಎರಡೂವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ ಮತ್ತು ಸಣ್ಣ ನೀರಾವರಿಗಾಗಿ 7 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ನಾನು ನಿನ್ನೆಯ ದಿವಸ ಶಿಕಾರಿಪುರದಲ್ಲಿ ಅಧಿಕಾರಿಗಳ ಸಭೆ ನಡೆಸಿದೆ. ಈಗ ಬಂದಿರುವಂಥ ಕಂಟ್ರಾಕ್ಟರುಗಳಿಗೆ ದುಡ್ಡುಕೊಡದಿರುವ ಕಾರಣದಿಂದಾಗಿ ಕಾಮಗಾರಿ ಕೆಲಸಗಳೆಲ್ಲವೂ ನಿಂತುಹೋಗಿದೆ. ಒಡೆದು ಹೋಗಿರುವ ಕೆರೆಗಳನ್ನು ದುರಸ್ತಿ ಮಾಡಿಸಲು ಸಮರೋಪಾದಿಯಲ್ಲಿ ಕೆಲಸ ಮಾಡದಿದ್ದರೆ, ಸೇತುವೆಗಳನ್ನು ಕಟ್ಟದಿದ್ದರೆ, ರಸ್ತೆಗಳನ್ನು ದುರಸ್ತಿ ಮಾಡಿಸದಿದ್ದರೆ ಬಹುಶಃ ಆ ತಾಲ್ಲೂಕಿನ ರೈತರ ಪರಿಸ್ಥಿತಿ ಏನಾಗಬಹುದೆಂದು ಯೋಚನೆ ಮಾಡಿದ್ದೀರಾ? ಇದೇ ರೀತಿಯ ಪರಿಸ್ಥಿತಿ ತಾವು ಕೊಟ್ಟಿರುವಂಥ ಉತ್ತರದ ಪ್ರಕಾರ ಎಲ್ಲಾ ತಾಲ್ಲೂಕುಗಳಲ್ಲಿಯೂ ಇರುವುದರಿಂದ ಶಿಕಾರಿಪುರ ತಾಲ್ಲೂಕಿನ ಶಾಸಕನಾಗಿ ನಾನು ಒತ್ತಾಯ ಮಾಡುವುದೇನೆಂದರೆ, ದಯಮಾಡಿ ಇದಕ್ಕೆ ಅಗತ್ಯವಿರುವಂಥ ಕನಿಷ್ಠ 1 ಕೋಟಿ ರೂಪಾಯಿಗಳನ್ನು ತಾತ್ಕಾಲಿಕವಾಗಿ ಬಿಡುಗಡೆ ಮಾಡಿ ಸೇತುವೆಗಳನ್ನು, ರಸ್ತೆಗಳನ್ನು ದುರಸ್ತಿ ಮಾಡಿಸಿ ಮತ್ತು ರೈತನಿಗೆ ಪರಿಹಾರ ಕೊಡುವಂಥ ಕೆಲಸ ಪ್ರಾರಂಭವಾಗಬೇಕು. ಶಿಕಾರಿಪುರ ತಾಲ್ಲೂಕಿನಲ್ಲಿ ಯಾವ ಕಾರಣಕ್ಕಾಗಿ ಪರಿಹಾರ ಕೊಡುವುದನ್ನು ಜಿಲ್ಲಾಧಿಕಾರಿಗಳು ನಿಲ್ಲಿಸಿದ್ದಾರೋ ಗೊತ್ತಿಲ್ಲ. ಈಗ ಕೊಡುತ್ತಿರುವಂಥ ಪರಿಹಾರವನ್ನು ತೆಗೆದುಕೊಳ್ಳುವುದಕ್ಕೆ ನಾವು ಸಿದ್ಧವಿಲ್ಲ, ಅದರ ಅಗತ್ಯವೂ ಇಲ್ಲ. ಆದುದರಿಂದ, ಈ ಕುರಿತು ಸದನ ಸಮಿತಿ ಮಾಡಿ ಏನು ಪರಿಹಾರ ಕೊಡಬೇಕೆಂಬುದರ ಬಗ್ಗೆ ತಾವು ಘೋಷಣೆ ಮಾಡುತ್ತೀರಾ? ಕನಿಷ್ಠ ಒಂದು ಎಕರೆಗೆ 4 ಸಾವಿರ ರೂಪಾಯಿಗಳ ಪರಿಹಾರ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಈ ಆಧಾರದ ಮೇಲೆ ಪರಿಹಾರ ಕೊಡುವಂಥ ಕಾರ್ಯಕ್ರಮವನ್ನು ತಾವು ರೂಪಿಸಬೇಕೆಂಬ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಬಳ್ಳಾರಿ ಜಿಲ್ಲೆಯ ಹತ್ತಿಯ ಬೆಳೆಯು ಸಂಪೂರ್ಣವಾಗಿ ನಾಶವಾಗಿದೆ. ನವೆಂಬರ್ ತಿಂಗಳಿನಲ್ಲಿ ಹತ್ತಿಯ ಕೊಯ್ಲು ಪ್ರಾರಂಭವಾಗಬೇಕಾಗಿತ್ತು, ಜನವರಿ ಮತ್ತು ಫೆಬ್ರವರಿ ತಿಂಗಳಿನಲ್ಲಿ ಹತ್ತಿಯನ್ನು ಬಿಡಿಸತಕ್ಕ ವ್ಯವಸ್ಥೆ ಇತ್ತು, ಆದರೆ ಆ ಬೆಳೆ ಇವತ್ತು ಪೂರ್ಣವಾಗಿ ನಾಶವಾಗಿದೆ. ರಾಣೆಬೆನ್ನೂರು ತಾಲ್ಲೂಕಿನಲ್ಲಿ 4-6 ಹಳ್ಳಿಗಳು ನೀರಿನಿಂದ ಆವೃತ್ತವಾಗಿ

ರೈತರಬಳಿ ಇದ್ದಂಥ ಜಾನುವಾರುಗಳು ಸರ್ವನಾಶವಾಗಿದೆ, ಅವರಿಗೆ ಪರಿಹಾರದ ವ್ಯವಸ್ಥೆ ಮಾಡಿಲ್ಲ. ನಾನು ಪ್ರಾರಂಭದಲ್ಲಿ ಹೇಳಿದಂತೆ ಈ ನೆರೆಹಾವಳಿಗೆ ತುತ್ತಾಗಿ ಯಾವ ಊರುಗಳು ಮುಳುಗಡೆಯಾಗಿತ್ತೋ ಅಂಥವುಗಳನ್ನು ಶಿಫ್ಟ್ ಮಾಡುವುದಕ್ಕೋಸ್ಕರ ಕ್ರಮ ರೂಪಿಸಬೇಕು ಎನ್ನತಕ್ಕ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ಅನೇಕ ಜನ ರೈತರ ಬಗ್ಗೆ ಮಾತನಾಡತಕ್ಕಂಥ ಸಂದರ್ಭವಿರುವುದರಿಂದ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈ ರಾಜ್ಯದಲ್ಲಿ ಈ ದೇಶದಲ್ಲಿ ರೈತನ ಬಗ್ಗೆ ನಿರ್ಲಕ್ಷ ತೋರಿಸತಕ್ಕದ್ದು ಆಗುತ್ತಿದೆ. ಇದು ಕೊನೆಯದಾಗಿದೆ. ಏನಾದರೂ ರೈತ ಮತ್ತು ರೈತನ ಮಕ್ಕಳು ಬೆಳೆ ಬೆಳೆಯುವುದನ್ನು ಬಿಟ್ಟು ಕುಳಿತುಕೊಂಡರೆ ನಾವುಗಳು ಹೊರದೇಶಕ್ಕೆ ಆಹಾರಕ್ಕಾಗಿ ಭಿಕ್ಷೆಯನ್ನು ಬೇಡತಕ್ಕಂಥ ಪರಿಸ್ಥಿತಿ ಬಂದೀತು; ತಮಗೆ ಗೊತ್ತಿರುವಂತೆ ರಾಸಾಯನಿಕ ಗೊಬ್ಬರದ ಬೆಲೆಯನ್ನು ಜಾಸ್ತಿ ಮಾಡಿದಮೇಲೆ ಅದರ ಉಪಯೋಗದಲ್ಲಿ ಸುಮಾರು 30-40 ಪರ್‌ಸೆಂಟ್ ಕಡಿಮೆಯಾಗಿದೆ. ಜಾನುವಾರುಗಳ ಸಂತತಿ ಕಡಿಮೆಯಾಗುತ್ತಿದೆ, ರಾಸಾಯನಿಕ ಗೊಬ್ಬರದಿಂದಾಗಿ ರಸಗೊಬ್ಬರ, ಸೊಪ್ಪಿನ, ಸಗಣಿಯ ಗೊಬ್ಬರಗಳನ್ನು ಮಾಡತಕ್ಕದ್ದನ್ನು ರೈತರು ಕೈಬಿಟ್ಟಿದ್ದಾರೆ, ಇಂಥ ಪರಿಸ್ಥಿತಿ ಇರತಕ್ಕಂಥ ಸಂದರ್ಭದಲ್ಲಿ ರೈತರ ಸಮಗ್ರವಾದಂಥ ಸಮಸ್ಯೆಗಳನ್ನು ಪರಿಹರಿಸತಕ್ಕಂಥ ದೃಷ್ಟಿಯಿಂದ ಕಾರ್ಯಕ್ರಮವನ್ನು ರೂಪಿಸಿ ತಾವು ನೆರವನ್ನು ಕೊಡಬೇಕು. ಮತ್ತೆ ತಾವು ಪರಿಹಾರವನ್ನು ಕೊಡತಕ್ಕಂಥ ಸಂದರ್ಭದಲ್ಲಿ ಏನು ಕ್ರಮವನ್ನು ರೂಪಿಸುತ್ತೀರಿ ಅದನ್ನು ಘೋಷಣೆ ಮಾಡಬೇಕು. ಈ ಒಂದು ಹಿನ್ನಲೆಯಲ್ಲಿ ಈ ಸದನದ ಸಮಿತಿಯನ್ನು ಮಾಡಿ ನಾಳೆ ಬರತಕ್ಕ ರಾಜ್ಯಪಾಲರ ಭಾಷಣಕ್ಕಿಂತ ಮೊದಲೇ ಪರಿಹಾರವನ್ನು ಕೊಡತಕ್ಕಂಥ ಕ್ರಮವನ್ನು ರೂಪಿಸದಿದ್ದರೆ ಬಹುಶಃ ರಾಜ್ಯದ ರೈತರು ಮತ್ತೆ ಬೀದಿಗೆ ಇಳಿದು ಹೋರಾಟ ಮಾಡತಕ್ಕ ಪರಿಸ್ಥಿತಿ ಅನಿವಾರ್ಯವಾಗಿ ಬರಬಹುದು. ಅದಕ್ಕೆ ಅವಕಾಶ ಮಾಡಿಕೊಡದೆ ನಾನು ಏನು ಬೇಡಿಕೆಯನ್ನಿಟ್ಟಿದ್ದೇನೆ ಅದು ಆಗಲೇಬೇಕು ಎನ್ನತಕ್ಕದ್ದರ ಬಗ್ಗೆ ಆ ಕಡೆ ಕುಳಿತಿರುವ ಮತ್ತು ಈ ಕಡೆ ಕುಳಿತಿರುವ ಎಲ್ಲಾ ಸದಸ್ಯರ ಅಭಿಪ್ರಾಯವನ್ನು ತೆಗೆದುಕೊಂಡು ಸಮಗ್ರವಾಗಿ ರೈತರನ್ನು ಉಳಿಸತಕ್ಕ ದೃಷ್ಟಿಯಿಂದ ನಾಳೆಯಿಂದಲೇ ಕ್ರಮವನ್ನು ರೂಪಿಸಿಕೊಳ್ಳಬೇಕೆಂದು ಹೇಳಿ, ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ್):- ಸನ್ಮಾನ್ಯ ಅಧ್ಯಕ್ಷರೆ, ನೆರೆಹಾವಳಿಯ ಬಗ್ಗೆ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಧಾರವಾಡ ಜಿಲ್ಲೆಯಲ್ಲಿನ ನನ್ನ ಮತಕ್ಷೇತ್ರ ವ್ಯಾಪ್ತಿಗೆ ಬರುವ ಶಿಗ್ಗಾಂವ್ ಮತ್ತು ಸವಣೂರ್ ಎಂಬ ತಾಲ್ಲೂಕುಗಳಲ್ಲಿ ಹಾಗೂ ರಾಣೆಬೆನ್ನೂರಿನ ಅನೇಕ ಕಡೆಗಳಲ್ಲಿ ರೈತರು ಸಾಕಷ್ಟು ತೊಂದರೆಯನ್ನು ಪಡತಕ್ಕಂಥ ಪರಿಸ್ಥಿತಿ ಬಂದಿದೆ. ಭಾರಿ ಮಳೆಯಿಂದಾಗಿ ಶಿಗ್ಗಾಂವ್‌ದ ಸುಮಾರು 11,599 ಎಕರೆಗಳನ್ನು ಭೂಮಿಯ ಮೇಲಿನ ಬೆಳೆ ಲುಕ್ಸಾನಾಗಿದೆ ಎನ್ನತಕ್ಕ ಅಂಶವನ್ನು ಶಿಗಾಂವ್ ವ್ಯವಸಾಯ ಇಲಾಖೆಯ ಸಹಾಯಕ ನಿರ್ದೇಶಕರು ಮತ್ತು ತಹಶೀಲ್ದಾರರು ಈಗಾಗಲೇ ಒಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಅದರ ಸಲುವಾಗಿ ಸರ್ಕಾರದವರು ಒಂದು ಎಕರೆಗೆ 300 ರೂಪಾಯಿಗಳ ಪರಿಹಾರವನ್ನು ಕೊಡತಕ್ಕ ಕಾನೂನನ್ನು ಮಾಡಿದ್ದಾರೆ. ಅದನ್ನು ಮತ್ತೆ ತಿದ್ದುಪಡಿಮಾಡಿ ಈಗ ಅದನ್ನು 500 ರೂಪಾಯಿಗಳಿಗೆ ಏರಿಸಿರುವುದಾಗಿ ತಿಳಿದುಬಂದಿದೆ. ಒಂದು ಎಕರೆಗೆ ಕೇವಲ 200 ರೂಪಾಯಿಗಳನ್ನು ಪರಿಹಾರವಾಗಿ ರೈತರಿಗೆ ಕೊಡುವುದರಿಂದ ಅದು ಬಹಳ ಕಡಿಮೆಯಾಗುತ್ತದೆ. ಆ ದೃಷ್ಟಿಯಿಂದ ಈಗಾಗಲೆ ಹೆಚ್ಚು ಮಾಡಿದ್ದಾರೆ, ಅದಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದರ ಜೊತೆಗೆ ಒಂದು ಎಕರೆಗೆ ಕೊನೆಯಪಕ್ಷ 500 ರೂಪಾಯಿಗಳನ್ನು ಕೊಟ್ಟರೆ ರೈತನಿಗೆ ಅವನು ಹಾಕಿದ ಖರ್ಚು ಬಿತ್ತಿ ಬೆಳೆದು ಒಕ್ಕಲುತನವನ್ನು ಮಾಡಿದ ಖರ್ಚಾದರೂ ಬರುತ್ತದೆ. ರೈತ ಅನೇಕ ಕಡೆ ಸಾಲವನ್ನು ಮಾಡಿದ್ದಾನೆ. ಅದನ್ನಾದರೂ ತೀರಿಸತಕ್ಕ ಮತ್ತು ಮುಂಬರುವ ದಿವಸಗಳಲ್ಲಿ

ಅನುಕೂಲವಾಗತಕ್ಕ ರೀತಿಯಲ್ಲಿ ಈ ಒಂದು ಪರಿಹಾರವನ್ನು ಕನಿಷ್ಟ ಪಕ್ಷ ರೂ. 500 ಕ್ಕಿಂತ ಹೆಚ್ಚು ಕೊಡುವುದಾದರೆ ಬಹಳ ಒಳ್ಳೆಯದಾಗುತ್ತದೆ. ಈ ಬಗ್ಗೆ ಸರ್ಕಾರದವರು ಕೂಡಲೆ ಒಂದು ಚರ್ಚೆ ಮಾಡಿ ಈ ಪರಿಹಾರವನ್ನು ಕೊಡತಕ್ಕ ವಿಚಾರವನ್ನು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಮನೆಗಳ ವಿಚಾರದಲ್ಲಿ ಹೇಳುವುದಾದರೆ, ಈಗಾಗಲೇ ಶಿಗ್ಗಾಂವ್ ತಾಲ್ಲೂಕಿನಲ್ಲಿ 1906 ಮನೆಗಳು ಪಾರ್ಷಿಯಲಿ ಬಿದ್ದು ಹೋಗಿರತಕ್ಕವುಗಳಿಗೆ ಪರಿಹಾರವನ್ನು ಕೊಟ್ಟಿದ್ದಾರೆ. ಆದರೆ ನನ್ನ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕ ಶಿಗ್ಗಾಂವ್ ಮತ್ತು ಸವಣೂರಿನಲ್ಲಿ ನೆರೆಹಾವಳಿ ಆದ ಮೇಲೆ ನಾನು ಪ್ರತಿಯೊಂದು ಹಳ್ಳಿಗೂ ಭೇಟಿ ಕೊಟ್ಟಿದ್ದೇನೆ. ಆ ಸಂದರ್ಭದಲ್ಲಿ ಅಲ್ಲಿಯ ಜನರ ಪರಿಸ್ಥಿತಿಯನ್ನು ನೋಡಿದರೆ ನಿಜವಾಗಿ ನಮ್ಮ ಭಾಗದಲ್ಲಿ ಜನರಿಗೆ ಈ ಪರಿಸ್ಥಿತಿ ಬರಬಾರದಿತ್ತು ಎಂದು ಹೇಳಬಯಸುತ್ತೇನೆ. ಜಿಲ್ಲಾಧಿಕಾರಿಗಳಾಗಲಿ, ಸರ್ಕಾರದವರಾಗಲಿ ಹಾವೇರಿ ತಾಲೂಕಿನ ಗಳಗನಾಥ ಎನ್ನತಕ್ಕ ಗ್ರಾಮಕ್ಕೆ, ರಾಣಿಬೆನ್ನೂರು ತಾಲೂಕಿನಲ್ಲಿ ಚಂದಾಪುರ ಎನ್ನತಕ್ಕ ಗ್ರಾಮಕ್ಕೆ ನೀರು ಬಂದು ಈ ಹಳ್ಳಿಗಳು ಪೂರ್ಣವಾಗಿ ಮುಳುಗಿ ಹೋಗಿರುವುದನ್ನು ನಾವು ನೋಡಿದ್ದೇವೆ. ಅದೇ ರೀತಿ ಶಿಗ್ಗಾಂವ್ ತಾಲೂಕಿನಲ್ಲಿ ಮತ್ತು ಸವಣೂರು ತಾಲೂಕಿನಲ್ಲಿ, ಚಿಕ್ಕಮಗದೂರು ಫಕೀರನಂದಿಹಳ್ಳಿ ಮತ್ತಿತರ ಹಳ್ಳಿಗಳಿಗೆ ವರದಾ ನದಿಯಿಂದ, ಬಾಜಿರಾವ್‌ನ ಹಳ್ಳ ಎಂದರೆ ಅದು ಸುಮಾರು 7 ಹಳ್ಳಗಳ ಕನ್‌ಕ್ಷನ್ ಇರತಕ್ಕ ಹಳ್ಳ, ಈ ಹಳ್ಳದಿಂದ ನೀರು ಬಂದು ಜನರು ಸಂಪೂರ್ಣವಾಗಿ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅಲ್ಲಿ ನೀರು ಬಂದಿದ್ದರಿಂದ ಅಲ್ಲಿನ ಜನರು ಬೇರೆ ಕಡೆ ಹೋಗಿ 3-4 ದಿವಸ ಬೇರೆಯವರ ಆಶ್ರಯದಲ್ಲಿ ಇದ್ದರು. ಅವರು ಮನೆಯಲ್ಲಿದ್ದಂಥ ವಸ್ತುಗಳನ್ನು ಬಿಟ್ಟು, ಕಣಕಟ್ಟೆಯನ್ನು ಬಿಟ್ಟು, ಜಾನುವಾರುಗಳನ್ನು ಬಿಟ್ಟು ಬೇರೆಯವರ ಆಶ್ರಯದಲ್ಲಿದ್ದರು. ಅವರಿಗೆ ಮೈಗೆ ಬಟ್ಟೆ, ಊಟಕ್ಕೆ ಅನ್ನ ಇಲ್ಲದಂಥ ಪರಿಸ್ಥಿತಿಯನ್ನು ನಾವು ಕಣ್ಣಾರೆ ನೋಡಿಕೊಂಡು ಬಂದಿದ್ದೇವೆ. ಸರ್ಕಾರದವರು ಈ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಪ್ರಜೆಗಳಿಗೆ ತೊಂದರೆ ಆದಾಗ ಸರ್ಕಾರ ಯಾವ ರೀತಿ ಕೊಡುತ್ತದೆಂಬುದನ್ನು ಜನತೆ ನಿರೀಕ್ಷಣೆ ಮಾಡತಕ್ಕದ್ದು ಸ್ವಾಭಾವಿಕ. ಇಂಥ ಸಂದರ್ಭದಲ್ಲಿ ನಾವು ಜನರಿಗೆ ಸಹಾಯವನ್ನು ಮಾಡಿದರೆ ಖಂಡಿತವಾಗಿ ಸರ್ಕಾರದ ಬಗ್ಗೆ, ನಮ್ಮ ರಾಜಕೀಯ ಪಕ್ಷಗಳ ಬಗ್ಗೆ ಅಪಾರವಾದ ಗೌರವ ಕೊಡತಕ್ಕದ್ದನ್ನು ನಾವು ರೈತರಿಂದ, ಜನತೆಯಿಂದ ನಿರೀಕ್ಷಣೆ ಮಾಡಬಹುದು. ನಿಜವಾಗಿ ಹೇಳುವುದಾದರೆ ನನ್ನ ಮತ ಕ್ಷೇತ್ರದಲ್ಲಿ ಮನೆಗಳು ಬಿದ್ದಾಗ, ಜಮೀನಿನಲ್ಲಿದ್ದ ಬೆಳೆ ಕೊಚ್ಚಿ ಹೋದಾಗ ಅದಕ್ಕೆ ಪರಿಹಾರವನ್ನು ಕೊಡುವುದಕ್ಕೆ ಸರ್ವೆ ಮಾಡುವಾಗ ಸುಮಾರು 30 ರಿಂದ 40 ಪರ್ಸೆಂಟ್‌ವರೆಗೆ ಅಲ್ಲಿರತಕ್ಕ ಅಧಿಕಾರವರ್ಗದವರು ಮನೆಗಳನ್ನು ಮತ್ತು ಎಕರೆವಾರು ಜಮೀನುಗಳನ್ನು ನೋಡಬೇಕಾಗಿತ್ತು. ಅತಿವೃಷ್ಟಿಯಿಂದ ತೊಂದರೆ ಬಗ್ಗೆ ಅಂಕಿಅಂಶಗಳನ್ನು ಕೊಡುವುದರಲ್ಲಿ ಅಧಿಕಾರಿಗಳು ತಪ್ಪು ಮಾಡಿದ್ದಾರೆ. ಈ ಬಗ್ಗೆ ಅಲ್ಲಿನ ಜಿಲ್ಲಾಧಿಕಾರಿಗಳ ಗಮನಕ್ಕೆ ನಾನು ಇದನ್ನು ತಂದಾಗ, ಈಗಾಗಲೇ ನಾವು ಸರ್ಕಾರಕ್ಕೆ ಅಂಕಿಅಂಶಗಳನ್ನು ಕಳುಹಿಸಿಕೊಟ್ಟಿದ್ದೇವೆ ಇನ್ನೂ ಹೆಚ್ಚಿನ ಅಂಕಿಅಂಶಗಳನ್ನು ನಾವು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಈ ರೀತಿಯ ಉತ್ತರದಿಂದ ನಮಗೆ ಅತ್ಯಂತ ವಿಷಾದವಾಗುತ್ತದೆ. ನಾನು ಅಲ್ಲಿನ ಗ್ರಾಮಗಳಿಗೆ ಭೇಟಿ ನೀಡಿದಾಗ ಅಲ್ಲಿನ ಜನರು ನನ್ನಲ್ಲಿ ಅವರ ದುಃಖವನ್ನು ತೋಡಿಕೊಂಡರು. ಆ ಸಂದರ್ಭದಲ್ಲಿ ನಾನು ಅವರಿಗೆ ಏನು ಹೇಳಿದೆ ಎಂದರೆ ನೀವು ವಾಸ್ತವ ಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತಂದರೆ ನಾನು ಸರ್ಕಾರದಿಂದ ಕೊಡಬಹುದಾದ ಪರಿಹಾರವನ್ನು ಕೊಡಿಸುತ್ತೇನೆಂದು ಭರವಸೆಯನ್ನು ಕೊಟ್ಟು ಬಂದಿದ್ದೇನೆ. ಇವತ್ತು ರೈತರಿಗೆ ವಾಸ್ತವವಾಗಿ ಬಹಳ ತೊಂದರೆಯಾಗಿದೆ, ಅವರಿಗೆ ಪರಿಹಾರವನ್ನು ಕೊಡತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳಬಯಸುತ್ತೇನೆ.

ನನ್ನ ಮತಕ್ಷೇತ್ರ ಸವಣೂರು ತಾಲೂಕಿನಲ್ಲಿ 3460 ಮನೆಗಳಿಗೆ ಪರಿಹಾರವನ್ನು ಕೊಟ್ಟಿದ್ದಾರೆ. ಸುಮಾರು 1307 ಮನೆಗಳಿಗೆ ಪರಿಹಾರವನ್ನು ಕೊಡಬೇಕಾಗಿದೆ. ಈ ಮನೆಗಳಿಗೂ ಕೂಡ ಪರಿಹಾರ ಕೊಡುವ ಬಗ್ಗೆ ರೀಸರ್ವೆ ಆದ ಪ್ರಕಾರ ತಾವು ಮನೆಗಳನ್ನು ಕಳೆದುಕೊಂಡ

ರೈತರಿಗೆ, ಸಾರ್ವಜನಿಕರಿಗೆ ಪರಿಹಾರವನ್ನು ಕೊಡತಕ್ಕ ಕೆಲಸವನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸವಣೂರು ತಾಲೂಕಿನಲ್ಲಿ ಅಧಿಕಾರಿಗಳ ವರದಿಯ ಪ್ರಕಾರ ಸುಮಾರು 5238 ಹೆಕ್ಟಾರ್ ಜಮೀನಿನಲ್ಲಿ ಬೆಳೆ ಲುಕ್ಸಾನಾಗಿದೆ. ಈ ಬಗ್ಗೆ ಕೂಡ ಪರಿಹಾರವನ್ನು ಕೊಡಿಸಬೇಕು. ಸರ್ಕಾರದವರು ಈಗ ಈ ಮನೆಗಳಿಗೆ ಪರಿಹಾರಕ್ಕೋಸ್ಕರ ಏನು ಪರಿಹಾರವನ್ನು ನೀಡಿದ್ದಾರೆ. ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕಾಗಿದೆ. ಕೂಡಲೇ ಸರ್ಕಾರದವರು ಈ ದಿಸೆಯಲ್ಲಿ ಆಸಕ್ತಿ ವಹಿಸಿ ಜಿಲ್ಲಾಧಿಕಾರಿಗಳ ಮುಖಾಂತರ ಹಣವನ್ನು ಬಿಡುಗಡೆ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀಮತಿ ದಮಯಂತಿ ಬೋರೇಗೌಡ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇದರ ಜೊತೆಯಲ್ಲಿ ಹೇಳುವುದಾದರೆ, ಜಮೀನುಗಳ ವಿಚಾರದಲ್ಲಿ ಅಂಕಿ ಸಂಖ್ಯೆಗಳನ್ನು ಇವರು ಕೊಟ್ಟಿದ್ದಾರೆ. ಮನೆ ಬಿದ್ದಂಥ ರೈತರಿಗೆ, ಮನೆ ಸಂಪೂರ್ಣವಾಗಿ ಬಿದ್ದಿರಲಿ ಇಲ್ಲವೇ ಪಾರ್ಷಿಯಲಿ ಬಿದ್ದಿರಲಿ ಅಂತಹವರಿಗೆ ಪರಿಹಾರ ಕೊಟ್ಟಿದ್ದಾರೆ. ಜಮೀನಿನ ವಿಚಾರದಲ್ಲಿ ಹೇಳುವುದಾದರೆ ಧಾರವಾಡ ಜಿಲ್ಲೆಯಲ್ಲಿನ ನನ್ನ ಮತ ಕ್ಷೇತ್ರದಲ್ಲಿ ಇನ್ನು ಯಾವ ರೈತರಿಗೂ ಕೂಡ ಪರಿಹಾರ ಹಣವನ್ನು ಕೊಟ್ಟಿರುವುದಿಲ್ಲ. ಅಧಿಕಾರಿಗಳ ಸಮೀಕ್ಷೆ ಪ್ರಕಾರ ಎಷ್ಟು ಎಷ್ಟು ಎಕರೆ ಜಮೀನುಗಳು ಇವತ್ತು ಲುಕ್ಸಾನಾಗಿವೆ ಇವೆಲ್ಲಾ ಜಮೀನುಗಳಿಗೆ ಕೂಡಲೇ ಪರಿಹಾರ ಹಣವನ್ನು ಕೊಡಿಸತಕ್ಕಂಥ ವ್ಯವಸ್ಥೆ ಮಾಡಬೇಕೆಂದು ವಿನಂತಿಸುತ್ತೇನೆ. ಇನ್ನು ರಸ್ತೆಗಳ ಮತ್ತು ಜಾನುವಾರುಗಳ ವಿಚಾರದ ಬಗ್ಗೆ ಹೇಳುವುದಾದರೆ ಅನೇಕ ದನಕರುಗಳು ಸತ್ತಿವೆ. ಆ ದನಕರುಗಳಿಗೆ ಪರಿಹಾರ ಹಣವನ್ನು ಕೊಡುತ್ತೇವೆಂದು ಹೇಳಿದ್ದೀರಿ. ಅದರಂತೆ ಯಾವ ರೈತರ ಜಾನುವಾರುಗಳು ಸತ್ತಿವೆ ಅವರಿಗೆ ಕೂಡಲೇ ಪರಿಹಾರದ ಹಣವನ್ನು ಪಾವತಿ ಮಾಡಬೇಕಾಗಿದೆ. ಸರಕಾರದಿಂದ ಕೂಡಲೇ ಹಣವನ್ನು ಬಿಡುಗಡೆ ಮಾಡಿ, ಅಲ್ಲಿಯೂ ಹಣವನ್ನು ಬಿಡುಗಡೆ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ನೆರೆಹಾವಳಿಯಿಂದ ರಸ್ತೆಗಳು ಸಂಪೂರ್ಣವಾಗಿ ಲುಕ್ಸಾನು ಆಗಿವೆ. ಶಿಗ್ಗಾಂವಿ ಮತಕ್ಷೇತ್ರದ ಶಿಗ್ಗಾಂವಿ ತಾಲ್ಲೂಕಿನ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ಉಪವಿಭಾಗದಿಂದ ನೆರೆಹಾವಳಿಯಲ್ಲಿ ಏನು ರಸ್ತೆಗಳು ಲುಕ್ಸಾನಾಗಿವೆ ಅವುಗಳನ್ನು ರಿಪೇರಿ ಮಾಡುವುದಕ್ಕೆ 41 ಲಕ್ಷ ರೂಪಾಯಿ ಬೇಕಾಗಬಹುದೆಂಬ ವರದಿಯನ್ನು ಸರಕಾರಕ್ಕೆ ಕಳಿಸಿದ್ದಾರೆ. ಅದರಲ್ಲಿ ರಸ್ತೆಗಳ ದುರಸ್ತಿಗಾಗಿ ಕೇವಲ 20 ಸಾವಿರ ರೂಪಾಯಿಗಳನ್ನು ಶಿಗ್ಗಾಂವಿ ಮತಕ್ಷೇತ್ರಕ್ಕೆ ಕೊಟ್ಟಿದ್ದಾರೆ. 41 ಲಕ್ಷ ಕೇಳಿದ್ದರೆ 20 ಸಾವಿರ ಕೊಟ್ಟಿದ್ದಾರೆ. ಇದರಿಂದ ಚಕ್ಕಡಿಗಳು ಅಡ್ಡಾಡುವುದಕ್ಕೆ ಬಸ್‌ಗಳು ಓಡಾಡುವುದಕ್ಕೆ ತೊಂದರೆಯಾಗಿದೆ. ಬಸ್‌ಗಳು ಮತ್ತು ಜನಸಂಪರ್ಕಕ್ಕೆ ಅನಾನುಕೂಲತೆಯಾಗಿದೆ. ರೈತರು ಬಹಳ ಕಠಿಣ ಪರಿಸ್ಥಿತಿಯಲ್ಲಿದ್ದಾರೆ. ನಮ್ಮ ಸವಣೂರು ಜಿಲ್ಲಾಪರಿಷತ್ ಇಂಜಿನಿಯರಿಂಗ್ ಉಪವಿಭಾಗದಿಂದ ರಸ್ತೆಗಳ ದುರಸ್ತಿಗಾಗಿ 27 ಲಕ್ಷ ಕೇಳಿದ್ದಾರೆ ಅದರಲ್ಲಿ ಕೇವಲ 80 ಸಾವಿರ ಬಿಡುಗಡೆ ಮಾಡಿದ್ದಾರೆ. ಲೋಕೋಪಯೋಗಿ ಇಲಾಖೆ ವತಿಯಿಂದ ಕೆಲವು ರಸ್ತೆಗಳನ್ನು ದುರಸ್ತಿ ಮಾಡಬೇಕಾಗಿದೆ. ಇದಕ್ಕಾಗಿ ವಿಶೇಷ ಅನುದಾನವನ್ನು ಪೂರೈಸುವ ಮೂಲಕ ಆ ರಸ್ತೆಗಳನ್ನು ಕೂಡಲೇ ಅಂದರೆ 1–2 ತಿಂಗಳೊಳಗೆ ದುರಸ್ತಿ ಮಾಡದೇ ಹೋದರೆ ಈಗ ಖರ್ಚು ಮಾಡತಕ್ಕಂತಹ ಹಣದ 4 ಪಟ್ಟು ಹಣವನ್ನು ಮುಂದಿನ ವರ್ಷಗಳಲ್ಲಿ ಖರ್ಚು ಮಾಡಿದರೂ ಕೂಡ ಆ ರಸ್ತೆಗಳನ್ನು ನಾವು ದುರಸ್ತಿ ಮಾಡುವುದಕ್ಕೆ ಬೇಗನೆ ಆಗುವುದಿಲ್ಲ. ಅದನ್ನು ನಾವು ಇಲ್ಲಿ ಮರೆಯಬಾರದು. ಆ ದೃಷ್ಟಿಯಿಂದ ರೈತರು ಸಂಕಷ್ಟವಾದ ಪರಿಸ್ಥಿತಿಯಲ್ಲಿ ಏನು ಇದ್ದಾರೆ ಅವರಿಗೆ ಹೆಚ್ಚಿನ ಪರಿಹಾರ ಹಣವನ್ನು ಕೊಟ್ಟು ನಾವು ನಮ್ಮ ಕೆಲಸವನ್ನು ಬೇಗನೆ ಮಾಡಬೇಕಾಗಿದೆ. ಈ ಒಂದು ನೆರೆಹಾವಳಿಯಿಂದ ಕೆಲವೊಂದು ಹಳ್ಳಿಗಳನ್ನು ಬೇರೆ ಕಡೆಗೆ ಶಿಫ್ಟ್ ಮಾಡಬೇಕಾಗಿದೆ. ಆ ವಿಚಾರದಲ್ಲಿ ನನ್ನ ಸವಣೂರು ತಾಲ್ಲೂಕಿನ ಪಕೀರನಂದಿಹಳ್ಳಿ, ಕುರುಬರ ಮಲ್ಲೂರು, ಷರ್ತೂರು, ಹಳೇಹಲಸೂರು, ಚಿಕ್ಕಬೂದಿಹಾಳು ಈ 5 ಹಳ್ಳಿಗಳ ಜನರು ಈಗಾಗಲೇ

ಸರಕಾರಕ್ಕೆ ಅರ್ಜಿಗಳನ್ನು ಕೊಟ್ಟಿದ್ದಾರೆ. ಇದನ್ನು ಶಿಫ್ಟ್ ಮಾಡದಿದ್ದರೆ ಮತ್ತೆ ಆಕಸ್ಮಿಕ ನೆರೆಹಾವಳಿ ಬಂದಿದ್ದೇ ಆದರೆ ಅನೇಕ ದೊಡ್ಡ ಅನಾಹುತಗಳನ್ನು ಎದುರಿಸತಕ್ಕಂತಹ ಪರಿಸ್ಥಿತಿಯೂ ಕೂಡ ಬರತಕ್ಕಂಥಾದ್ದು ಇದೆ. ಆ ಕಾರಣದಿಂದ ಈ ಹಳ್ಳಿಗಳನ್ನು ಕೂಡಲೇ ಶಿಫ್ಟ್ ಮಾಡಬೇಕಾಗಿದೆ. ಸರಕಾರದಿಂದ ವಿಶೇಷ ಅನುದಾನವನ್ನು ಪೂರೈಸಿ ಈ ವಿಲೇಜುಗಳನ್ನು ಶಿಫ್ಟಿಂಗ್ ಮಾಡುವ ಸಲುವಾಗಿ ಅನುಕೂಲ ಮಾಡಿಕೊಳ್ಳಬೇಕು. ಕೆಲವೊಂದು ಕೆರೆಗಳು ಉದಾಹರಣೆಗೆ ಹೇಳುವುದಾದರೆ ಬಿಸಾಟಿಕೊಪ್ಪದ ಕೆರೆ, ಷಾದಂಬಿ ಕೆರೆಗಳು ಬೆಣ್ಣೆಹಳ್ಳದಿಂದ ಒಡೆದಿದ್ದು ಆ ಭಾಗದಲ್ಲಿ ಭತ್ತವನ್ನು ವಿಶೇಷವಾಗಿ ರೈತರು ಬೆಳೆಯುವುದರಿಂದ ಅಲ್ಲಿ ರೈತರು ತಮ್ಮ ಬಿತ್ತಿ ಬೆಳೆದ ಪೀಕು ಲುಕ್ಸಾನು ಆಗುವಂತಹ ಪರಿಸ್ಥಿತಿ ಬಂದಿದೆ. ಮತ್ತು ಬಿಸಾಟಿಕೊಪ್ಪ, ರಸ್ತೆ ಕೂಡಬೇಕೆಂದರೂ ಕೂಡ ಅಲ್ಲಿ ಕೆರೆ ಒಡೆದಿರುವುದರಿಂದ ಅಲ್ಲಿ ಸಂಪೂರ್ಣವಾಗಿ ರಸ್ತೆಯೂ ಕೆಟ್ಟುಹೋಗಿದೆ. ಅಲ್ಲಿ ಚಕ್ಕಡಿಗಾಡಿ ಕೂಡ ಹೋಗಲಿಕ್ಕೆ ಸಾಧ್ಯವಾಗುತ್ತಿಲ್ಲ ಯಾವುದೇ ವಾಹನಗಳು ಹೋಗಲಿಕ್ಕೂ ಆಗದಿರುವುದರಿಂದ ರೈತರು ಎಷ್ಟು ಹೊತ್ತಾದರೂ ನಡೆದುಕೊಂಡೇ ಸುಮಾರು ಮೂರು ಕಿಲೋಮೀಟರ್ ದೂರದವರೆಗೆ ಬರಬೇಕಾಗಿದೆ. ನನ್ನ ಮತಕ್ಷೇತ್ರಕ್ಕೆ ಮಾನ್ಯ ಕಂದಾಯ ಸಚಿವರು ಭೇಟಿಕೊಟ್ಟಿದ್ದರು. ಆ ಸಂದರ್ಭದಲ್ಲಿ ರಸ್ತೆಗಳನ್ನು ಕೂಡ ಅವರಿಗೆ ತೋರಿಸಿದ್ದೆವು. ಆ ಕೆರೆ ಒಡೆದದ್ದನ್ನು ಕೂಡ ತೋರಿಸಿದ್ದೇವೆ. ಈಗಾಗಲೇ ಮಾನ್ಯ ಕಂದಾಯ ಸಚಿವರು ಚಿಕ್ಕ ನೀರಾವರಿ ಇಲಾಖೆಯವರಿಗೆ ಇದನ್ನು ದುರಸ್ತಿ ಮಾಡಬೇಕೆನ್ನುವ ಮಾತನ್ನು ಹೇಳಿದರು. ಆದರೆ ಅಧಿಕಾರಿಗಳು ಇದುವರೆಗೂ ಯಾವುದೇ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿರುವುದಿಲ್ಲ. ಇದೇ ರೀತಿ ಮುಂದುವರಿಯುವುದಾದರೆ ಖಂಡಿತವಾಗಿಯೂ ಆ ಹಳ್ಳಿಯ ಜನರಿಗೆ ಬಹಳ ತೊಂದರೆಯಾಗತಕ್ಕಂಥ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಆ ಕಾರಣ ಚಿಕ್ಕ ನೀರಾವರಿ ಇಲಾಖೆಯವರು ವಿಶೇಷವಾಗಿ ಅತಿ ಆದ್ಯತೆಯ ಮೇರೆಗೆ, ಅತಿ ಅವಶ್ಯಕವಾಗಿರತಕ್ಕಂಥ ಈ ಕೆರೆಗಳನ್ನು ದುರಸ್ತಿಮಾಡಿ ರಸ್ತೆ ಸಂಪರ್ಕಗಳನ್ನೂ ಕೂಡ ಕೂಡಲೇ ಮಾಡಿಕೊಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ರೈತರು ನೆರೆಹಾವಳಿಯಿಂದ ತಮ್ಮ ಕೆಲವು ಬಣವಿಗಳನ್ನು ಅವರ ಕಣದಲ್ಲಿ ಹಾಕಿಕೊಂಡಿದ್ದರು. ಭತ್ತದ ಬಣವಿ, ಮೆಣಸಿನಕಾಯಿ ಬಣವಿಯನ್ನು ಹಾಕಿಕೊಂಡಿದ್ದರು. ಜೋಳದ ಬಣವಿಗಳನ್ನು ಒಡ್ಡಿಕೊಂಡಿದ್ದರು. ಇವೆಲ್ಲ ಮಳೆಯಿಂದ ಸಂಪೂರ್ಣವಾಗಿ ಅತಿ ಮಳೆ ಹಿಡಿದಿದ್ದ ಕಾರಣವಾಗಿ ಏತಕ್ಕೂ ಬಾರದ ವಾಸನೆ ಬಡಿಯುತ್ತಿರುವುದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಮತ್ತೆ ಕೆಲವೊಂದು ಸಂಪೂರ್ಣವಾಗಿ ಇಡೀ ವರ್ಷ ಅವರು ಬೆಳೆದಂಥ ಪೀಕ್ ಆ ಹೊಳೆಗಳಲ್ಲಿ ತೇಲಿ ಹೋದಂಥ ಪರಿಸ್ಥಿತಿಯನ್ನು ನಾವು ಕಂಡುಕೊಂಡಿದ್ದೇವೆ. ಮಾನ್ಯ ಸರ್ಕಾರದಿಂದ ಪರಿಹಾರ ಹಣವನ್ನು ನಿಗದಿ ಪಡಿಸಿದ್ದಾರೆ. ಇದರ ಜೊತೆಗೆ ಯಾವುದೇ ಜನರ ಬಣವೆ, ಕೆರೆಕಟ್ಟೆ ಮತ್ತು ಹೊಳೆ ಹಳ್ಳಗಳಲ್ಲಿ ತೇಲಿ ಹೋದಂಥವುಗಳಿಗೆ, ವಿಶೇಷವಾದ ಪ್ರಕರಣಗಳೆಂದು ಪರಿಗಣಿಸಿ ಹೆಚ್ಚುವರಿ ಪರಿಹಾರದ ಹಣವನ್ನು ಕೊಟ್ಟದ್ದೇ ಆದರೆ ನಮ್ಮ ರೈತರಿಗೆ ಕಷ್ಟಕಾಲದಲ್ಲಿ ಆರ್ಥಿಕ ಸಹಾಯವನ್ನು ಮಾಡಿದಂತಾಗುತ್ತದೆ. ಈ ದೃಷ್ಟಿಯಿಂದ ಕೂಡಲೇ ಈ ಎಲ್ಲಾ ಬೆಳೆಗಳಿಗೆ ಮತ್ತು ರೈತರಿಗೆ ತಾವು ಸಹಾಯವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಮನೆಗಳಿಗೆ ಕೂಡ ಹಾನಿ ಆದಂಥ ಪರಿಸ್ಥಿತಿಯಲ್ಲಿ 5 ನೂರು ರೂಪಾಯಿಗಳವರೆಗೆ ಪರಿಹಾರ ಕೊಡತಕ್ಕಂಥ ಕಾರ್ಯಕ್ರಮ ಸರ್ಕಾರದಲ್ಲಿದೆ. ಈಗ ಅದನ್ನು ಮೂರುಸಾವಿರ ರೂಪಾಯಿಗಳವರೆಗೆ ಏರಿಸಿರುವುದಕ್ಕೆ ಮಾನ್ಯ ಸರ್ಕಾರದವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮನೆ ಬಿದ್ದಂಥವರಿಗೆ 100–200 ರೂಪಾಯಿಗಳು, ಸಂಪೂರ್ಣವಾಗಿ ಮನೆ ಬಿದ್ದಂತವರಿಗೆ ಐದು ನೂರು ರೂಪಾಯಿಗಳನ್ನು ಮಾತ್ರ ನಮ್ಮಲ್ಲಿ ಕೊಟ್ಟಿರತಕ್ಕಂಥದ್ದು ಇದೆ. ಅಧಿಕಾರಿಗಳು ಇರುವಂಥ ಕಾನೂನಿಗೆ ತಿದ್ದುಪಡಿ ಮಾಡಿಕೊಂಡು ಪರಿಹಾರವನ್ನು ಕೊಡಬೇಕೆನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಆ ಪ್ರಕಾರವಾಗಿ ಇವತ್ತು ಮನೆ ಬಿದ್ದವರಿಗೆ

ಮೂರು ಸಾವಿರ ರೂಪಾಯಿಗಳವರೆಗೆ, ಜಮೀನು ಪೀಕು ಅತಿವೃಷ್ಟಿಯಿಂದ ಹಾಳಾದವರಿಗೆ ಅವರಿಗೆಲ್ಲರಿಗೂ ಕೂಡ ಒಂದು ಹೆಕ್ಟೇರಿಗೆ ಐದು ನೂರು ರೂಪಾಯಿ ಕೊಡಬೇಕೆಂದು ಮಾನ್ಯ ಸರ್ಕಾರಕ್ಕೆ ಅಧಿಕಾರಿಗಳು ವರದಿ ಮಾಡಿದ ಪ್ರಕಾರ ನಿಗದಿ ಮಾಡಿಕೊಂಡಿದ್ದಾರೆ. ಆ ಪ್ರಕಾರವಾಗಿ ಹಣವನ್ನು ಕೂಡಲೇ ಬಿಡುಗಡೆ ಮಾಡಿ ರೈತರ ಸಂಕಷ್ಟದಲ್ಲಿ ಮಾನ್ಯ ಸರ್ಕಾರದವರ ಸಹಭಾಗಿಯಾಗಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ.ಬೈರೇಗೌಡ (ವೇಮಗಲ್):- ಮಾನ್ಯ ಅಧ್ಯಕ್ಷರೆ ನಮ್ಮ ರಾಜ್ಯದಲ್ಲಿ ಪ್ರವಾಹದಿಂದ ಆಗಿರತಕ್ಕಂಥ ಹಾನಿ ಬಹುಶಃ ಹಿಂದೆಂದೂ ಆಗಿಲ್ಲ. ಇದೊಂದು ಅಭೂತಪೂರ್ವವಾದ ಹಾನಿ. ಈಗಾಗಲೇ ಅನೇಕ ನಮ್ಮ ಸ್ನೇಹಿತರು ಈ ವಿಚಾರವನ್ನು ಮಾತನಾಡಿದ್ದಾರೆ. ನಾನು ಅವೆಲ್ಲವನ್ನು ಪುನರಚ್ಚರಿಸುವುದಕ್ಕೆ ಹೋಗುವುದಿಲ್ಲ. ಅದರಿಂದ ಏನೂ ಪ್ರಯೋಜನವೂ ಆಗುವುದಿಲ್ಲ. ನಮ್ಮ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದಿಂದ ಪಡೆಯತಕ್ಕಂಥ ನೆರವು ಏನಿದೆ ಅದನ್ನು ಪಡೆಯುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ನಾವು ಪತ್ರಿಕೆಗಳಲ್ಲಿ ಒಂದು ಜಾಹಿರಾತು ನೋಡಿದ್ದೇವೆ. ಪ್ರಧಾನ ಮಂತ್ರಿಗಳ ಚಿತ್ರ ಮತ್ತು ಮುಖ್ಯಮಂತ್ರಿಗಳ ಚಿತ್ರ. ಆ ಜಾಹಿರಾತಿನಲ್ಲಿ ಇದ್ದದ್ದು ಏನೆಂದರೆ ಪ್ರಧಾನ ಮಂತ್ರಿಗಳು ನಮ್ಮ ರಾಜ್ಯಕ್ಕೆ ಬರುತ್ತಾರೆ, ಈ ಪ್ರವಾಹದಿಂದ ಆಗಿರತಕ್ಕ ಹಾನಿಯನ್ನು ನೋಡುತ್ತಾರೆ, ಅದಕ್ಕೆ ಸರ್ಕಾರದ ವತಿಯಿಂದ ಸ್ವಾಗತ ಕೋರುತ್ತೇವೆಂದು ಜಾಹಿರಾತು ಹಾಕಿದ್ದರು. ನಾನು ಅಂದುಕೊಂಡೆ, ಹೊಸದಾಗಿ ಏನೋ ನಡೆಯುತ್ತಿದೆ, ಇಲ್ಲಿ ಆಗಿರತಕ್ಕ ಅನಾಹುತ ಬೇರೆ ದೇಶದಲ್ಲಿ ಎಲ್ಲಿಯೂ ಆಗದೆ ಇರತಕ್ಕ ಅನಾಹುತಕ್ಕಿಂತ ಕಡಿಮೆ ಏನೂ ಇಲ್ಲ. ಅಂಥ ಪರಿಸ್ಥಿತಿಯಲ್ಲಿ ಪ್ರಧಾನ ಮಂತ್ರಿಗಳು ಖುದ್ದಾಗಿ ಬಂದು ನೋಡಿ ರಾಜ್ಯಕ್ಕೆ ಕೇಂದ್ರದಲ್ಲಿ ನೆರವು ಕೊಡುತ್ತಾರೆಂದು ಆಸೆ ಇತ್ತು. ಮುಖ್ಯಮಂತ್ರಿಗಳೂ ಸಹ ಹೇಳಿದರು, ಪ್ರಧಾನ ಮಂತ್ರಿಗಳು ಬರುತ್ತಾರೆ ನೋಡುತ್ತಾರೆ ಎಂದು. ಅದು ಯಾವುದೂ ಆಗಲಿಲ್ಲ. ಪ್ರಧಾನ ಮಂತ್ರಿಗಳು ತಮಿಳ್ನಾಡಿಗೆ ಹೋಗುತ್ತಾರೆ, ಕೇರಳಕ್ಕೆ ಹೋಗುತ್ತಾರೆ, ಹೋಗುವಾಗ ಕರ್ನಾಟಕದ ಮೇಲೆ ಹೋಗುತ್ತಾರೆ. ಹೋಗುವಾಗ ಕರ್ನಾಟಕವನ್ನು ಕಿಟಕಿಯಿಂದ ನೋಡಿದರೋ ಇಲ್ಲವೋ ಗೊತ್ತಿಲ್ಲ. ನೋಡಿದ್ದರೂ ಸಹ ಏನಾದರೂ ರಾಜ್ಯಕ್ಕೆ ಪ್ರಯೋಜನವಾಗುತ್ತಿತ್ತು. ಇಲ್ಲಿ ನಡೆದಿರತಕ್ಕ ಅನಾಹುತದ ಚಿತ್ರ ಗೊತ್ತಾಗುತ್ತಿತ್ತು. ಆದರೆ ಯಾವುದೇ ಪ್ರಯೋಜನವಾಗದೆ ಇರುವುದರಿಂದ ಅನಿವಾರ್ಯವಾಗಿ ಈ ಒಂದು ತೀರ್ಮಾನಕ್ಕೆ ಬರಬೇಕಾಗಿದೆ. ಪ್ರಧಾನ ಮಂತ್ರಿಗಳು ಒಂದು ಸಾರಿಯೂ ತಮ್ಮ ಕಣ್ಣಿನ ದೃಷ್ಟಿಯನ್ನು ಹಾಯಿಸಿ ನೋಡತಕ್ಕ ಪ್ರಯತ್ನ ಮಾಡಲಿಲ್ಲ. ಕೇರಳಕ್ಕೆ ಏತಕ್ಕೆ ಹೋದರು? ಅದು ಕಾಂಗ್ರೆಸ್ ಪಕ್ಷದ ಅಂತರಿಕ ವ್ಯವಹಾರ. ಅಲ್ಲಿನ ಮುಖ್ಯಮಂತ್ರಿಗಳು ಕಾಂಗ್ರೆಸ್ ಪಕ್ಷದ ವರ್ಕಿಂಗ್ ಕಮಿಟಿಯಲ್ಲಿದ್ದಾರೆ. ಅವರನ್ನು ಸುಪ್ರೀತಗೊಳಿಸಬೇಕಾಗಿತ್ತು. ಅದಕ್ಕೋಸ್ಕರ ಹೋಗುತ್ತಿದ್ದಾರೆ. ತಮಿಳ್ನಾಡಿನಲ್ಲಿ ಕೇಂದ್ರ ಸರ್ಕಾರದ ಗುಂಡಿ ಇದೆ. ತಮಿಳ್ನಾಡಿನ ಮುಖ್ಯಮಂತ್ರಿಗಳು ಆ ಗುಂಡಿ ಒತ್ತಿದರೆ ಸಾಕು ಕೇಂದ್ರದಲ್ಲಿ ಅಲ್ಲೋಲಕಲ್ಲೋಲವಾಗುತ್ತದೆ. ಅದನ್ನು ಅವರು ಕಾಪಾಡಿಕೊಳ್ಳಬೇಕು. ಕರ್ನಾಟಕ ರಾಜ್ಯದಲ್ಲಿ 23-24 ಜನ ಪಾರ್ಲಿಮೆಂಟ್ ಸದಸ್ಯರಿದ್ದಾರೆ. ಇವರು ಏತಕ್ಕೆ ಈ ಅಸ್ತ್ರ ಉಪಯೋಗಿಸಲಿಲ್ಲ? ಅದಕ್ಕಿಂತ ಮುಖ್ಯವಾಗಿ ಆಡಳಿತ ಪಕ್ಷ ಅಲ್ಲಿ ಇಲ್ಲಿ ಎಲ್ಲ ಒಂದೇ. ಎದುರುಗಡೆ ಇರತಕ್ಕವರು ಆಡಳಿತ ಪಕ್ಷದ ಸದಸ್ಯರು ಇವರು ಕೇಂದ್ರಕ್ಕೆ ತಮ್ಮ ಪಕ್ಷಕ್ಕೆ ಗಡುವು ಕೊಟ್ಟು ಇಲ್ಲಿ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಲು ಕೇಂದ್ರ ಮಲತಾಯಿ ಧೋರಣೆ ತೋರಿಸದೆ ಸಮರ್ಪವಾದ ರೀತಿಯಲ್ಲಿ ನಮಗೆ ನೆರವು ಕೊಡದಿದ್ದರೆ ನಾವು ನಮ್ಮ ತೀರ್ಮಾನಕ್ಕೆ ಬರಬೇಕಾಗುತ್ತದೆಂಬ ಮಾತು ಇವರಲ್ಲಿ ಬರಲಿಲ್ಲ. ಬೇರೆ ರಾಜ್ಯದಿಂದ ಬಂದಿರತಕ್ಕ ಕಾಂಗ್ರೆಸ್ ಪಕ್ಷದವರು ಒಂದು ಕಡೆ ಇರಲಿ. ಯಾವ ಭಾಗದಲ್ಲಿ ಅನಾಹುತವಾಗಿ ಆ ಭಾಗದ ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ಸೂಚಿಸಬೇಕಾಗಿತ್ತು. ಅದನ್ನು ಮಾಡಲಿಲ್ಲ. ಕೇಂದ್ರದಿಂದ ಕೊಡತಕ್ಕ

ನೆರವು ಬರಬೇಕಾಗಿದೆ ಎಂದು ಅನೇಕ ಸ್ನೇಹಿತರು ಹೇಳುತ್ತಾರೆ. ನೆರವು ಕೊಟ್ಟರೆ ಸಂತೋಷ. ಆದರೆ ಕೊಡತಕ್ಕದ್ದು ಏನೆಂದರೆ ಯೋಜನೆಯಲ್ಲಿರತಕ್ಕ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ನಮಗೆ ಗ್ರಾಂಟ್ ಆಗಿ ಕೊಡತಕ್ಕದ್ದು ಏನೂ ಇಲ್ಲ. ಒಂದು ಪೈಸೆ ಕೂಡ ಗ್ರಾಂಟ್ ಇಲ್ಲ. ಪ್ಲಾನ್‌ನಲ್ಲಿರತಕ್ಕ ಹಣವನ್ನು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಕ್ಕೆ ಕೊಡಬೇಕಾದ ಹಣವನ್ನು ನಾಳೆ ಕೊಡುವುದನ್ನು ಇವತ್ತು ಕೊಡುತ್ತಾರೆ ಅಷ್ಟೆ. ಮುಂದೆ ಕೇಂದ್ರದಿಂದ ಬರತಕ್ಕ ಹಣಕ್ಕೆ ಇದನ್ನು ಜಮಾ ಮಾಡಿಕೊಳ್ಳುತ್ತಾರೆ. ಇದನ್ನು ಕೇಂದ್ರ ಸರ್ಕಾರ ಉದಾರವಾಗಿ ಮಾಡುತ್ತದೆಂಬುದು ನನಗಂತೂ ಇಲ್ಲ. ಇದು ಏನು ತೋರಿಸುತ್ತದೆಂದರೆ ಹಿಂದಿನ ಕಾಲದಲ್ಲಿ ರಾಜಮಹಾರಾಜರು ಚಕ್ರವರ್ತಿಗಳು ಇರುತ್ತಿದ್ದರು. ಅವರ ಹತ್ತಿರ ಹೋಗಿ ಸಾಷ್ಟಾಂಗ ನಮಸ್ಕಾರ ಮಾಡಿ ಅಡ್ಡಬಿದ್ದು ಸ್ವಾಮಿ ಕೊಡಿ ಎಂದು ಕೇಳುವ ಪರಂಪರೆ ಇತ್ತು. ರಾಜಮಹಾರಾಜರ ಕಾಲದ ಪರಂಪರೆಯನ್ನು ಈಗಲೂ ನಡೆಯುತ್ತಿದೆ. ಈಗ ಪ್ರಜಾಪ್ರಭುತ್ವ ಬಂದಿದೆ, ರಾಜಮಹಾರಾಜರು ಹೋಗಿದ್ದಾರೆ. ಪ್ರಜಾಪ್ರಭುತ್ವದ ಆಧಾರದ ಮೇಲೆ ಸರ್ಕಾರ ರಚನೆಯಾಗಿದೆ. ಆದರೂ ರಾಜಮಹಾರಾಜರ ಪರಂಪರೆ, ಊಳಿಗಮಾನ್ಯದ ಪರಂಪರೆಯನ್ನು ಇನ್ನೂ ಮುಂದುವರಿಸಿಕೊಂಡು ಬರುತ್ತಿರುವುದು ನನಗೆ ಖೇದವನ್ನುಂಟು ಮಾಡತಕ್ಕ ವಿಚಾರ. ಇವತ್ತು ರಾಜ್ಯ ಸರ್ಕಾರ ನೆರವನ್ನು ನೀಡುತ್ತಿದೆ.

1.20 ಪಿ.ಎಂ

ಒಂದು ರೀತಿಯಲ್ಲಿ ಉದಾರವಾಗಿದ್ದೀರೆಂದು ಕೊಂಡಿದ್ದೇನೆ. ಆದರೆ ಉದಾರವಾಗಿದ್ದೀರಿ ಎಂದರೆ, ಆಗಿರತಕ್ಕ ಅನಾಹುತಕ್ಕೆ ಸರಿದೂಗತಕ್ಕ ಉದಾರತ್ವವನ್ನು ತೋರಿಸಿದ್ದೀರಿ ಎಂದು ಭಾವನೆ ಅಲ್ಲ. ಹಿಂದೆಂದೂ ಆಗದೇ ಇರತಕ್ಕ ಪ್ರಮಾಣದಲ್ಲಿ ನಷ್ಟ ಆಗಿರುವುದರಿಂದ ಕೊಡತಕ್ಕ ಪ್ರಮಾಣವನ್ನು ಹೆಚ್ಚು ಮಾಡಿದ್ದೀರಿ. ಅದಕ್ಕೆ ನನ್ನ ಮೆಚ್ಚುಗೆ ಉಂಟೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದೇ ರೀತಿಯಲ್ಲಿ ಕಳೆದ ವರ್ಷ ನಮ್ಮ ಜಿಲ್ಲೆಯಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ತುಮಕೂರಿನಲ್ಲಿ ಮಳೆ ಹೆಚ್ಚಾಯಿತು. ಆಗ 300 ರಿಂದ 400 ರೂಪಾಯಿ ಪರಿಹಾರ ಕೊಟ್ಟರು. ಅದರ ಮೇಲೆ ಇದುವರೆಗೂ ಕೂಡ ಒಂದು ಬಿಡಿಗಾಸೂ ಕೊಡತಕ್ಕ ಪ್ರಯತ್ನ ಆಗಿಲ್ಲ. ಅನಾಹುತ ಆದಾಗ ಎಲ್ಲರೂ ಹೋಗುತ್ತಾರೆ. ಮನೆಗೆ ಬೆಂಕಿ ಬಿದ್ದ ಸಮಯದಲ್ಲಿ ಬಾವಿಯನ್ನು ತೋಡುತ್ತಾರೆ. ಬೆಂಕಿ ಆರಿದಮೇಲೆ ತೋಡುವ ಕೆಲಸ ಅಲ್ಲಿಗೆ ಬಿಡುತ್ತಾರೆ. ಪ್ರವಾಹ ತಪ್ಪಿಸಲು ಮುಂಜಾಗ್ರತೆ ಕ್ರಮ ಏನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವ ಕ್ರಮಕ್ಕೆ ಸರ್ಕಾರ ಕೈ ಹಾಕಿಲ್ಲ. ಇದರಿಂದಾಗಿ ನಾವು ಪದೇಪದೇ ಪ್ರವಾಹದ ದವಡೆಗೆ ಸಿಕ್ಕುತ್ತಿದ್ದೇವೆ. ಈ ವರ್ಷದ ಪ್ರವಾಹದಲ್ಲಿ ಇನ್ನೊಂದು ಅಂಶ ಕಂಡುಬರುವುದು ಏನೆಂದರೆ, ಪ್ರಕೃತಿದತ್ತವಾಗಿ ಆಗಿರತಕ್ಕ ಪ್ರವಾಹದಲ್ಲಿ ಆದ ಅನಾಹುತ ಒಂದು ಕಡೆಯಾದರೆ ಅಧಿಕಾರಿಗಳ ನಿರ್ಲಕ್ಷತೆಯಿಂದ, ಅಧಿಕಾರಿಗಳು ಗೇಟ್ ತೆಗೆಯತಕ್ಕ ಮತ್ತು ಮುಚ್ಚತಕ್ಕ ಕೆಲಸದಲ್ಲಿ ನಿರ್ಲಕ್ಷತೆ ವಹಿಸಿದ್ದರಿಂದ ಆದ ಪ್ರವಾಹಕ್ಕಾಗಿ ಆ ಅಧಿಕಾರಿಗಳ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೋ ನಮಗೆ ಗೊತ್ತಿಲ್ಲ. ಯಾವ ಅಧಿಕಾರಿ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ತೆಗೆದುಕೊಂಡಿದ್ದರೆ, ಸರ್ಕಾರ ಉತ್ತರ ಕೊಡುವಾಗ ಅದನ್ನು ಹೇಳಬೇಕು. ಕಳೆದ ವರ್ಷಕ್ಕಿಂತಲೂ ಹಿಂದೆ, 1987ರಲ್ಲಿ ನಮ್ಮ ಜಿಲ್ಲೆಯಲ್ಲಿ ಮಳೆಯ ವಿಕೋಪದಿಂದ ಸಾಕಷ್ಟು ನಷ್ಟ ಆಯಿತು. ಆ ಸಂದರ್ಭದಲ್ಲಿಯೂ ಕೂಡ, ಸಂದರ್ಭಕ್ಕೆ ತಕ್ಕಹಾಗೆ ಏನೋ ಎಲ್ಲಾ ಬೆಳೆಗಳು ನಾಶವಾದವು. ಈ ಬಗ್ಗೆ ಸರ್ಕಾರಕ್ಕೆ ಎಷ್ಟರಮಟ್ಟಿನ ವರದಿ ಬಂದಿದೆಯೋ ನನಗೆ ಗೊತ್ತಿಲ್ಲ. ಈ ಬಗ್ಗೆ ಸರ್ಕಾರಕ್ಕೆ ವಿನಂತಿಸಿದ್ದರೂ ಯಾರೂ ನೋಡತಕ್ಕ ಸ್ಥಿತಿಯಲ್ಲಿ ಇಲ್ಲ. ಸುಮಾರು 50-60 ಸಾವಿರ ಎಕರೆಯಲ್ಲಿ ಆಲೂಗಡ್ಡೆ ಹೋಗಿದೆ. ಅಷ್ಟೇ ಪ್ರಮಾಣದಲ್ಲಿ ಟೊಮೋಟೋ ಹೋಗಿದೆ. ಇನ್ನೂ ಹೆಚ್ಚು ಪ್ರಮಾಣದಲ್ಲಿ ಅನೇಕ ತರಕಾರಿ ಬೆಳೆಗಳು ನಾಶವಾಗಿವೆ. ಇವೆಲ್ಲಕ್ಕಿಂತಲೂ ಮುಖ್ಯವಾಗಿ ರೇಷ್ಮೆಗೂ ಕೂಡ ಸಾಕಷ್ಟು ಅನಾಹುತವಾಗಿದೆ. ಇಷ್ಟು ಅನಾಹುತವಾಗಿದ್ದರೂ ಇದರ ಬಗ್ಗೆ ಇಲ್ಲಿಯವರೆಗೆ ಯಾವ ಕ್ರಮವನ್ನೂ ಸರ್ಕಾರ ತೆಗೆದುಕೊಂಡಿಲ್ಲ. ಕಳೆದವರ್ಷ ನಮ್ಮ ಜಿಲ್ಲೆಯಲ್ಲಿ 50 ರಿಂದ 60 ಸಾವಿರ

ಮನೆಗಳು ಬಿದ್ದುಹೋದವು. ನಾನು ಆಗಲೇ ಹೇಳಿದಹಾಗೆ 300 ರೂಪಾಯಿಗಳಂತೆ ಕೊಟ್ಟರು. ಆದರ ಮೇಲೆ ಇದುವರೆಗೂ 3 ಕಾಸೂ ಅವರಿಗೆ ತಲುಪಿಲ್ಲ. ಆ ಮನೆಗಳನ್ನು ಕಟ್ಟುವ ಬಗ್ಗೆ ಪತ್ರಿಕೆಗಳಲ್ಲಿ ಪ್ರಚಾರಗಳೋ ಪ್ರಚಾರಗಳು. ಜಾಹಿರಾತು ಕೊಟ್ಟಿದೇ ಕೊಟ್ಟಿದ್ದು. ಆದರೆ ಒಂದು ತಾಲ್ಲೂಕಿನಲ್ಲಿ ಬಿಟ್ಟರೆ ಮಿಕ್ಕ ಯಾವ ತಾಲ್ಲೂಕಿನಲ್ಲಿ ಬಿದ್ದ ಮನೆಗಳನ್ನು ಕಟ್ಟಿಲ್ಲ. ಇದು ಯಾರಿಗೂ ಏಕೆ ಅರ್ಥವಾಗುತ್ತಿಲ್ಲ? ಜನರು ನಿಮ್ಮ ಮೇಲೆ ಬೀಳುವುದಕ್ಕೆ ಮೊದಲು ತುಮಕೂರು, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಆಗಿರತಕ್ಕ ಅನಾಹುತದ ಬಗ್ಗೆ, ಕಳೆದ ವರ್ಷ ಆದ ಅನಾಹುತದ ಬಗ್ಗೆ ಸರ್ಕಾರ ತಕ್ಷಣ ಗಮನಕ್ಕೆ ತೆಗೆದುಕೊಂಡು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಛೇರ್ಮನ್:- ಇನ್ನು 7-8 ನಿಮಿಷಗಳಲ್ಲಿ ಮುಗಿಸಿ. ಇನ್ನೂ 22 ಸದಸ್ಯರ ಹೆಸರು ಪಟ್ಟಿಯಲ್ಲಿ ಇದೆ.

ಶ್ರೀ ವಾಟಾಳ್ ನಾಗರಾಜ್:- ಎಲ್ಲಾ ಮುಗಿಸಿದ್ದೇನೆಂದು ಹೇಳಿ ಅರ್ಧ ನಿಮಿಷದಲ್ಲಿ ಮುಗಿಸಿಬಿಡಿ.

ಶ್ರೀಮತಿ ಮೋಟಮ್ಮ:- ಊಟಕ್ಕೆ ಟೈಮ್ ಆಯಿತು ಎಂದು.

ಶ್ರೀ ವಾಟಾಳ್ ನಾಗರಾಜ್:- ಊಟಕ್ಕೆ ಏಳೋಣ, ಮತ್ತೆ ನಾಳೆ ಚರ್ಚೆಗೆ ಕುಳಿತುಕೊಳ್ಳೋಣ.

ಶ್ರೀ ಸಿ. ಬೈರೇಗೌಡ:- ವಿದ್ಯುತ್ ಸರಬರಾಜು ಬಗ್ಗೆ ನಾವು ಎಷ್ಟು ಚರ್ಚೆ ಮಾಡಿದರೂ ಸಹ ಇವತ್ತಿನ ದಿವಸ ಅದು ಸಾಲದು ಎಂದು ನನ್ನ ಭಾವನೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಇದುವರೆವಿಗೂ ನಮಗೆ ಗೊತ್ತಿಲ್ಲ. ಇದರ ಜೊತೆಯಲ್ಲಿ ನಮ್ಮ ಇತರೆ ಸ್ನೇಹಿತರು ಸಾಲ ವಜಾ ಮಾಡಬೇಕು ಎನ್ನತಕ್ಕಂಥ ಕೆಲಸವನ್ನು ಮಾಡಿ ಎಂದು ಹೇಳುತ್ತಾ ಇದ್ದಾರೆ. ನಾನು ಸರಾಸಗಟಾಗಿ ಸಾಲವನ್ನು ವಜಾಮಾಡಿ ಎಂದು ಹೇಳುವಂಥವನಲ್ಲ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿರುವ ರೈತರಿಗೆ ಸಾಲ ಇದೆ. ನಾನು ಸರ್ಕಾರಕ್ಕೂ ಕೊಡತಕ್ಕ ಸೂಚನೆ ಏನೆಂದರೆ ಒಂದೇ ಸಾರಿ ಮಾತ್ರ, ಕಾನೂನು ಅನ್ವಯವಾಗುವಂತೆ, ಈಗಿರತಕ್ಕಂಥ ಸಾಲದ ಮೇಲೆ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾ ಮಾಡಿ. ಇದು ಎಲ್ಲಾ ರಾಜ್ಯಗಳಿಗೆ ಅನ್ವಯವಾಗುವಂತೆ ಕೇಂದ್ರದವರು ಸಾಲದ ಮೇಲೆ ಬಡ್ಡಿಯನ್ನು ಮತ್ತು ಸುಸ್ತಿ ಬಡ್ಡಿಯನ್ನು ಮಾತ್ರ ವಜಾಮಾಡಿ. ಮಾರ್ಚ್ ಎರಡೂವರೆ ತಿಂಗಳು ಇದೆ. ಒಂದು ಅವಧಿಯನ್ನು ನಿಗದಿ ಪಡಿಸಿ ಮಾರ್ಚಿ ಅಥವಾ ಜೂನ್ ತಿಂಗಳಿನಲ್ಲಿ ರೈತರು ಸಾಲ ವಾಪಸ್ಸು ಕೊಡುವುದಕ್ಕೆ ಅವಕಾಶವನ್ನು ದಯವಿಟ್ಟು ಕಲ್ಪಿಸಿಕೊಡಿ. ಕೊಟ್ಟ ಸಾಲವನ್ನು ವಜಾ ಮಾಡುತ್ತಾ ಇದ್ದರೆ ಖಜಾನೆಯಲ್ಲಿರತಕ್ಕಂತ ಹಣವೆಲ್ಲಾ ಈ ಸಾಲ ವಜಾ ಮಾಡುವುದಕ್ಕೆ ಹೋಗುತ್ತದೆ. ಹೀಗಾದರೆ ಯಾರೂ ಸರ್ಕಾರ ನಡೆಸುವುದಕ್ಕೆ ಆಗುವುದಿಲ್ಲ. ಸಾಲ ಕೊಟ್ಟರೂ ಅದು ವಾಸ್ತವಿಕವಾಗಬೇಕೇ ವಿನಹ ಅದು ಏನೋ ಒಂದು ಹೇಳಬೇಕು ಎನ್ನುವ ಭಾವನೆಯಿಂದ ಹೇಳುತ್ತಿಲ್ಲ. ನನ್ನ ಸಲಹೆ ಏನಿದೆ ಅದು ವಾಸ್ತವಿಕ ಅಂಶಗಳಿಂದ ಕೂಡಿರತಕ್ಕದ್ದು. ಇದನ್ನು ಜಾರಿ ಮಾಡುತ್ತೇವೆ ಎನ್ನತಕ್ಕಂಥದ್ದನ್ನು ದಯವಿಟ್ಟು ಇವತ್ತಿನ ದಿವಸ ಹೇಳಿ. ಪ್ರವಾಹ ಪೀಡಿತ ಪ್ರದೇಶದಲ್ಲಿ ನೀವು ಈ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾ ಮಾಡಲೇಬೇಕಾಗುತ್ತದೆ.

ಇವತ್ತು ರೈತ ಬೆಳೆದ ಬೆಳೆ ಹಾಳಾಗಿ ಹೋದರೆ ಎಲ್ಲಿಂದ ಬಡ್ಡಿ ಮತ್ತು ಅಸಲು ಕೊಡುವುದಕ್ಕಾಗುತ್ತದೆ? ಆದ್ದರಿಂದಲೇ ಬಡ್ಡಿಯ ರಿಯಾಯಿತಿ ಕೊಡಬೇಕಾಗುತ್ತದೆಂದು ನನ್ನ ಆಗ್ರಹ ಇದೆ. ಸುಮಾರು 5-6 ಜಿಲ್ಲೆಗಳಲ್ಲಿ ಈ ಪ್ರವಾಹದ ಹಾವಳಿ ಆಗಿದೆ. ಉಳಿದಿರುತಕ್ಕಂಥ ಸುಮಾರು 10-12 ಜಿಲ್ಲೆಗಳಲ್ಲಿ ಈ ಧೋರಣೆಯನ್ನು ನೀವು ಅಳವಡಿಸಿಕೊಂಡರೆ ಇದರಿಂದ ಸರ್ಕಾರಕ್ಕೆ ನ್ಯಾಯವಾಗಿ ಬರಬೇಕಾದ ಹಣ ಕೂಡ ಬರುತ್ತದೆ. ರೈತರ ಸಾಲವನ್ನು ಕೂಡ,

ಸಾಲದ ಭಾರವನ್ನು ಇಳಿಸಿಕೊಳ್ಳುವುದಕ್ಕೆ ಸಹಕಾರಿಯಾಗುತ್ತದೆ. ಇದನ್ನು ದಯವಿಟ್ಟು ತಾವು ಯೋಚನೆ ಮಾಡಬೇಕು ಎಂದು ಹೇಳಿ ನಾನು ಉಲ್ಲೇಖಿಸುತ್ತಿದ್ದೇನೆ.

ನಮ್ಮ ಜಿಲ್ಲೆಯಲ್ಲಿ ಆಗಿರತಕ್ಕಂಥ ಅನಾಹುತದ ಬಗ್ಗೆ ಮತ್ತೆ ಒಂದು ಸಾರಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. 1987ರಲ್ಲಿ ಅನಾಹುತವಾಗಿದೆ. ಅದರ ಪರಿಹಾರ ಕಾರ್ಯ ಇಲ್ಲಿಯವರೆಗೂ ಆಗಿಲ್ಲ. ಕಳೆದ ವರ್ಷದ ಕೆಲಸ ಆಗಿಲ್ಲ. ಹತ್ತಾರು ಕೆರೆಗಳು ಕಿತ್ತು ಹೋಗಿವೆ. ಅವುಗಳಲ್ಲಿ ಎಷ್ಟು ಕೆರೆಗಳನ್ನು ರೀಪೇರಿ ಮಾಡಿದ್ದಾರೆ, ಎಷ್ಟು ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆಂದು ತಾವು ಉತ್ತರ ಕೊಡುವ ಸಂದರ್ಭದಲ್ಲಿ ದಯವಿಟ್ಟು ತಿಳಿಸಬೇಕು. ಒಟ್ಟಿನಲ್ಲಿ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇಂದರೆ, ಮನೆಗೆ ಬೆಂಕಿಬಿದ್ದ ಸಂದರ್ಭದಲ್ಲಿ ಬಾವಿ ತೋಡತಕ್ಕ ಕೆಲಸವನ್ನು ಖಂಡಿತ ಮಾಡುವುದು ಬೇಡ. ಪೂರ್ವ ಸಿದ್ಧತೆಗಳನ್ನು ಮೊದಲೇ ಮಾಡಿಕೊಳ್ಳಬೇಕು.

ನೀವು ರಾಜಕೀಯವಾಗಿ ನಿಮ್ಮ ವರ್ಚಸ್ಸನ್ನು ಬೀರುವುದರಲ್ಲಿ ವಿಫಲರಾಗಿದ್ದೀರಿ. ಇದು ನಿಮ್ಮ ರಾಜಕೀಯ ದಿವಾಳಿತನವನ್ನು ಎತ್ತಿ ತೋರಿಸುತ್ತಿದೆ. ಕೇಂದ್ರದಿಂದ ನೀವು ಯಾವ ನೆರವನ್ನು ಪಡೆಯಬೇಕೋ ಅದನ್ನು ಪಡೆಯಬೇಕು. ಅವರು ಕೊಡತಕ್ಕ ಪ್ಲಾನ್ ಅಸಿಸ್ಟನ್ಸನ್ನು ತಾವು ಪಡೆಯಬೇಕು. ಅವರು ಕೊಡತಕ್ಕಂಥ ನೆರವನ್ನು ನೀವು ಪಡೆಯದಿದ್ದರೆ, ಅವರು ಇದಕ್ಕೆ ಕಾರಣಕರ್ತರಲ್ಲ. ಪ್ರಕೃತಿ ವಿಕೋಪದಿಂದ ಆಗಿರತಕ್ಕ ನಷ್ಟಕ್ಕೆ ಕೇಂದ್ರದ ನೆರವು ಪಡೆಯಬೇಕೇ ವಿನಹ ನಾವು ಯೋಜನೆಗಳಿಂದ ಹಣವನ್ನು ತರುತ್ತಿದ್ದೇವೆ ಅದರಿಂದ ದೊಡ್ಡ ಸಾಧನೆ ಮಾಡುತ್ತೇವೆ ಎಂದರೆ ಅದು ನಿಮ್ಮ ದಿವಾಳಿತನ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ವೈಸ್‌ಛೇರ್ಮನ್:- ಈಗ ಸದನ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 2.30ಕ್ಕೆ ಸೇರುವುದು.

(ಸದನವು 2 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷೆ ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)

ಉಪಾಧ್ಯಕ್ಷರು:- ಈಗ ಶ್ರೀ ವಾಟಾಳ್ ನಾಗರಾಜ್‌ರವರು ಚರ್ಚೆ ಪ್ರಾರಂಭಿಸಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ವಾಟಾಳ್ ಅವರು ಮಾತನಾಡಲು ಇದು ಸಮಯವಲ್ಲ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷಿಣಿಯವರೇ, ಈಗ....

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾನು ಏಕೆ ಈಗ ಸಮಯವಲ್ಲ ಎಂದು ಹೇಳಿದೆನೆಂದರೆ, 20 ವರ್ಷಗಳ ಅನುಭವ ಅವರಲ್ಲಿ ಇದೆ. ರಾಜ್ಯದಲ್ಲೆಲ್ಲಾ ಅವರು ಪ್ರವಾಸ ಮಾಡಿ ಮಾಹಿತಿ ಸಂಗ್ರಹ ಮಾಡಿದ್ದಾರೆ. ಈಗ ಸಮಯ 3 ಗಂಟೆ ಆಗಿದ್ದು, ಸಭೆಯಲ್ಲಿ ಹೆಚ್ಚಿನ ಸದಸ್ಯರು ಇಲ್ಲದೇ ಇರುವ ಸಮಯ. ಆ ದೃಷ್ಟಿಯಿಂದ ನಾನು ಹೇಳಿದ್ದುದು.

ಶ್ರೀ ವಾಟಾಳ್ ನಾಗರಾಜ್:- ನೆರೆಹಾವಳಿ ಬಗ್ಗೆ ಪ್ರಮುಖ ವಿಚಾರ ಚರ್ಚೆ ಆಗುತ್ತಿದೆ. ಈ ಚರ್ಚೆ ಆಗಬೇಕೆಂದು ವಿಶೇಷವಾಗಿ ನಾವು ಅನೇಕ ಜನ ಸದಸ್ಯರು ನಿಯಮಾವಳಿ ಪ್ರಕಾರ ಬಹಳ ಒತ್ತಾಯ ಮಾಡಿ ಈ ಸದನದ ಸಲಹಾ ಸಮಿತಿ....

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ನಾಗರಾಜ್ ಅವರು ಇಂತಹ ಪ್ರಮುಖವಾದಂತಹ ವಿಷಯದ ಬಗ್ಗೆ ಮಾತನಾಡುತ್ತಿದ್ದಾರೆ. ಕೊನೆಯ ಪಕ್ಷ ರೆಕಾರ್ಡ್‌ಗಾದರೂ ಹೋಗಲಿ ಎಂದು ಈ ವಿಚಾರ ಹೇಳುತ್ತಿದ್ದೇನೆ. ಆಡಳಿತ ಪಕ್ಷದ ಸದಸ್ಯರು ಯಾರೂ ಇಲ್ಲಿ ಇಲ್ಲ. ಸಭೆಯಲ್ಲಿ ಕೋರಂ ಇಲ್ಲ. ಈ ಸ್ಥಿತಿಯಲ್ಲಿ ಸದನ ಪ್ರಾರಂಭ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ತಮಗೆ ಸೂಚನೆ ಕಳುಹಿಸಿದ್ದೇವೆ. ಶಾಸನಸಭಾ ಸಲಹಾ ಸಮಿತಿಯಲ್ಲಿಯೂ ಕೂಡ ಪ್ರಮುಖವಾಗಿ ಚರ್ಚೆಯಾಗಬೇಕೆಂದು ಇದನ್ನು ಗಣನೆಗೆ ತೆಗೆದುಕೊಂಡಿದ್ದೇವೆ. ಇಲ್ಲಿ ಚರ್ಚೆ ಪ್ರಾರಂಭವಾಗಿದೆ. ಎರಡೂ ಕಡೆ ನೋಡಿದರೂ ಸ್ವಲ್ಪ ಹೆಚ್ಚು ಕಡಿಮೆ 20 ಜನ ಇಲ್ಲ. 18 ಜನ ಇದ್ದಾರೆ. ಇಲ್ಲಿ ಸದನದ ಗಂಟೆ ಬಾರಿಸುವುದಕ್ಕೆ ಶುರುವಾಗಿ 25 ನಿಮಿಷ ಆಯಿತು, 25 ನಿಮಿಷವಾದರೂ ಕೋರಂ ಇಲ್ಲ. ಇದು ಪ್ರಜಾಪ್ರಭುತ್ವದ ದೇಗುಲ. ನಾವು ಚುನಾಯಿತರಾಗಿ ಶಾಸನಸಭೆಗೆ ಜನತೆಯ ಪ್ರತಿನಿಧಿಗಳಾಗಿ ಬಂದಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ಇಲ್ಲಿ ಶಾಸಕರಿಗಾಗಿ ಮೀಸಲಿಟ್ಟಿರುವ ಪೀಠಗಳೆಲ್ಲವೂ ಖಾಲಿ, ಎಲ್ಲವೂ ನೂರಕ್ಕೆ 90 ಭಾಗ ಇಲ್ಲಿ ಸಂಪೂರ್ಣ ಖಾಲಿ ಇವೆ. ಅದರಲ್ಲೂ ಆಡಳಿತ ಪಕ್ಷ ದೈತ್ಯ ಶಕ್ತಿ ಪಡೆದಂತಹ ಪಕ್ಷ. ಸರ್ಕಾರಿ ಮುಖ್ಯ ಸಚೇತಕರಾದ ಲಮಾಣಿಯವರು ಮೂರು ಸುತ್ತು ಪ್ರದಕ್ಷಿಣೆ ಮಾಡಿದರೂ ಒಬ್ಬರೂ ಇಲ್ಲ. ಅವರು ಒಬ್ಬರೇ ಒಬ್ಬರು ಅನಂತಕೃಷ್ಣ ಅವರನ್ನು ಹಿಡಿದುಕೊಂಡು ಬಂದರು. ಈ ಸಭೆಯಲ್ಲಿ ಹಿಡಿದುಕೊಂಡು ಬಂದು ಕೂರಿಸುವುದು, ಕೂರಿಸಿ ತಿರುಗ ಹಿಡಿದುಕೊಂಡು ಹೋಗುವುದು. ಇದರ ಮಹತ್ವ ಏನು? ನೆರೆಹಾವಳಿ ಮಹತ್ವದ ಬಗ್ಗೆ ಅನೇಕ ಜನ ಮಿತ್ರರು ಮಾತನಾಡುವವರಿದ್ದಾರೆ. ರಾಜ್ಯದ ಅನೇಕ ಭಾಗಗಳಲ್ಲಿ ಪ್ರವಾಹದಿಂದ ಜನ'ನರಳುತ್ತಿರುವಾಗ ಆ ಬಗ್ಗೆ ಚರ್ಚೆ ನಡೆಯುವ ಕಾಲದಲ್ಲಿ ಈ ರೀತಿ ಆಗಬಾರದು. ಈ ಸದನದ ಗಾಂಭೀರ್ಯತೆ, ಘನತೆ, ಈ ಸದನಕ್ಕೆ ಇರತಕ್ಕ ವ್ಯಕ್ತಿತ್ವ ಅತಿ ಹೆಚ್ಚಿನದು. ನಾವು ಶಾಸನಸಭೆಯನ್ನು ಪುರಸಭೆಗಳಿಗಿಂತಲೂ ಕಡಿಮೆ ಎಂದು ಕಾಣುವುದೆಂದರೆ ಅತ್ಯಂತ ನೋವಾಗುತ್ತದೆ. ಮಾನ್ಯ ರಾಜಶೇಖರಮೂರ್ತಿಯವರು ಸ್ವಾತಂತ್ರ್ಯ ನಂತರ 1952ನೇ ಇಸವಿಯಿಂದಲೂ ಮಾನ್ಯ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ, ಆ ಕಾಲದಲ್ಲಿ ಸದಸ್ಯರಾಗಿದ್ದವರು. ಅವರೇನೂ ಕಡಿಮೆ ಅಲ್ಲ. ಅವರು ಈ ಸದನದ ಗಾಂಭೀರ್ಯತೆ ಬಗ್ಗೆ ಅನೇಕ ಸಾರಿ ಮಾತನಾಡಿದ್ದಾರೆ. ಎಂತಹ ಕಾಲ ಅದು, ಸುವರ್ಣಯುಗ. ನಾನೂ ನೋಡಿದ್ದೇನೆ. 1967ರಲ್ಲಿ 97 ಜನ ವಿರೋಧಿ ಮುಖಂಡರುಗಳು ಇದ್ದ ಈ ಸದನದಲ್ಲಿ ಸಾಹುಕಾರ್ ಚೆನ್ನಯ್ಯನವರು ಇದ್ದರು. ಈ ಸಭೆಯಲ್ಲಿ ಆಗಿನಿಂದ ನೋಡುವುದಾದರೆ ಗೋಪಾಲಗೌಡರು, ನಾಗಪ್ಪನವರು, ಜ್ವಾಲನಯ್ಯನವರು, ಶೆಟ್ಟರ್‌ರವರು, ದೇವೇಗೌಡರು ಇದ್ದರು. ಎಂ.ಎಸ್. ಕೃಷ್ಣನ್ ಅವರು, ಕಕ್ಕಿಲಾಯ ಅವರು ಇದ್ದರು. ಇದೆಲ್ಲಾ ಒಂದು ನೆನಪು. ಇವತ್ತು ಈ ಸ್ಥಿತಿ ನೋಡಿದರೆ ಇಲ್ಲಿ 20 ಜನ ಶಾಸಕರಿದ್ದಾರೆ. ಅಲ್ಲಿ ಇನ್ನುಳಿದ ಅಧಿಕಾರಿಗಳು. ಅದರ ಮಧ್ಯೆ ಸ್ಪೆಷಲ್ ಬ್ರಾಂಚ್‌ನ 3 ಜನ ಪೋಲೀಸರು ಇದ್ದಾರೆ. ಈ ಸದನಕ್ಕೆ.....

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷಿಣಿಯವರೇ, ತಮ್ಮ ಗಮನಕ್ಕೆ ಮತ್ತೊಂದು ವಿಚಾರವನ್ನು ತರುವುದು ಏನೆಂದರೆ, ಇಲ್ಲಿ ನಾವು ನಿರ್ಭೀತಿಯಿಂದ ಕೆಲಸ ಮಾಡಬೇಕು. ಪೋಲೀಸಿನವರಿಗಾಗಲೀ, ಮತ್ತೊಬ್ಬರಿಗಾಗಲೀ ಇಲ್ಲಿ ಅವಕಾಶವಿಲ್ಲ. ನಾನು ತುರ್ತುಸ್ಥಿತಿ ಇದ್ದಂತಹ ಸಂದರ್ಭದಲ್ಲಿ ಈ ಸದನದ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಅವತ್ತೂ ಕೂಡ ಪೋಲೀಸರು ಮೇಲೆ ಅಥವಾ ಇಲ್ಲಿ ಇರುತ್ತಾ ಇರಲಿಲ್ಲ. ಅನೇಕ ಸಂದರ್ಭಗಳಲ್ಲಿ ನಾನು ನೋಡಿದ್ದೇನೆ. ಆ ಕಡೆಯಲ್ಲಿ ಏಳೆಂಟು ಜನ ಕುಳಿತಿರುತ್ತಾರೆ. ಈ ಕಡೆ ಬಂದು ಕೆಲವರು ಕುಳಿತಿರುತ್ತಾರೆ. ಆಮೇಲೆ ಅಫೀಸಿಯಲ್ ಗ್ಯಾಲರಿಯಲ್ಲಿ ಸಹ ಕುಳಿತಿರುತ್ತಾರೆ. ತಮ್ಮ ಅನುಮತಿಯಿಲ್ಲದೆ ಯಾರೂ ಒಳಗಡೆ ಬರುವ ಹಾಗೆ ಇಲ್ಲ.

ಉಪಾಧ್ಯಕ್ಷರು:- ಗ್ಯಾಲರಿಯಲ್ಲಿ ಮೇಲ್ಗಡೆ ಕುಳಿತಿರುವವರು ಪೋಲೀಸ್ ಡಿಪಾರ್ಟ್‌ಮೆಂಟ್‌ನವರು ಅಲ್ಲ. ವಾಚ್ ಅಂಡ್ ವಾರ್ಡ್‌ನವರು.

ಶ್ರೀ ಸಿ. ಬೈರೇಗೌಡ:- ತಮ್ಮ ಅನುಮತಿಯಿಲ್ಲದೆ ಯಾರೂ ಒಳಗಡೆ ಬರುವಹಾಗೆ ಇಲ್ಲ. ಪೋಲೀಸ್‌ನವರನ್ನು ಇಟ್ಟುಕೊಂಡು ಇಲ್ಲಿ ಕೆಲಸ ನಡೆಯುವುದಾದರೆ ಈ ಸದನಕ್ಕೆ ಎಷ್ಟರಮಟ್ಟಿಗೆ ಗೌರವ ಮತ್ತು ಭೂಷಣ ಎನ್ನತಕ್ಕಂಥಹದ್ದು ನನಗಂತೂ ಅರ್ಥವಾಗುತ್ತಿಲ್ಲ. ಏಕೆ ಅಂತಹ

ಪರಿಸ್ಥಿತಿ ಇವತ್ತಿನ ದಿವಸ ಏನಿದೆ ಇಲ್ಲಿ? ನಾವಿಲ್ಲಿ ನಿರ್ಭೀತಿಯಿಂದ ಕೆಲಸ ಮಾಡಬೇಕಾದರೆ ಪೋಲೀಸ್‌ನವರನ್ನು ಇಟ್ಟುಕೊಂಡು ಏನು ಮಾತನಾಡುವುದಕ್ಕೆ ಆಗುತ್ತದೆ? ಸದಸ್ಯರುಗಳ ಮೇಲೆ ಇಷ್ಟೊಂದು ಒತ್ತಡ ಏಕೆ? ಪೋಲೀಸ್‌ನವರನ್ನು ಈ ಸರ್ಕಾರ ಏತಕ್ಕೆ ಕರೆಯಿಸಿದೆ? ಅದರಲ್ಲೂ ಸ್ಪೆಷಲ್ ಬ್ರಾಂಚ್‌ನವರು ಇರತಕ್ಕ ಅವಶ್ಯಕತೆ ಇದೆಯೆ? ಅವರ ಅವಶ್ಯಕತೆ ಇಲ್ಲ. ದಯವಿಟ್ಟು ಅವರು ಇನ್ನುಮುಂದೆ ಇಲ್ಲಿರುವುದಕ್ಕೆ ಅವಕಾಶ ಕೊಡಬಾರದು. ಅವರನ್ನು ಹೊರಗಡೆ ಕಳುಹಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು:- ನಾನು ಹೇಳುವುದಕ್ಕೆ ತಾವು ಬಿಡಲೇ ಇಲ್ಲ. ಮಾನ್ಯ ಬೈರೇಗೌಡರು ಗ್ಯಾಲರಿ ಹತ್ತಿರ ಮೇಲೆ ಕುಳಿತಿರುವವರು ಪೋಲೀಸ್‌ನವರು ಎಂದು ಹೇಳಿದ್ದಾರೆ. ಮೇಲೆ ಪೋಲೀಸ್‌ನವರು ಇಲ್ಲ ವಾಚ್ ಅಂಡ್ ವಾರ್ಡ್‌ನವರು ಇದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇಲ್ಲಿ ಬಂದಿರುವವರು ಸ್ಪೆಷಲ್ ಬ್ರಾಂಚ್‌ನವರು ಅವರು ಬರುವುದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದೀರಾ? ಅವರು ಏತಕ್ಕೆ ಬಂದಿದ್ದಾರೆ? ನಾವು ಇಲ್ಲಿ ಏನು ಮಾತನಾಡುತ್ತೇವೆ ಎಂದು ಕೇಳುವುದಕ್ಕೆ ಬಂದಿದ್ದಾರೆಯೆ? ಹಾಗಾದರೆ ಇದು ಒಂದು ರೀತಿ ಬೆದರಿಕೆಯ ವಾತಾವರಣ. ಮಾನ್ಯ ಬೈರೇಗೌಡರು ಹೇಳಿದಹಾಗೆ ಇದೇನು ತುರ್ತು ಪರಿಸ್ಥಿತಿಯೆ? ಅವರು ಏತಕ್ಕೆ ಬಂದಿದ್ದಾರೆ? ಇಲ್ಲಿ ಏನೇನು ಮಾತನಾಡುತ್ತೇವೆ ಅದನ್ನು ತಿಳಿದು ಯಾರಿಗೆ ವರದಿ ಕೊಡುವುದಕ್ಕೋಸ್ಕರ ಬಂದು ಕುಳಿತಿದ್ದಾರೆ?

ಶ್ರೀ ಎ.ಕೆ. ಅನಂತಕೃಷ್ಣ:- ಈಗ ಸಾಕಷ್ಟು ಮಾನ್ಯ ಸದಸ್ಯರುಗಳು ಬಂದಿದ್ದಾರೆ ತಮ್ಮ ಭಾಷಣ ಶುರುಮಾಡಿ.

ಉಪಾಧ್ಯಕ್ಷರು:- ಅದೇನು ಎಂದು ವಿಚಾರ ಮಾಡಿಸುತ್ತೇನೆ. ದಯವಿಟ್ಟು ಮಾನ್ಯ ವಾಟಾಳ್ ನಾಗರಾಜ್‌ರವರು ಚರ್ಚೆ ಪ್ರಾರಂಭ ಮಾಡಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅನಂತಕೃಷ್ಣರವರು ಹಿರಿಯಸದಸ್ಯರು. ತಾವು ಈ ನಗರದ ಮೇಯರ್ ಆಗಿದ್ದರು. ಮೇಯರ್ ಆಗಿ ಯಾವರೀತಿ ಸಭೆ ನಡೆಸುತ್ತಿದ್ದಿರಿ ಎಂಬುದನ್ನು ನಾನು ನೋಡಿದ್ದೇನೆ. ಪರಿಸ್ಥಿತಿ ಏನಾಗಿದೆ? ನೀವು ಮೇಯರ್ ಆಗಿದ್ದಾಗ ಆ ರಾಜಶಾಹಿ ಗೌನ್ ಬೇಡವೆಂದು ಹೇಳಿದಂಥ ಮೇಯರ್ ನೀವು. ಈಗ ಪರಿಸ್ಥಿತಿ ಏನಾಗಿದೆ? ಈ ಸದನದಲ್ಲಿ ಮುಕ್ತವಾಗಿ ಚರ್ಚೆಯಾಗಬೇಕು, ನಮಗೆ ಸುತ್ತಮುತ್ತ ತುರ್ತು ಪರಿಸ್ಥಿತಿಯಲ್ಲಿ ಮಿಲಿಟರಿ ಮಾತನಾಡುತ್ತಿದ್ದೇವೆಂದಾದರೆ, ಇದು ಮಿಲಿಟರಿ ಪ್ರಭುತ್ವವಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮಗೆ ಅತ್ಯಂತ ಗೌರವವಿದೆ. ಈ ಮನೆಯ ಹೊರಗಡೆ ಇರತಕ್ಕ ಅಂಕಣ ಇದೆಯಲ್ಲ ಅದೂ ಸಹ ತಮಗೆ ಸೇರಿದೆ. ಒಂದು ಸಾರಿ ವೈಕುಂಠಬಾಳಿಗಾರವರು ಶಾಂತವೇರಿ ಗೋಪಾಲಗೌಡರವರನ್ನು ಸಭೆಯಿಂದ ಹೊರಗಡೆ ಹಾಕಿದಾಗ, ನನಗೆ ಗೊತ್ತಿರುವ ಹಾಗೆ, ಈ ಮನೆಯ ಅಂಕಣಕ್ಕೆ ಬರುವುದು ಬೇಡವೆಂದು ಹೇಳಿದ್ದಾರೆ. ಗೋಪಾಲಗೌಡರನ್ನು ಒಳಗಡೆ ಬಿಟ್ಟಿಲ್ಲ. ಇಂತಹ ಪರಿಸ್ಥಿತಿ ಇರುವಾಗ, ಶಾಸನಸಭೆಯಲ್ಲಿ ತಮಗೆ ಇರತಕ್ಕ ಹಕ್ಕು ಆ ಹಕ್ಕನ್ನು ಉಳಿಸಿಕೊಂಡು ಮುಕ್ತವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು:- ಮಾನ್ಯಸದಸ್ಯರು ಈಗ ಚರ್ಚೆ ಪ್ರಾರಂಭ ಮಾಡಿ.

ಶ್ರೀ ಎಸ್.ಹೆಚ್. ಕೌಜಲಗಿ:- ಸ್ಪೆಷಲ್ ಬ್ರಾಂಚ್‌ನವರು ಇಲ್ಲಿ ಬರಬೇಕಾದರೆ ತಮ್ಮ ಪರ್ಮಿಷನ್ ಬೇಕು. ತಮ್ಮ ಪರ್ಮಿಷನ್ ಇಲ್ಲದೆ ಒಳಗಡೆ ಬರುವುದಕ್ಕೆ ಬರುವುದಿಲ್ಲ. ನಾವು ಏನಾದರೂ ಆಫೀಸರ್ ಬಗ್ಗೆ ಮಾತನಾಡಬೇಕಾದರೆ ಮುಕ್ತವಾಗಿ ಮಾತನಾಡುವುದಕ್ಕಾಗುವುದಿಲ್ಲ. ಅವರನ್ನು ನೋಡಿದ ಕೂಡಲೇ ಯಾವುದೇ ಶಬ್ಧಗಳು ಬಾಯಿಂದ ಹೊರಗೆ ಬರುವುದಿಲ್ಲ.

ಸ್ಪೆಷಲ್ ಬ್ರಾಂಚ್‌ನವರು ಇದ್ದಾರೆನ್ನುವ ಭಯವಾಗುತ್ತದೆ. ಇದು ಸರಿಯಲ್ಲ. ವಿಧಾನಸಭೆಯಲ್ಲಿ ಏನು ಮಾತನಾಡಿದರೂ ಅದು ರೆಕಾರ್ಡ್ ಆಗುತ್ತದೆ.

ಉಪಾಧ್ಯಕ್ಷರು:- ನನ್ನ ಗಮನಕ್ಕೆ ವಿಚಾರ ತಂದಿದ್ದೀರಿ. ಯಾರು ಬಂದಿದ್ದಾರೆ ಏನು ಎಂದು ವಿಚಾರ ಮಾಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ತಮಗೆ ಏನು ಗೊತ್ತಾಗುತ್ತದೆ? ಅವರು ಇರುವುದಕ್ಕೆ ವೈಯಕ್ತಿಕವಾಗಿ ನಮ್ಮದೇನೂ ಆರೋಪಣೆಯಿಲ್ಲ. ಪತ್ರಿಕಾಕರ್ತರು ಕುಳಿತುಕೊಳ್ಳುವ ಕಡೆ ಯಾರೋ ನಾಲ್ಕು ಜನ ಬೇರೆಯವರು ಬಂದು ಕುಳಿತುಕೊಂಡರೆ ಏನಾಗುತ್ತದೆ? ಆ ಜಾಗ ಪತ್ರಿಕಾಕರ್ತರಿಗೆ ಇರತಕ್ಕದ್ದು, ಅಲ್ಲಿ ಅವರಿಗೆ ಜಾಗ ಕೊಟ್ಟಿದ್ದಾರೆ. ಅಲ್ಲಿ ಯಾರೋ ಬಂದು ಕುಳಿತುಕೊಳ್ಳತಕ್ಕದ್ದು ಸರಿಯಲ್ಲ, ಅಲ್ಲಿಗೆ ಬೇರೆಯವರು ಬರತಕ್ಕ ವ್ಯವಸ್ಥೆಯಿಲ್ಲ. ಅನೇಕ ಸಲ ಅಧಿಕಾರಿಗಳು ಕುಳಿತುಕೊಳ್ಳುವ ಕಡೆ ಕುಳಿತುಕೊಳ್ಳುವುದು ಸರಿಯಲ್ಲ. 1967ರಲ್ಲಿ ಮೇಲ್ಗಡೆ ಕುಳಿತಿದ್ದಾರೆಂದು ಹೇಳಿದಾಗ ಅಲ್ಲಿ ಕುಳಿತಿದ್ದವರನ್ನು ಓಡಿಸಿದ್ದಾರೆ. ಜನಗಳ ಮಧ್ಯದಲ್ಲಿ ಕುಳಿತಿದ್ದಾರೆ ನೋಡಿ ಎಂದಾಗ ಅವರು ದಡದಡ ಎದ್ದು ಓಡಿದ್ದಾರೆ. ಇಂತಹ ನಿದರ್ಶನಗಳುಂಟು. ಮುಕ್ತವಾಗಿ ಚರ್ಚೆಯಾಗುವುದಿಲ್ಲ, ಚರ್ಚೆ ಮಾಡುವಾಗ ಹಿಡಿಯುತ್ತದೆ, ಈ ರೀತಿಯಾದರೆ ಬಹಳ ಕಷ್ಟವಾಗುತ್ತದೆ. ತಮಗೆ ಇರತಕ್ಕಂಥ ಸಂಪೂರ್ಣವಾದಂಥ ಪರಮಾಧಿಕಾರವನ್ನು ಉಪಯೋಗಿಸಿ ವ್ಯವಸ್ಥೆ ಮಾಡಬೇಕೆಂದು ತಮಗೆ ನಾನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ನೆರೆಹಾವಳಿ ಬಗ್ಗೆ ಈಗಾಗಲೇ ಚರ್ಚೆ ಪ್ರಾರಂಭವಾಗಿದೆ. ರಾಜ್ಯದ ಪತ್ರಿಕೆಗಳಲ್ಲಿ ಬಂದಿರುವ ವರದಿಗಳ ಪ್ರಕಾರ, ಬಂದಿರುವ ಸಂಪಾದಕೀಯಗಳ ಪ್ರಕಾರ, ಅನೇಕ ಜನ ಈ ಪ್ರದೇಶಗಳನ್ನು ನೋಡಿದ ಪ್ರಕಾರ, ಈ ಜಿಲ್ಲೆಯ ಜನ ಹೇಳಿರುವ ಪ್ರಕಾರ, ಇದು ಶತಮಾನದಲ್ಲೇ ಕಂಡರಿಯದ ನೆರೆಹಾವಳಿ ಎಂದು ಹೇಳಿದ್ದಾರೆ. ಇಂತಹ ನೆರೆಹಾವಳಿ ಈ ಶತಮಾನದಲ್ಲಿಯೇ ಬಂದಿರಲಿಲ್ಲವೆಂದು ಅನೇಕರು ಹೇಳಿದ್ದಾರೆ. ನಿಜ, ಮುಖ್ಯಮಂತ್ರಿ ಶ್ರೀ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾದ ತಕ್ಷಣ ಇಂತಹ ಒಂದು ಪರಿಸ್ಥಿತಿಯನ್ನು ಯಾರೂ ಕಂಡಿರಲಿಲ್ಲ. ಒಂದು ಕಡೆ ನೆರೆಹಾವಳಿ, ಮತ್ತೊಂದು ಕಡೆ ಕೋಮು ಗಲಭೆಗಳು, ಒಂದರ ಮೇಲೊಂದು ಪ್ರಾರಂಭವಾಗಿವೆ. ಇದಕ್ಕೆ ಉದ್ದೇಶಗಳು ಪ್ರಕೃತಿಯ ವಿಕೋಪ, ಪರಿಸ್ಥಿತಿಯ ಒಂದು ಸ್ಥಿತಿ. ಈ ಸಂದರ್ಭದಲ್ಲಿ ಕಂದಾಯ ಸಚಿವರಾಗಿ ಶ್ರೀ ರಾಜಶೇಖರ ಮೂರ್ತಿಯವರು ಬಂದಿದ್ದಾರೆ. ಈ ರಾಜ್ಯದಲ್ಲಿ ಮುಕ್ತವಾದ ರಾಜ್ಯಾಡಳಿತವನ್ನು ಕೊಡುತ್ತೇವೆ, ಮತ್ತು ಜನರಿಗೆ ಒಳ್ಳೆಯ ರಕ್ಷಣೆ ಕೊಡುತ್ತೇವೆ, ಜನರ ಪರವಾಗಿ, ಆಧಾರವಾಗಿ ನಿಲ್ಲುತ್ತೇವೆ ಎನ್ನತಕ್ಕಂಥ ವಿಚಾರವನ್ನು ಹೇಳಿದ್ದಾರೆ. ಅವರು ಹಿಂದೆಯೂ ಕೂಡ ಸಚಿವರಾಗಿ ಕೆಲಸ ಮಾಡಿ ರಾಜ್ಯದಲ್ಲಿ ಒಳ್ಳೆಯ ಹೆಸರನ್ನು ಪಡೆದರಾಗಿದ್ದು, ಈಗ ಕಂದಾಯ ಸಚಿವರಾಗಿದ್ದಾರೆ. ಅವರೂ ಸಹ ನೆರೆಹಾವಳಿಯನ್ನು ನೋಡಿಕೊಂಡು ಬಂದಿದ್ದಾರೆ. ಮುಖ್ಯಮಂತ್ರಿಗಳ ಪ್ರಮಾಣವಚನ ಸ್ವೀಕಾರ ಆದನಂತರ ತಕ್ಷಣ ಅವರ ಕೆಲಸ, ನೆರೆಹಾವಳಿಗೆ ಹೋದದ್ದು ಇದೆ. ಅವರು ಹೋಗಿ ನೋಡಿಕೊಂಡು ಬಂದಿದ್ದಾರೆ. ಅವರ ಸರ್ಕಾರದಲ್ಲಿ ನೆರೆಹಾವಳಿ ಬಗ್ಗೆ ಚಿಂತನೆ ಮತ್ತು ಸರ್ಕಾರದ ಧೋರಣೆ ಅದು ಬಹಳ ಪ್ರಮುಖವಾಗಿ ಏನೋ ಇದೆ. ಇದರಲ್ಲಿ ಪ್ರಾಮುಖ್ಯತೆ ಇಲ್ಲವೆಂದು ಹೇಳುವುದಕ್ಕೆ ನಾನು ತಯಾರಿಲ್ಲ. ರಾಜ್ಯದಲ್ಲಿ ಎಷ್ಟರಮಟ್ಟಿಗೆ ನಿಮ್ಮ ಪ್ರಾಮಾಣಿಕತೆ ನಡೆದಿದೆ, ಪರಿಹಾರವನ್ನು ಒದಗಿಸುವುದರಲ್ಲಿ, ಪ್ರಾಣಗಳನ್ನು ಕಳೆದುಕೊಂಡವರಿಗೆ, ಅವರ ನಷ್ಟವನ್ನು ತುಂಬಿಕೊಡುವುದರಲ್ಲಿ ಎಷ್ಟರಮಟ್ಟಿಗೆ ನಿಮ್ಮ ಸರ್ಕಾರ ಸ್ಪಂದಿಸಿದೆ ಎನ್ನುವುದು ಅತಿಮುಖ್ಯ. ಈ ರಾಜ್ಯಕ್ಕೆ ಪ್ರಧಾನಿಯವರು ಬರಲಿಲ್ಲ. ಪ್ರಧಾನಿಯವರು ಬಂದದ್ದು, ಕೇರಳ, ತಮಿಳುನಾಡನ್ನು ನೋಡಿಕೊಂಡು ಹೋಗುವಾಗ ರಸ್ತೆಯಲ್ಲಿ ಕರ್ನಾಟಕ ರಾಜ್ಯ ಕಾಲಕಸ ಸಿಕ್ಕಿದ ಹಾಗೆ ಸಿಕ್ಕಿತು. ರಾತ್ರಿ ವಿಮಾನದಲ್ಲಿ ಹೋಗುವಾಗ ಕತ್ತಲೆಯಲ್ಲಿ ಕರ್ನಾಟಕವನ್ನು ನೋಡಿದರು ಇದು ನಿಜವೇ? ಕೇಂದ್ರಸರ್ಕಾರಕ್ಕೆ ನಮ್ಮ ಕರ್ನಾಟಕ ರಾಜ್ಯ ಕತ್ತಲೆಯ ಹಾಗೆ ಕಾಣುತ್ತಿದೆ. ಕೇಂದ್ರದ ದೃಷ್ಟಿಯಲ್ಲಿ ಕರ್ನಾಟಕ ಕತ್ತಲೆಯಲ್ಲಿದೆ. ಅವರಿಗೆ ಬೆಳಕಂತೂ ಇಲ್ಲವೇ ಇಲ್ಲ.

ಕತ್ತಲೆಯಿರುವ ಸಂದರ್ಭದಲ್ಲಿ ನಮ್ಮ ಸಚಿವಸಂಪುಟ ಸದಸ್ಯರೂ, ಪ್ರಧಾನಮಂತ್ರಿಗಳೂ ಬಂದಿದ್ದರು, ಕತ್ತಲೆಯಲ್ಲಿ ನೋಡಿಕೊಂಡು ಹೋದರು ಎಂದು ಹೇಳಿದರು. ಕತ್ತಲೆಯಲ್ಲಿ ಏನು ನೋಡಿದರು? ನನಗನ್ನಿಸುತ್ತದೆ, ಇದು ವಿಪರ್ಯಾಸ.

ಶ್ರೀ ಎಂ. ರಾಜಶೇಖರಮೂರ್ತಿ:- ಹಾಗೆ ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಪ್ರಧಾನಮಂತ್ರಿಗಳು ಬಂದಿದ್ದರು ಅಂತ ಹೇಳಿಲ್ಲವೇನು ನೀವು?

ಶ್ರೀ ಎಂ. ರಾಜಶೇಖರಮೂರ್ತಿ:- ಕತ್ತಲೆಯಾಗಿತ್ತು, ನೋಡುವುದಕ್ಕೆ ಆಗಲಿಲ್ಲ ಎಂದು ಹೇಳಿದ್ದುದು.

ಶ್ರೀ ವಾಟಾಳ್ ನಾಗರಾಜ್:- ಅವರು ಕೇರಳಕ್ಕೆ ಬರಬೇಕಾದರೆ ಬೆಳಕಲ್ಲಿ ಬರುತ್ತಾರೆ, ತಮಿಳುನಾಡಿಗೆ ಬರಬೇಕಾದರೆ ಬೆಳಕಲ್ಲಿ ಬರುತ್ತಾರೆ. ಆದರೆ ಕರ್ನಾಟಕ ರಾಜ್ಯಕ್ಕೆ ಬರಬೇಕಾದರೆ ಕತ್ತಲೆಯಲ್ಲಿ ಬರುತ್ತಾರೆ. ಅಂದರೆ ನಿಮ್ಮ ನಾಯಕತ್ವ ಕತ್ತಲೆಯಲ್ಲಿದೆ. ಕರ್ನಾಟಕದ ಪರಿಸ್ಥಿತಿ ಕತ್ತಲೆಯಲ್ಲಿದೆ. ಪ್ರಧಾನಮಂತ್ರಿಗಳು ನೆರೆಹಾವಳಿ ನೋಡುವುದಕ್ಕೆ ಬರುತ್ತಿದ್ದಾರೆ, ಅವರಿಗೆ ಸ್ವಾಗತ ಎಂದು ಪತ್ರಿಕೆಗಳಲ್ಲಿ ಪುಟಗಟ್ಟಲೆ ಜಾಹೀರಾತುಗಳನ್ನು ತಾವು ಕೊಟ್ಟಿದ್ದೀರಿ: ತಾವು ಸತ್ಯವನ್ನೇ ಹೇಳಿಬಿಡಿ. ಇದರಲ್ಲಿ ಮುಜುಗರ ಆಗುವುದು ಬೇಡ.

ಉಪಾಧ್ಯಕ್ಷಿಣಿಯವರು:- ಪೇಪರ್‌ನಲ್ಲಿ ಬಂದಮೇಲೆ ಇನ್ನೇನು?

ಶ್ರೀ ವಾಟಾಳ್ ನಾಗರಾಜ್:- ಅಂದಮೇಲೆ ತಾವು ಸ್ವಾಗತಮಾಡಿ ಪತ್ರಿಕೆಯಲ್ಲಿ ಹೇಳಿದಮೇಲೆ, ನೀವು ಹೇಳುವುದಕ್ಕೂ, ಪತ್ರಿಕೆಯಲ್ಲಿ ಬಂದಿರುವುದಕ್ಕೂ ಸಂಬಂಧ ಇಲ್ಲ. ಹಾಗಾದರೆ ನೀವು ಹೇಳುವ ಪ್ರಕಾರ ಪ್ರಧಾನಮಂತ್ರಿಗಳು ಇಳಿಯಲಿಲ್ಲ, ನೋಡಲಿಲ್ಲ, ಆಯಿತು, ಅವರು ನೋಡಲಿಲ್ಲ, ಹೊರಟುಹೋದರು ಎಂದು ಹೇಳಿದಿರಿ ನೀವು. ಅಂದಮೇಲೆ, ನೀವು ಪತ್ರಿಕೆಗಳಲ್ಲಿ ಜಾಹಿರಾತು ಕೊಟ್ಟು, ಅವರಿಗೆ ಸ್ವಾಗತ ಮಾಡುವಂಥಾದ್ದು ಏನಿತ್ತು? ಯಾರು, ಯಾರದೋ ಮನೆಗೆ ಊಟಕ್ಕೆ ಬಂದಿರುವಾಗ, ಕೇಂದ್ರಸರ್ಕಾರದವರು ಕರ್ನಾಟಕವನ್ನು ಊಟ ಮಾಡುವಂಥ ಎಂಜಲ ಎಲೆ ಎಂದು ತಿಳಿದುಕೊಂಡಿದ್ದಾರೆಯೇ? ಕೇಂದ್ರಸರ್ಕಾರಕ್ಕೆ ಕರ್ನಾಟಕದ ಮೇಲೆ ಗಮನ ಇಲ್ಲವೇ? ಕರ್ನಾಟಕದಲ್ಲಿ ಒಂದು ಸರ್ಕಾರ ಇದೆ, ಕರ್ನಾಟಕದಲ್ಲಿ ನಾಲ್ಕೂವರೆ ಕೋಟಿ ಜನ ಇದ್ದಾರೆ, ಕರ್ನಾಟಕ ಪರಿಸ್ಥಿತಿ ಏನು ಎಂಬುದು ಕೇಂದ್ರಸರ್ಕಾರಕ್ಕೆ ಅರ್ಥವಾಗಲಿಲ್ಲವೆಂದು ಹೇಳುವುದಾದರೆ, ಕೇಂದ್ರಸರ್ಕಾರಕ್ಕೆ ಅರ್ಥವಾಗುವ ಭಾಷೆಯಲ್ಲಿ ಹೇಳತಕ್ಕಂಥ ನಾಯಕತ್ವ ನಿಮ್ಮಲ್ಲಿ ಇಲ್ಲ. ಈಗ ಇದೊಂದೇ ಉಳಿದಿರತಕ್ಕಂಥಾದ್ದು. ಕೇಂದ್ರಸರ್ಕಾರಕ್ಕೆ ಹೆದರಿಸಿ, ಬೆದರಿಸಿ, ನಾಯಕತ್ವವನ್ನು ಉಳಿಸಿಕೊಂಡು, ಕೇಂದ್ರವನ್ನೇ ತಮ್ಮ ರಾಜ್ಯಕ್ಕೆ ದಡದಡನೆ ಓಡಿಬರಬೇಕೆಂದು ಮಾಡಿರತಕ್ಕ ಒಬ್ಬ ಮಹಿಳೆ ಕುಮಾರಿ ಜಯಲಲಿತಾ, ಇವರೂ ಕರ್ನಾಟಕದವರೇ. ನಿಮ್ಮ ಸರ್ಕಾರದ ಆಡಳಿತ ಏನಾಯಿತು? ಕೇಂದ್ರದಲ್ಲಿ ನಿಮಗೆ ಬೆಲೆ ಇಲ್ಲವೇ? ಕೇಂದ್ರದಲ್ಲಿ ನಿಮಗೆ ಗೌರವ ಇಲ್ಲವೇ? ಕೇಂದ್ರಸರ್ಕಾರಕ್ಕೆ ನಿಮ್ಮ ಬಗ್ಗೆ ನಂಬಿಕೆ ಇಲ್ಲವೆ? ಕೇಂದ್ರಸರ್ಕಾರ ಇದೊಂದೇ ಸಲ ಅಲ್ಲ, ಮೊದಲಿನಿಂದಲೂ ಕರ್ನಾಟಕವನ್ನು ಗುಲಾಮಗಿರಿಯಾಗಿ ನೋಡುತ್ತಿದೆ. ಕೇಂದ್ರದವರು ಯಾವುದೋ ದೊಡ್ಡ ರಾಜರು ಇದ್ದಹಾಗೆ, ಕರ್ನಾಟಕದವರು ಅವರಿಗೆ ಕಪ್ಪಕಾಣಿಕೆಗಳನ್ನು ಒಪ್ಪಿಸುವಂಥ ಗುಲಾಮರು ಇದ್ದಹಾಗೆ, ಈ ರೀತಿ ನಡೆದಿದೆ. ಕೇಂದ್ರದ ವಿರುದ್ಧ ಪರಿಣಾಮಕಾರಿಯಾದ ನಾಯಕತ್ವವನ್ನು ಕೊಡತಕ್ಕ ಶಕ್ತಿ ಕರ್ನಾಟಕದಲ್ಲಿ ಇಲ್ಲವೇ ಇಲ್ಲ. ಕರ್ನಾಟಕದಲ್ಲಿ ನಾಯಕತ್ವವನ್ನು ನಾನು ಸುಮಾರು 10-15 ವರ್ಷಗಳಿಂದ ನೋಡುತ್ತಿದ್ದೇನೆ. ವೀರಪ್ಪ ಮೊಯಿಲಿಯವರು ಒಬ್ಬರೇ ಎಂದಲ್ಲ. ಕೇಂದ್ರದ ಜೊತೆಯಲ್ಲಿ ಕರ್ನಾಟಕವನ್ನು ನೋಡಿದ ತಕ್ಷಣ, ಹೆದರತಕ್ಕ ಭಯ, ಭೀತಿ ಬರತಕ್ಕ

ವಾತಾವರಣ ಕರ್ನಾಟಕದಲ್ಲಿ ಇದುವರೆಗೂ ನಿರ್ಮಾಣವಾಗಿಲ್ಲ. ಬೆಳಿಗ್ಗೆ ಸದನ ಸೇರಿದಾಗ ನಾನು ಹೇಳಿದೆ. ಈಗತಾನೆ ರೈಲ್ವೆ ಆಯವ್ಯಯ ಮಂಡನೆಯಾಗುತ್ತಿದೆ, ಈ ಬಗ್ಗೆ ನಾವೆಲ್ಲರೂ ಸೇರಿ, ಕೇಂದ್ರದ ಮಂತ್ರಿಗಳಿಗೆ ಹೇಳೋಣ. ನಮಗೆ ರೈಲ್ವೆ ಬೇಡಿಕೆಗಳ ಬಗ್ಗೆ ಇಷ್ಟೊಂದು ಅನ್ಯಾಯವಾಗಿದೆ, ಈ ಬಗ್ಗೆ ನಾವೆಲ್ಲರೂ ಹೋಗೋಣ ಎಂದು ಹೇಳಿದೆ. ಕೇಂದ್ರದಿಂದ ರೈಲ್ವೆ ಬೇಡಿಕೆ ಬಗ್ಗೆ ಅನ್ಯಾಯವಾಗಿದೆ, ವಿಜಯನಗರದ ಉಕ್ಕು ಕಾರ್ಖಾನೆ ವಿಚಾರದಲ್ಲಿ ಅನ್ಯಾಯವಾಗಿದೆ, ಮಹಾಜನ್ ವರದಿಯ ಬಗ್ಗೆ ಅನ್ಯಾಯವಾಗಿದೆ. ಹೀಗೆ ಕೇಂದ್ರಸರ್ಕಾರ ಪ್ರತಿಯೊಂದರಲ್ಲೂ ಕರ್ನಾಟಕವನ್ನು ಕಡೆಗಾಣಿಸಿದೆ. ನೆರೆಹಾವಳಿ ಬಂದಾಗ, ಕೊನೆಗೆ ಕರುಣೆ ಬಂದು, ಪರಿಹಾರವನ್ನೂ ಕೊಡತಕ್ಕ ಮನಸ್ಸು ಮಾಡಲಿಲ್ಲ. ಇದು ಪರಿಸ್ಥಿತಿ ಹೀಗಿದೆ.

ಶ್ರೀಮತಿ ಮೋಟಮ್ಮ:- ಪ್ರಧಾನ ಮಂತ್ರಿಯವರು ಭೇಟಿ ಕೊಟ್ಟು, ಪರಿಹಾರವನ್ನು ಜಾಸ್ತಿ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು, ಅವರ ಉತ್ತರದಲ್ಲಿ ಹೇಳುತ್ತಾರೆ.

ಶ್ರೀ ಸಿ. ಬೈರೇಗೌಡ:- ನಮ್ಮ ಕಡೆ ಏನು ಹೇಳುತ್ತಾರೆಂದರೆ, ''ಕ್ಯಾಬಿನೈ, ಬರೇ ಬೆತ್ತಲೆ'' ಎಂದು ಹೇಳುತ್ತಾರೆ. ಇದು ಅವರು ಕೊಟ್ಟಿರುವುದು.

ಶ್ರೀ ವಾಟಾಳ್ ನಾಗರಾಜ್:- ನಿಜ. ಕೇಂದ್ರದವರು ಆಂಧ್ರಕ್ಕೆ, ಕೇರಳಕ್ಕೆ ಮತ್ತು ತಮಿಳುನಾಡಿಗೆ ಕೊಟ್ಟಿರತಕ್ಕ ಹಣ ಎಷ್ಟು? ಕರ್ನಾಟಕಕ್ಕೆ ಕೊಟ್ಟಿರತಕ್ಕ ಹಣ ಎಷ್ಟು? ಕರ್ನಾಟಕದ ಇತಿಹಾಸದಲ್ಲಿ ಈ ರೀತಿಯ ನೆರೆಹಾವಳಿ ಬಂದಿರಲಿಲ್ಲ ಎನ್ನುವಂಥಾದ್ದು ಪ್ರತಿಯೊಬ್ಬರ ಅನಿಸಿಕೆ. ನಡೆದದ್ದು ವಸ್ತು ಸ್ಥಿತಿಯೂ ಹಾಗೆಯೇ. ಕೇಂದ್ರಸರ್ಕಾರದವರು ನಮ್ಮನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ಅವರು ಕಡೆಗಾಣಿಸಿದರು, ನಮ್ಮ ಲೋಕಸಭಾ ಸದಸ್ಯರು, ಅವರಾದರೂ ಕೇಂದ್ರದ ಮೇಲೆ ಒತ್ತಡ ತಂದು, ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ಹೇಳತಕ್ಕ ಧ್ವನಿ ಸಹ ಇವರಿಗೂ ಇಲ್ಲ. ನಮ್ಮ ಕೇಂದ್ರದ ಮಂತ್ರಿಗಳು, ಅವರಿಗೂ ಧ್ವನಿ ಇಲ್ಲ. ಇನ್ನು ನಮ್ಮ ಪರಿಸ್ಥಿತಿ ಏನು? ಕೇಂದ್ರದಲ್ಲಿರುವ ಕರ್ನಾಟಕದ ಮಂತ್ರಿಗಳಿಗೆ, ಕರ್ನಾಟಕದ ಲೋಕಸಭಾ ಸದಸ್ಯರಿಗೆ ಈ ಧ್ವನಿ ಇಲ್ಲ. ಬರೀ ಇದೊಂದೇ ಅಲ್ಲ. ಎಲ್ಲಾ ಸಮಸ್ಯೆಗಳಲ್ಲೂ ಧ್ವನಿ ಇಲ್ಲ, ಗಂಟಲು ಇಲ್ಲ, ನಾಲಿಗೆ ಇಲ್ಲ. ಆದರೆ, ನಮ್ಮ ಕರ್ನಾಟಕ ರಾಜ್ಯದ ಜನತೆಯಿಂದ ಮತ ಪಡೆದು ಲೋಕಸಭೆಗೆ ಹೋಗಿದ್ದಾರೆ, ಮತ ಪಡೆದು ಮಂತ್ರಿಗಳಾಗಬೇಕು. ನಮಗೆ ಮಾತ್ರ ಉಪಯೋಗ ಇಲ್ಲ. ಒಂದು ಉದಾಹರಣೆಯನ್ನು ಕೊಡುತ್ತೇನೆ. ಕಾವೇರಿ ಸಂದರ್ಭ ಬಂದಾಗ, ತಮಿಳುನಾಡಿನ ಮಂತ್ರಿ ರಾಜಿನಾಮೆಯನ್ನು ಪ್ರಧಾನಮಂತ್ರಿಯವರ ಮುಖಕ್ಕೆ ಎಸೆದು ಬಂದರು. ಅಂತಹ ಶಕ್ತಿವಂಥ ರಾಜಕಾರಣಿಗಳು ನಮ್ಮಲ್ಲಿ ಯಾರಾದರೂ ಮುಂದೆ ಬಂದರೇ? ಇವತ್ತು ಈ ಪರಿಸ್ಥಿತಿ ನಮಗೆ ದೊಡ್ಡ ಅಘಾತವಾಗಿದೆ. ಇವತ್ತು ದೆಹಲಿಗೆ ಹೋದರೆ ಕರ್ನಾಟಕ ರಾಜ್ಯ ಭೂಪಟದಲ್ಲಿ ಇದೆಯೋ ಇಲ್ಲವೋ ಎಂಬ ರೀತಿ ಬಂದಿದೆ. ಭಾರತದ ಭೂಪಟದಲ್ಲಿ ಕರ್ನಾಟಕ ರಾಜ್ಯ ಇದೆ ಎಂದು ತೋರಿಸತಕ್ಕಂಥ ಶಕ್ತಿ ಇವತ್ತು ಕರ್ನಾಟಕದಲ್ಲಿ ಇಲ್ಲ. ಭಾರತದ ಭೂಪಟದಲ್ಲಿ ಕನ್ನಡಿಗರು ಇದ್ದಾರೆ ಎನ್ನತಕ್ಕಂಥ ಗುರುತು ಹೇಳತಕ್ಕಂಥ ಒಂದು ಶಕ್ತಿ ನಮ್ಮಲ್ಲಿ ಇಲ್ಲ. ಇಡೀ ಕರ್ನಾಟಕ ಭವನದಲ್ಲಿ ನೀವು ಹೋಗಬೇಕು, ಕರ್ನಾಟಕ ಭವನ ಹೆಸರಿಗೆ, ಅಲ್ಲಿ ಒಬ್ಬರೂ ಕನ್ನಡಿಗರು ಇಲ್ಲ. ಈ ಪರಿಸ್ಥಿತಿ ಸಣ್ಣ ಮಟ್ಟದಲ್ಲೂ ಇದೆ, ದೊಡ್ಡ ಮಟ್ಟದಲ್ಲೂ ಇದೆ, ನಮ್ಮಲ್ಲಿ ಮಂತ್ರಿಗಳಾಗಿ ಗಂಭೀರವಾಗಿ ಇದ್ದು ಬಿಡೋಣ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ನಾನು ಬೆಳಿಗ್ಗೆ ತಮ್ಮ ಗಮನಕ್ಕೆ ತಂದೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾನ್ಯ ದಾಸಪ್ಪನವರಿಂದ ಹಿಡಿದು ಸನ್ಮಾನ್ಯ ಜಾಫರ್ ಷರೀಫ್‌ರವರೆಗೆ ಎಲ್ಲಾ ಕರ್ನಾಟಕದವರೇ ರೈಲ್ವೆ ಮಂತ್ರಿಗಳಾಗಿದ್ದಾರೆ, ನಾನು ಜಾಫರ್ ಷರೀಫ್‌ರವರನ್ನು ವಿರೋಧ ಮಾಡುತ್ತಾ ಇಲ್ಲ. ಸ್ವಲ್ಪ ಕೆಲವು ವಿಚಾರದಲ್ಲಿ ನಾನು ಅವರನ್ನು ಅಭಿನಂದಿಸುತ್ತೇನೆ, ರೈಲ್ವೆ ವಿಚಾರದಲ್ಲಿ ಅವರು ಬಂದಾಗ ಕೆಲವು ಆಗಿದೆ, ಆದರೆ ಯಾವ ಪ್ರಮಾಣದಲ್ಲಿ ಕೆಲಸ ಆಗಬೇಕೋ ಆ ಪ್ರಮಾಣದಲ್ಲಿ ಆಗಿಲ್ಲ. ಇದು ಅತ್ಯಂತ ನೋವಿನ

ಪ್ರಸಂಗ, ಇದನ್ನು ನಾವು ಎಲ್ಲಿಯವರೆಗೆ ಸಹಿಸಿಕೊಂಡು ಇರಬೇಕು, ಕರ್ನಾಟಕಕ್ಕೆ ಏಟಿನಮೇಲೆ ಏಟು, ಕೇಂದ್ರ ಸರಕಾರದವರು ನಮ್ಮನ್ನು ಒಡೆಯುತ್ತಿದ್ದಾರೆ, ಕೇಂದ್ರ ಸರಕಾರದವರು ಕಾಲ ಕಸದಂತೆ ನಮ್ಮನ್ನು ಕಾಣುತ್ತಿದ್ದಾರೆ. ಕೇಂದ್ರ ಸರಕಾರ ಕನ್ನಡಿಗರನ್ನು ಗುಲಾಮರಂತೆ ಮಾಡಿಕೊಂಡಿದ್ದಾರೆ, ನಾವು ನಮ್ಮ ಶಕ್ತಿಯನ್ನು ಪ್ರದರ್ಶನ ಮಾಡಲಿಲ್ಲ ಎಂದರೆ ಬಹಳ ಕಷ್ಟವಾಗುತ್ತದೆ. ನಿಮ್ಮಲ್ಲಂತೂ ನಾನು ಆ ಶಕ್ತಿಯನ್ನು ಕಂಡಿಲ್ಲ. ನಿಮ್ಮ ಸರಕಾರದಲ್ಲಿ, ಹಿಂದಿನ ಸರಕಾರದಲ್ಲಿ, ಅದರ ಹಿಂದಿನ ಸರಕಾರದಲ್ಲಿ ಆ ಶಕ್ತಿಯನ್ನು ನಾನು ಕಂಡಿಲ್ಲ. ಕಾರಣ ಏನು ಎಂದರೆ 5 ವರ್ಷಕ್ಕೆ ನಾಲ್ಕು ಜನ ಮುಖ್ಯಮಂತ್ರಿಗಳನ್ನು ಬದಲಾವಣೆ ಮಾಡತಕ್ಕಂಥ ಏಜೆನ್ಸಿಯಾಗಿ ಕೇಂದ್ರದಲ್ಲಿ ಕುಳಿತುಕೊಂಡಿರುವಾಗ, ಇವರಿಗೆ ಯಾವ ಶಕ್ತಿ ಬರುತ್ತದೆ. ನೀವು ತಾನೆ ನಿಮಗೆ ಎಷ್ಟು ಆತ್ಮಸ್ಥೈರ್ಯ ಇದೆ ಎಂದು ಅವರಲ್ಲಿಗೆ ಹೋಗುತ್ತೀರಿ. ನೀವು ಸ್ಥೈರ್ಯ ತೆಗೆದುಕೊಂಡಿದ್ದೀರಾ, ಕೇಂದ್ರದ ಮೇಲೆ ಪ್ರಭಾವ ಬೀರತಕ್ಕಂಥ ಶಕ್ತಿಯನ್ನು ಸಮಗ್ರವಾಗಿ ನೀವು ತೆಗೆದುಕೊಂಡಿದ್ದೀರಾ? ಇದರ ಬಗ್ಗೆ ರಾಜ್ಯದಲ್ಲಿ ಸಮಗ್ರ ಚಿಂತನೆ ಆಗಬೇಕು, ಕರ್ನಾಟಕದ ಉಳಿವಿಗಾಗಿ ಕನ್ನಡಿಗರ ಏಳಿಗೆಗಾಗಿ, ಕರ್ನಾಟಕದ ಅಭಿವೃದ್ಧಿಗಾಗಿ, ಕೇಂದ್ರದ ವಿರುದ್ಧ ತಿರುಗಿ ಬೀಳತಕ್ಕಂಥ ಒಂದು ಸಮಗ್ರ ಶಕ್ತಿ ಇವತ್ತು ರಾಜ್ಯದಲ್ಲಿ ನಿರ್ಮಾಣ ಆಗಬೇಕಾಗಿದೆ. ಅದು ಸನ್ನಿಹಿತವಾಗುತ್ತಿದೆ. ಇದೇ ರೀತಿ ಮಾಡುತ್ತಾ ಇದ್ದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ.

ಅಸ್ಸಾಂ ಪರಿಸ್ಥಿತಿ ಏನಾಯಿತು? ಬೇರೆ ಬೇರೆ ರಾಜ್ಯಗಳ ಪರಿಸ್ಥಿತಿ ಏನಾಯಿತು, ತುಳಿತಕ್ಕೆ ಸಿಕ್ಕಿ, ತುಳಿದೂ, ತುಳಿದೂ, ಧ್ವನಿಯನ್ನು ಮುಚ್ಚಿ, ತುಳಿಯುವಾಗ್ಗೆ, ಈ ನೋವನ್ನು ತಾಳಲಾರದೆ, ಈ ಮನುಷ್ಯ ಸಿಟ್ಟಿಗೆದ್ದು, ಭೂತದೋಪಾದಿಯಲ್ಲಿ ಸ್ಫೋಟನೆ ನಿರ್ಮಾಣವಾಗುತ್ತದೆ. ಕರ್ನಾಟಕದಲ್ಲೂ ಸಹಿತ ಕೇಂದ್ರದ ವಿರುದ್ಧ ಒಂದು ದೊಡ್ಡ ಹೋರಾಟ ಪ್ರಾರಂಭ ಆಗತಕ್ಕ ದಿನಗಳು ಸನ್ನಿಹಿತವಾಗಿವೆ ಎಂಬ ಮಾತನ್ನು ತಮ್ಮ ಮೂಲಕ ಕೇಂದ್ರಕ್ಕೆ ಎಚ್ಚರಿಕೆ ಕೊಡುತ್ತಿದ್ದೇನೆ. ಕರ್ನಾಟಕದಲ್ಲಿ ಸುಮಾರು ನೆರೆಹಾವಳಿಯಾಗಿ 50 ದಿನಗಳು ಕಳೆದಿದೆ. ಇದು ಬಹಳ ಭೀಕರವಾದ ಪರಿಣಾಮವಾಗಿ ಬಹಳ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಬೆಳೆ ನಾಶದ ಬಗ್ಗೆ ಒಂದು ಚಿತ್ರ ನಿಮ್ಮಲ್ಲಿ ಇದೆಯೇ? ಒಂದು ಸ್ಪಷ್ಟ ಚಿತ್ರ ನಿಮ್ಮಲ್ಲಿ ಇದೆಯೇ? ಎಷ್ಟು ಬೆಳೆ ನಾಶವಾಗಿರಬಹುದು, 140 ಕೋಟಿ ಎಂದು ಮಾನ್ಯ ಕಂದಾಯ ಸಚಿವರು ಹೇಳುತ್ತಿದ್ದಾರೆ ಅವರ ಮಾತನ್ನು ನಂಬುತ್ತೇನೆ, ನೀವು ಪರಿಹಾರ ಕೊಟ್ಟಿರುವುದು ಎಷ್ಟು, 25 ಕೋಟಿ ರೂಪಾಯಿಗಳನ್ನೂ ದಾಟಿಲ್ಲ. 140 ಕೋಟಿ ಎಂದು ನಿಮಗೆ ಲೆಕ್ಕಾಚಾರಕ್ಕೆ ಸಿಕ್ಕಿರುವಾಗ ಕೊಟ್ಟಿರತಕ್ಕಂಥ ಪರಿಹಾರ ಎಷ್ಟು, ಇನ್ನು ಮನೆಗಳು ಎಷ್ಟು ಹೋಗಿರಬಹುದು ದನಕರುಗಳು ಎಷ್ಟು ಹೋಗಿರಬಹುದು.

ಶ್ರೀ ಎಂ. ರಾಜಶೇಖರಮೂರ್ತಿ:– ಒಟ್ಟು 307 ಕೋಟಿ.

ಶ್ರೀ ವಾಟಾಳ್ ನಾಗರಾಜ್:– 307 ಕೋಟಿ ರೂಪಾಯಿ ನಾಶವಾಗಿದೆ ಎನ್ನತಕ್ಕಂಥಾದ್ದು ತಮ್ಮ ಅಂದಾಜು, ತಮ್ಮ ಅಂಕಿಅಂಶಗಳ ಪ್ರಕಾರ ಇಷ್ಟಾಗಿದೆ. ನಾನು ತಮ್ಮನ್ನು ಅತ್ಯಂತ ಗೌರವದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಆರ್ಥಿಕವಾಗಿ ಇಷ್ಟು ನಷ್ಟವಾಗಿರಬಹುದು, ಮಾನಸಿಕವಾಗಿ ಎಷ್ಟಾಗಿದೆ, ಹಣದ ಲೆಕ್ಕಾಚಾರ ಬೇರೆ, ಮಾನಸಿಕವಾಗಿ ನಷ್ಟವಾಗಿರತಕ್ಕಂಥ ಪರಿಸ್ಥಿತಿಯನ್ನು ನೋಡಿದಾಗ ನೀವು 50 ದಿನಗಳಲ್ಲಿ ತಮ್ಮ ಸರಕಾರ ಈ ಜನಗಳಿಗೆ ಪರಿಹಾರಕ್ಕಾಗಿ, ಮನೆಗಳನ್ನು ಕಟ್ಟಿಸುವುದಕ್ಕಾಗಿ, ದನಕರುಗಳಿಗೆ ಕೊಟ್ಟಿರತಕ್ಕಂಥ ಪರಿಹಾರ ಎಷ್ಟು, ಬೆಳೆ ನಾಶದ ಪರಿಹಾರ ಎಷ್ಟು ಕೊಟ್ಟಿದ್ದೀರಿ ಸ್ವಾಮಿ ಇದುವರೆಗೆ?

ಎಷ್ಟು ಕೊಟ್ಟಿದ್ದೀರಿ ತಾವು ದಯಮಾಡಿ ಹೇಳಿ. ಅದಕ್ಕೋಸ್ಕರ ನಾನು ಏನು ಹೇಳುತ್ತೇನೆಂದರೆ ನಾನು ಬಹಳ ಜವಾಬ್ದಾರಿಯಿಂದ ತಮ್ಮ ಬಗ್ಗೆ ಗೌರವ ಇಟ್ಟುಕೊಂಡು ಈ ಮಾತನ್ನು ಹೇಳುತ್ತಿದ್ದೇನೆ. 307–308 ಕೋಟಿ ರೂಪಾಯಿಗಳ ವ್ಯವಹಾರ ಎಂದು ಹೇಳುತ್ತಿದ್ದೀರಿ. ನನ್ನ ಪ್ರಕಾರ ಇದು ಇನ್ನೂ ಜಾಸ್ತಿ. ಕನಿಷ್ಠ 500 ಕೋಟಿ ರೂಪಾಯಿಗಳ ಮೇಲೆ ಹೋಗಿದೆ.

ಸರಿಯಾಗಿ ಈ ಬಗ್ಗೆ ಒಂದು ಶ್ವೇತಪತ್ರವನ್ನು ಇಲ್ಲಿ ಹೊರಡಿಸಬೇಕು. ಅದನ್ನು ಈ ಸಭೆಯ ಮುಂದೆ ಇಡಿ. ನೆರೆಹಾವಳಿಯಿಂದ ನಷ್ಟವಾಗಿರತಕ್ಕಂಥ ಪರಿಸ್ಥಿತಿ ಏನೇನು ಆಗಿದೆ. ದನಕರುಗಳು ಎಷ್ಟು? ಮನುಷ್ಯರು ಎಷ್ಟು? ಪ್ರಾಣ ಹಾನಿ ಎಷ್ಟು? ಮನೆಗಳನ್ನು ಕಳೆದುಕೊಂಡವರು ಎಷ್ಟು? ಈಗ ಇದರಿಂದ ಆಗಿರತಕ್ಕಂಥ ಭಾವನಾತ್ಮಕ ನಷ್ಟ ಎಷ್ಟು? ಇವೆಲ್ಲವನ್ನೂ ಸೇರಿಸಿ ಒಂದು ಶ್ವೇತಪತ್ರವನ್ನು ಈ ಸದನದ ಮುಂದೆ ಇಡಬೇಕಾಗುತ್ತದೆ. ತಾವು ಇಂಥಾದ್ದನ್ನೆಲ್ಲಾ ಮೊದಲೇ ಮಾಡಬಹುದೆಂದು ನಾನು ತಿಳಿದುಕೊಂಡಿದ್ದೆ. ನೀವು ಇಂತಹ ಕೆಲಸ ಮಾಡತಕ್ಕಂಥಾದ್ದಲ್ಲಿ ಬಹಳ ಚುರುಕು. ತಾವು ಈ ಬಾರಿ ಸ್ವಲ್ಪ ಜಾರಿದ್ದೀರಿ ಎಂದು ನನ್ನ ಮನಸ್ಸಿನಲ್ಲಿ ವ್ಯಥೆಯಾಗುತ್ತಿದೆ. ಆದ್ದರಿಂದ ದಯಮಾಡಿ ಶ್ವೇತಪತ್ರ ಇಡಿ. ಇನ್ನು ತಡವೇನು ಆಗಿಲ್ಲ. ಕರ್ನಾಟಕ ರಾಜ್ಯದ ಜನತೆಯ ಮುಂದೆ ನೀವು ಒಂದು ಶ್ವೇತಪತ್ರವನ್ನು ಪ್ರಕಟಿಸಿ ಇಷ್ಟು ಕೋಟಿ ರೂಪಾಯಿಗಳ ನಷ್ಟವಾಗಿದೆ ನಾವು ಇಷ್ಟು ಕೋಟಿ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೇವೆ ಎಂದು ಹೇಳಿ. ಇದರಲ್ಲಿ ನನಗನಿಸುತ್ತದೆ ಪರಿಹಾರ ಕಾರ್ಯದಲ್ಲಿ ನಿಮ್ಮ ಮನಸ್ಸು ಇದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ತಮ್ಮ ಉದ್ದೇಶ ಚೆನ್ನಾಗಿದೆ. ನಿಮ್ಮ ಸರ್ಕಾರ ಕೊಡಬಾರದು ಜನಗಳಿಗೆ ಅಂತ ಏನೂ ಇಲ್ಲ. ಆದರೆ ಬಂಡವಾಳ ಇಲ್ಲ ಬಡಾಯಿ, ಎಲ್ಲಿದೆ ಬಂಡವಾಳ? ನಿಮ್ಮ ಬಂಡವಾಳ ತೋರಿಸಿ? ಎಲ್ಲರ ಮುಂದೆ ನೀವು ಬಡಾಯಿ ಕೊಚ್ಚಿಕೊಳ್ಳುತ್ತೀರಿ. 500 ಕೋಟಿ ರೂಪಾಯಿಗಳಲ್ಲಿ ನೀವು ಪರಿಹಾರ 25 ಕೋಟಿ ರೂಪಾಯಿಗಳು ಕೊಟ್ಟಿಲ್ಲ ಅಂದರೆ ಯಾರ ಮುಂದೆ ನಿಮ್ಮ ಬಡಾಯಿ? ಯಾರ ಮುಂದೆ ನಿಮ್ಮ ಬಂಡವಾಳ ಇಲ್ಲದ ಬಡಾಯಿ ಇಂದು ನಿಜವಾಗಿಯೂ ರೈತ ಜನ ಅವರು ತ್ರಿಶಂಕು ಸ್ವರ್ಗದಲ್ಲಿ ಇದ್ದಾರೆ. ಅವರು ಬೆಳೆಯನ್ನು ಬೆಳೆದು ಕಾಳನ್ನು ತುಂಬಿ ಕಣಜಕ್ಕೆ ತರುವಷ್ಟರಲ್ಲಿ ನರಕಯಾತನೆ ಪಡಬೇಕಾಗುತ್ತದೆ. ಇವತ್ತಿನ ಪರಿಸ್ಥಿತಿಯಲ್ಲಿ ಗೊಬ್ಬರದ ಬೆಲೆ ರಸಗೊಬ್ಬರದ ಬೆಲೆ, ದನದ ಗೊಬ್ಬರ ಸಿಗುವುದಿಲ್ಲ ಬಿಡಿ, ಕೇವಲ ಒಂದು ವರ್ಷಕ್ಕೆ ನಾಲ್ಕು ಸಾರಿ ಔಷಧಿ ಹೊಡೆಯಬೇಕು. ಬ್ಯಾಂಕುಗಳ ಬಡ್ಡಿ ಕೊಡಬೇಕು. ವಿದ್ಯುತ್ಛಕ್ತಿ ಮಂಡಲಿ ಹೀಗೆ ಒಂದರಿಂದ ಒಂದು ನರಕಯಾತನೆಯನ್ನು ರೈತ ಅನುಭವಿಸುತ್ತಾನೆ. ಅವನು ಬೆಳೆದ ಬೆಳೆ ನೀರಿನಲ್ಲಿ ನಾಶವಾಗಿದೆ. ಅವನು ಕಂಗಾಲಾಗಿ ಬೀದಿಯಲ್ಲಿ ಬಿದ್ದಿದ್ದಾನೆ. ಬಕಾಸುರನ ಹೊಟ್ಟೆಗೆ ಅರ್ಧ ಕಾಸಿನ ಮಜ್ಜಿಗೆ ಎಂದು ಹೇಳುತ್ತಾರಲ್ಲ ಹಾಗೆ ಸ್ವಲ್ಪ ಪರಿಹಾರ ಕೊಟ್ಟರೆ ಇದು ಸರಿಯಾಗುತ್ತದೆಯೇ? ಪ್ರಾಮಾಣಿಕವಾಗಿ ನಾನು ನಿಮ್ಮನ್ನು ದೂಷಣೆ ಮಾಡುತ್ತಿಲ್ಲ, ನಿಮ್ಮ ಮೇಲೆ ಆಪಾದನೆ ಮಾಡುತ್ತಿಲ್ಲ. ನಿಮ್ಮ ಹೃದಯ ಮುಟ್ಟಿ ತಾವೇ ಹೇಳಿ. ತಾವೂ ಕೂಡ ರೈತರಾಗಿದ್ದವರು ಪರಿಸ್ಥಿತಿ ಏನಾಗಿದೆ? ಅದೆ ಒಬ್ಬ ಕೈಗಾರಿಕಾ ಮಾಲೀಕ ಬಂದು ಎಷ್ಟೋ ಕೋಟಿ ರೂಪಾಯಿಗಳು ನಷ್ಟ ಮಾಡಿದರೂ ಅವನನ್ನು ಬಿಡುತ್ತೀರಿ. ಬ್ಯಾಂಕುಗಳವರು ಬಿಡುತ್ತಾರೆ. ಸರ್ಕಾರಿ ಹಣ ಕೊಟ್ಟಿರುವವರು ಬಿಡುತ್ತಾರೆ. ಆದರೆ ರೈತನ ಪರಿಸ್ಥಿತಿ ಏನು? ರೈತ ಈ ದೇಶದ ಬೆನ್ನೆಲುಬು. ಆ ರೈತನ ಪರಿಸ್ಥಿತಿ ಏನಾಗಿದೆ? ಕರ್ನಾಟಕ ರಾಜ್ಯದಲ್ಲಿ ಕೆಲವು ಕಡೆ ಪರಿಹಾರ ಎಂದು ಹೇಳಿ ಈಗ ಬದಲಾವಣೆ ಆಗಿರಬಹುದು? ರೂಪಾಯಿಗಳ ಬ್ಯಾಂಕ್ ಚೆಕ್‌ಪರಿಹಾರ ಕೊಟ್ಟಿದ್ದಾರೆ. ನಾಚಿಕೆಯಾಗುತ್ತದೆ. ರೂಪಾಯಿಗಳ ಬ್ಯಾಂಕ್ ಚೆಕ್ ತೆಗೆದುಕೊಂಡು ಹೋಗಿ ಬ್ಯಾಂಕ್‌ಗೆ ಹಾಕಿ ಅವನು ಬ್ಯಾಂಕ್‌ನಿಂದ ದುಡ್ಡು ತೆಗೆದುಕೊಳ್ಳುವಷ್ಟರಲ್ಲಿ ಸುಮಾರು ನೂರು ರೂಪಾಯಿಗಳು ಖರ್ಚಾಗುತ್ತದೆ. ಈಗ ಮಿನಿಮಮ್ 100 ರೂಪಾಯಿ ಮಾಡಿದ್ದೀರಿ. ಆ ನೂರು ರೂಪಾಯಿಯಲ್ಲಿ ಒಂದು ಮಸಾಲೆ ದೋಸೆಗೆ 50 ರೂಪಾಯಿ ಆಗುತ್ತದೆ, ದೊಡ್ಡದೊಡ್ಡ ಹೋಟೆಲ್‌ಗಳಲ್ಲಿ.

ಶ್ರೀ ಹೆಚ್. ವಿಶ್ವನಾಥ್:- ರೈತರು ಯಾರೂ 50 ರೂಪಾಯಿ ಮಸಾಲೆ ದೋಸೆ ತಿನ್ನುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ವಿಶ್ವನಾಥ್ ತಾವು ನನ್ನ ಜೊತೆಯಲ್ಲಿದ್ದವರು. ತಾವು ನನ್ನ ಖಾತೆಯಲ್ಲಿ ಬರುತ್ತೀರಿ ಅಷ್ಟು ಸುಲಭವಾಗಿ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ, ಕೇಳಿ ಬೇಕಾದರೆ. ನನ್ನ ಜೊತೆಯಲ್ಲಿ ಸುಮಾರು 10 ವರ್ಷ ಇದ್ದರು. ಅದು ಇರಲಿ. ರೈತರು 50 ರೂಪಾಯಿ ದೋಸೆ ತಿನ್ನುವ ಪ್ರಶ್ನೆ ಅಲ್ಲ. ರೈತರ ಬೆಳೆ ಎಷ್ಟು ಹೋಗಿರುತ್ತದೆ ಎನ್ನತಕ್ಕಂಥ ಸಂಪೂರ್ಣ

ವಿವರಗಳನ್ನು ತರಿಸಿ ನೀವು ಅದಕ್ಕಿಂತ ಜಾಸ್ತಿ ಕೊಡುವುದಕ್ಕೆ ಹೋಗಬೇಡಿ. ಎಷ್ಟು ಬೆಳೆ ಹೋಗಿದೆ ಅಷ್ಟು ದುಡ್ಡು ಕೊಡಬೇಕಲ್ಲ. ನೀವು ಇದರ ಬಗ್ಗೆ ಒಂದು ತೀರ್ಮಾನ ಮಾಡಬೇಕು. ಸಾಲ ವಸೂಲಿ ಮಾಡಬೇಡಿ. ನೆರೆಹಾವಳಿಯಿಂದ ಸಾಲ ತೆಗೆದುಕೊಂಡಿರತಕ್ಕಂಥವರ ಸಾಲವನ್ನು ಮನ್ನಾ ಮಾಡಿ. ಗೊಬ್ಬರ ಬೀಜ ಉಚಿತವಾಗಿ ಕೊಡುತ್ತೀರಾ? ಏನೇನು ಇಲ್ಲ. 50 ದಿವಸ ಆಯಿತು ರೈತ ಬದುಕಿಲ್ಲ ಅವನು ಸತ್ತಿದ್ದಾನೆ. ನೀವು, ನೆರೆಹಾವಳಿಯಲ್ಲಿ ಸತ್ತವರಿಗೆ ಎಷ್ಟು ಕೊಡುತ್ತಿದ್ದೀರಿ ಸ್ವಾಮಿ? 40 ಸಾವಿರ. ಕೋಮು ಗಲಭೆಯಲ್ಲಿ ಸತ್ತವರಿಗೆ ಎಷ್ಟು ಕೊಡುತ್ತೀರಿ? 1 ಲಕ್ಷ, 2 ಲಕ್ಷ. ಅವರಿಗೆ ಏಕೆ ಸ್ವಾಮಿ 1 ಲಕ್ಷ ಕೊಡಬಾರದು? 40 ಸಾವಿರ ಏಕೆ ಕೊಟ್ಟಿರಿ? ಇನ್ನು 60 ಸಾವಿರ ರೂಪಾಯಿ ಏಕೆ ಕೊಡಬಾರದು? ಅವರು ಏನು ಮಾಡಿದ್ದಾರೆ? ಇವರು ಏನು ಮಾಡಿದ್ದಾರೆ? ಪರಿಸ್ಥಿತಿಯ ವಿಕೋಪಕ್ಕೆ ನೆರೆಹಾವಳಿಗೆ ಯಾವುದೇ ತೊಂದರೆ ಮಾಡದ ಒಬ್ಬ ಶಾಂತಪುರುಷ ಆಗಿರುವವನು ನೀರಿನಲ್ಲಿ ಮುಳುಗಿಯೋ, ಮನೆ ಬಿದ್ದೋ ಸತ್ತಿರುವವರಿಗೆ ಕೊಡುವುದಕ್ಕೆ ಹೋಗುವುದಿಲ್ಲ. ರಸ್ತೆಯಲ್ಲಿ ಬಂದು ಗದ್ದಲ ಮಾಡಿ ಗೋಲೀಬಾರ್‌ನಲ್ಲಿ ಸತ್ತವರಿಗೆ ತಕ್ಷಣ ಓಡಿ ಹೋಗುತ್ತೀರಿ. ಎಲ್ಲಿ? ಎಲ್ಲಿದ್ದಾರೆ? ಎಂದು ಚೆಕ್ ಬರೆದು ರೆಡಿ ಮಾಡಿ ಅವನು ಸತ್ತ 24 ಗಂಟೆಯೊಳಗೆ ಚೆಕ್ ಕೊಡುತ್ತೀರಿ. ಈ ರೈತನಿಗೆ ಕೊಡುತ್ತೀರಾ ಸ್ವಾಮಿ? ಎಷ್ಟು ಕಡೆ ರೈತರು ಸತ್ತಿದ್ದಾರೆ? ರೈತರಿಗೆ ಒಂದು ಲಕ್ಷ ರೂಪಾಯಿ ಏಕೆ ಮಾಡಲಿಲ್ಲ ನೀವು? ಬಡವರಿಗೆ ಏಕೆ ಮಾಡಲಿಲ್ಲ. ನೀವು ರೈತರು ಕಳೆದುಕೊಂಡಿರತಕ್ಕ ಮನೆಗಳ ಹತ್ತಿರ ನೀವು ಹೋಗಿದ್ದೀರಾ? ಸುಮ್ಮನೆ ಹೋದಿರಿ, ಸುತ್ತಿದಿರಿ, ಬಂದಿರಿ. ಪರಿಹಾರ ಕಾರ್ಯದಲ್ಲಿ ನನಗಂತೂ ಅತ್ಯಂತ ನೋವಾಗುತ್ತಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೇಳುತ್ತಾರೆ ಕಥೆಯನ್ನು ಅಧ್ಯಕ್ಷರೆ, ಇತಿಹಾಸದಲ್ಲಿ ಆ ತರಹ ಮಳೆ ಚಿಕ್ಕಮಗಳೂರಿನಲ್ಲಿ ಎಂದೂ ಬಂದಿರಲಿಲ್ಲ. ಜಿಲ್ಲೆಯ ರಸ್ತೆಗಳ ಮೇಲೆ 3–4 ಅಡಿ ನೀರು. ಅದು ಇತಿಹಾಸದಲ್ಲಿ ಇಲ್ಲವೆಂದು ಹೇಳುತ್ತಾರೆ. ರಸ್ತೆಗಳು ಕೊಚ್ಚಿಹೋಗಿವೆ. ಕರ್ನಾಟಕದಲ್ಲಿ ಹೆಚ್ಚು ಕಡಿಮೆ 10 ಜಿಲ್ಲೆಯ ರಸ್ತೆಗಳು ನಿರ್ನಾಮವಾಗಿವೆ. ರಸ್ತೆಗಳಿಗೆ ನೀವು ಕಾಮಗಾರಿ ಹಣವನ್ನು ಎಷ್ಟು ಒದಗಿಸಿದ್ದೀರಿ? ಕಾಮಗಾರಿ ಕೆಲಸವನ್ನು ಎಷ್ಟು ಮಾಡಿದ್ದೀರಿ ಈಗ? ಇಲ್ಲ. ಅಂದರೆ

ಶ್ರೀಮತಿ ಮಲ್ಲಾಜಮ್ಮ:– ಎಷ್ಟು ಮಿಲಿಮೀಟರ್ ಮಳೆಯಾಗಿದೆಯೆಂದು ತಾವು ಹೇಳಬಹುದು, ಚಿಕ್ಕಮಗಳೂರು ಜಿಲ್ಲೆಯಲ್ಲಿ. ಇತಿಹಾಸದಲ್ಲಿ ಆಗಿಲ್ಲ ಅಂದ್ರಲ್ಲ ಅದಕ್ಕೆ.

ಶ್ರೀ ವಾಟಾಳ್ ನಾಗರಾಜ್:– ನೀವು ಕೊಟ್ಟಿರುವ ಪುಸ್ತಕದಲ್ಲಿ ಪಂಚಾಂಗ ನಾನು ಓದುತ್ತಿದ್ದೇನೆ. ಇದು ಸರ್ಕಾರ ಕೊಟ್ಟಿರುವ ಪಂಚಾಂಗವೆ. ಅದರಿಂದ ತಮಗೆ ಹೇಳುತ್ತಿದ್ದೇನೆ, ಮೋಟಮ್ಮನವರೇ ಚಿಕ್ಕಮಗಳೂರಿನಲ್ಲಿ ರಸ್ತೆಗಳು ಕೊಚ್ಚಿಲ್ಲವೇ? ತಾವು ಹೃದಯ ಬಿಚ್ಚಿ ಹೇಳಿ.

ಶ್ರೀಮತಿ ಮೋಟಮ್ಮ:– ನಾನು ಅದರ ಬಗ್ಗೆ ಮಾತನಾಡಲಿದ್ದೇನೆ. ಅವರು ಹೇಳಿದ್ದುದು, ಇತಿಹಾಸದಲ್ಲಿ ಮಳೆ ಅಷ್ಟೊಂದು ಬಿದ್ದಿಲ್ಲ ಅಂದ್ರಲ್ಲಾ, ಅದಕ್ಕೆ ಅವರಿಗೆ ಮಾಹಿತಿ ಇರಬೇಕೆಂದು, ಎಷ್ಟು ಮಿಲಿಮೀಟರ್ ಬಿದ್ದಿದೆ ಎಂದು ಕೇಳಿದ್ದಾರೆ. ತಪ್ಪೇನು ಅದರಲ್ಲಿ?

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಆ ಜಿಲ್ಲೆಗೆ ಕೊಡತಕ್ಕಂಥ ಎಲ್ಲಾ ಹಣವನ್ನು ಬೇರೆ ಜಿಲ್ಲೆಗೆ ವರ್ಗಾಯಿಸಬಹುದು ತಾವು. ಹಾಸನ ಜಿಲ್ಲೆಯಲ್ಲಿ 70 ವರ್ಷದಿಂದ ಬಂದಿರಲಿಲ್ಲ ಅಂಥಾ ಮಳೆ. ತಾವು ಒಪ್ಪುತ್ತೀರಿ ಎಂದು ಕಾಣಿಸುತ್ತದೆ ಗೌಡರೇ? ಇವರಾದರೂ ಒಪ್ಪುತ್ತಾರಲ್ಲ ಸಧ್ಯ. ನೀವು ಒಪ್ಪದೇ ಇದ್ದರೂ ಚಿಂತೆ ಇಲ್ಲ. ಇಲ್ಲಿ ಏನಾಗಿದೆ ಕೆಲವರಿಗೆ ಅಂದರೆ, ನೆರೆಹಾವಳಿ ಬಂದರೂ ಕಾಂಗ್ರೆಸ್ಸೆ, ದೇಶಕ್ಕೆ ಬೆಂಕಿ ಬಿದ್ದರೂ ಕಾಂಗ್ರೆಸ್ಸೆ, ಈ ರಾಜ್ಯ ನಾಶವಾದರೂ ಕಾಂಗ್ರೆಸ್ಸೆ, ಎಲ್ಲಾ ಬರೀ ಕಾಂಗ್ರೆಸ್ಸೆ ನೀವು. ಪಕ್ಷ ಬಿಟ್ಟು ಮುಕ್ತವಾಗಿ ಚರ್ಚೆಗೆ ಬನ್ನಿ. ಆಗ ನಿಮಗೆ ಗೊತ್ತಾಗುತ್ತದೆ, ಈ ಪರಿಸ್ಥಿತಿಯಾಗಿದೆ ಅಧ್ಯಕ್ಷರೆ. ಬಹಳ ಅತ್ಯಂತ ದುಃಖದ ವಿಚಾರ ಎಂದು ಹೇಳಿದರೆ, ಹಂಪೆಯ ಕನ್ನಡ ವಿಶ್ವವಿದ್ಯಾನಿಲಯ. ಕನ್ನಡ ವಿಶ್ವವಿದ್ಯಾನಿಲಯ ಹಂಪೆಯಲ್ಲಿ

ಬರಬೇಕೆಂದು ಹೇಳಿ ಬಹಳ ಪ್ರಯತ್ನ ನಡೆದು ಆ ಒಂದು ಕೀರ್ತಿ ಶ್ರೀಮಾನ್ ಮೊಯಿಲಿಯವರಿಗೆ ಹೋಗಬೇಕು. ಅವರು ವಿದ್ಯಾ ಸಚಿವರಾಗಿದ್ದಾಗ, ಕನ್ನಡ ವಿಶ್ವವಿದ್ಯಾನಿಲಯ ಬರಬೇಕೆಂದು ಕೇಳಿ, ಸಮಗ್ರವಾಗಿ, ನಿರಂತರವಾಗಿ ಹೋರಾಟ ಮಾಡಿದಂಥಾದ್ದು. ಅಧ್ಯಕ್ಷರೆ, ಆ ವಿಶ್ವವಿದ್ಯಾನಿಲಯ ನೆರೆಹಾವಳಿಯಲ್ಲಿ ಮುಳುಗಿ ಹೋಯಿತು. ಒಳ್ಳೊಳ್ಳೆಯ ಸಂಶೋಧನೆಯ ಪುಸ್ತಕಗಳು ನೀರು ಪಾಲಾಯಿತು. ಒಳ್ಳೊಳ್ಳೆಯ ಗ್ರಂಥಗಳು ನೀರು ಪಾಲಾಯಿತು. ಇಡೀ ವಿಶ್ವವಿದ್ಯಾನಿಲಯ ನೀರು ಪಾಲಾಯಿತು. ಅದಕ್ಕೆ ಬೆಲೆ ಕಟ್ಟುವುದಕ್ಕೆ ಸಾಧ್ಯವೇ ಇಲ್ಲ. ಅಂಥ ಬೆಲೆ, ಓಲೆಗರಿಗಳು, ಎಂಥೆಂಥಾ ಓಲೆಗರಿಗಳು ಇದ್ದವು ಎಂದರೆ, ಇವತ್ತು ಏನಾಯಿತು? ಕೊನೆಗೆ ವಿಶ್ವವಿದ್ಯಾನಿಲಯದಲ್ಲಿ ಉಪ ಕುಲಪತಿಗಳು ಬಿಸಿಲಿನಲ್ಲಿ ಪುಸ್ತಕ ಬಿಚ್ಚಿಕೊಂಡು ಒಣಗಿಸತಕ್ಕಂಥ ಪರಿಸ್ಥಿತಿ ಬಂದುಬಿಟ್ಟಿತು. ಆ ಒಂದು ನಷ್ಟವನ್ನು ತುಂಬಿಕೊಡುವುದಕ್ಕೆ ನಿಮ್ಮ ಕೈಯಲ್ಲಿ ಆಗುತ್ತದೆಯೇ ಇವತ್ತು? ಇದರ ಬಗ್ಗೆ ನಿಮಗೆ ಗಮನ ಇರಲಿಲ್ಲವೆ? ಇಂಥಾ ಪವಿತ್ರವಾದ ವಿಶ್ವವಿದ್ಯಾನಿಲಯ ಎಷ್ಟು ನಷ್ಟವನ್ನು ಅನುಭವಿಸಿದೆ? ಅಷ್ಟು ನಷ್ಟವನ್ನು ತಾವು ಒಂದು ನಯಾಪೈಸೆ ಇಲ್ಲದಂತೆ ತುಂಬಿಕೊಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಮಗೆ ಒತ್ತಾಯ ಮಾಡಿ ಹೇಳುತ್ತಿದ್ದೇನೆ. ನನಗನ್ನಿಸಿದ ಪ್ರಕಾರ ಇವೊತ್ತು ಸತ್ತವರ ಸಂಖ್ಯೆಯು 150ಕ್ಕೂ ಹೆಚ್ಚು ಇರಬಹುದು. ತಮಗೆ ದೊರಕಿದ ದಾಖಲೆ ಪ್ರಕಾರ 60–70 ಜನರು ಇರಬಹುದು. ಅವರಿಗೆ 40 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದೀರಿ, ಕೋಮುಗಲಭೆಯಲ್ಲಿ ಸತ್ತವರ ಕುಟುಂಬಗಳಿಗೆ 1 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ, ಅದೇ ಪ್ರಕಾರ ಇವರುಗಳ ಕುಟುಂಬದವರಿಗೂ ಕೂಡ ಇನ್ನೂ 60 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿ ಒಂದು ಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ಕೊಡಬೇಕೆಂದು ತಮ್ಮ ಮೂಲಕ ಸರಕಾರವನ್ನು ಒತ್ತಾಯ ಮಾಡುತ್ತೇನೆ.

ಇಂಥ ಒಂದು ಕೆಟ್ಟ ಪರಿಸ್ಥಿತಿಯು ಇತ್ತೀಚಿನ ದಿವಸಗಳಲ್ಲಿ ನಮ್ಮ ರಾಜ್ಯದಲ್ಲಿ ಬಂದಿರಲಿಲ್ಲ. ಕೆರೆಗಳು, ರಸ್ತೆಗಳು, ಮುಂತಾಗಿ ಎಲ್ಲವೂ ಹಾಳಾಗಿ ಹೋಗಿವೆ. ಹೀಗೆ ಕೆಟ್ಟು ಹೋದ ಕೆರೆಗಳನ್ನು, ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ನೀವು ಪಿಡಬ್ಲ್ಯೂಡಿಯವರು ಸೇರಿ ಸಮರ್ಪಕವಾದಂಥ ಒಂದು ಯೋಜನೆಯನ್ನು ಮಾಡಿ, ಅಲ್ಲಿ ಎಷ್ಟು ನಷ್ಟವಾಗಿದೆ, ಅದನ್ನು ನೀವು ಇಷ್ಟು ದಿವಸಗಳಲ್ಲಿ, ಇಷ್ಟು ತಿಂಗಳುಗಳಲ್ಲಿ, ಇಷ್ಟು ವರ್ಷಗಳಲ್ಲಿ, ಮಾಡಿ ಮುಗಿಸಿಕೊಡುತ್ತೇವೆ ಅದಕ್ಕಾಗಿ ವಿಶೇಷವಾದಂಥ ಹಣಕಾಸಿನ ವ್ಯವಸ್ಥೆಯನ್ನು ಇಡುತ್ತೇವೆ, ಎಂದು ಹೇಳಬೇಕು. ಅಂಥ ಒಂದು ಯೋಜನೆಯನ್ನು ತಯಾರು ಮಾಡಿ ಅದರ ಪ್ರಕಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ನೆರೆಹಾವಳಿಗೆ ತುತ್ತಾಗಿರುವ ಪ್ರದೇಶಗಳಲ್ಲಿ ಪರಿಹಾರವನ್ನು ಕೊಡುತ್ತಾ ಇದ್ದೀರಿ. ಈ ಪರಿಹಾರವನ್ನು ಯಾರು ಹಂಚಬೇಕು? ಎಲ್ಲೆಲ್ಲಿ ನೆರೆಹಾವಳಿಯಿಂದ ತೊಂದರೆಗೆ ಈಡಾದ ಪ್ರದೇಶಗಳು ಇವೆ, ಆ ಪ್ರದೇಶಗಳಲ್ಲಿನ ಶಾಸಕರು ಯಾರಿದ್ದಾರೆ, ಅವರುಗಳನ್ನು ಕಡೆಗಣಿಸಿ ಜಿಲ್ಲಾಧಿಕಾರಿಯವರು, ತಹಶೀಲ್ದಾರರು ಚೆಕ್‌ಗಳನ್ನು ಕೊಡುವುದು ಸರಿಯೇ? ಇದಕ್ಕಿಂತ ಅಧಿಕಾರಿಗಳ ಒಂದು ಕೆಟ್ಟ ವರ್ತನೆ, ಅಧಿಕಾರಿಶಾಹಿ ಪ್ರವೃತ್ತಿ ಇನ್ನು ಮುಂದೆ ಎಂದೂ ಬರಬಾರದು. ಜಿಲ್ಲಾಧಿಕಾರಿಗಳು ಹೋಗಿ ಜನರಿಗೆ ಚೆಕ್‌ನ್ನು ಕೊಡುವುದು ಸರಿಯೇ? ಜಿಲ್ಲಾಧಿಕಾರಿಯು ಚೆಕ್‌ನ್ನು ಹರಿದು ಶಾಸಕರ ಕೈಯಲ್ಲಿ ಕೊಟ್ಟು ವಿತರಣೆ ಮಾಡಬೇಕೇ ಹೊರತು, ನೇರವಾಗಿ ಅವರೇ ಪರಿಹಾರವನ್ನು ಕೊಡುವುದಲ್ಲ. ಈ ಬಗ್ಗೆ ಒಂದು ತನಿಖೆಯಾಗಬೇಕು. ಯಾವ ಜಿಲ್ಲಾಧಿಕಾರಿ, ಯಾವ ತಹಶೀಲ್ದಾರರು, ಶಾಸಕರನ್ನು ಕಡೆಗಣಿಸಿ ಚೆಕ್‌ನ್ನು ಪರಿಹಾರ ರೂಪವಾಗಿ ಕೊಟ್ಟಿದ್ದಾರೆ, ಅಂಥವರ ಬಗ್ಗೆ ನೀವು ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಜಿಲ್ಲಾಧಿಕಾರಿಗಳು, ತಹಶೀಲ್ದಾರರು ಇರತಕ್ಕಂಥಾದ್ದು ಈ ಕೆಲಸಕ್ಕಾಗಿ ಅಲ್ಲ. ಈ ಕೆಲಸವನ್ನು ಮಾಡತಕ್ಕಂಥವರು ಜನಪ್ರತಿನಿಧಿಗಳು. ನಿಮ್ಮ ಅಧಿಕಾರಿಗಳು ಅದನ್ನು ಅರ್ಥಮಾಡಿಕೊಳ್ಳಬೇಕು. ನಿಮ್ಮಲ್ಲಿ .ಕೆಲವು ಅಧಿಕಾರಿಗಳಿಗೆ ಎರಡು ಕೊಂಬುಗಳು ಇವೆ. ಹಾಗೆಯೇ ಕೆಲವರು ಒಳ್ಳೆಯ

ಅಧಿಕಾರಿಗಳೂ ಇದ್ದಾರೆ, ಅಂಥವರನ್ನು ನಾನು ಇಲ್ಲಿ ಸದನದಲ್ಲಿಯೇ ಅಭಿನಂಧಿಸಿದ್ದೇನೆ. ಇದು ಒಂದು ಪಕ್ಷದ ನೀತಿ ಅಲ್ಲ. ಸಮಗ್ರವಾಗಿ ಎಲ್ಲರ ಕುರಿತಾಗಿ ಹೇಳುತ್ತಾ ಇದ್ದೇನೆ. ಎಲ್ಲಾ ಶಾಸಕರುಗಳೂ ಕೂಡ ಈ ವಿಚಾರದಲ್ಲಿ ಪಕ್ಷಭೇದ ಮರೆತು ಕೆಲಸ ಮಾಡಬೇಕು. ಇದರ ಬಗ್ಗೆ ತಾವು ಒಂದು ಸುತ್ತೋಲೆಯನ್ನು ಕಳುಹಿಸಬೇಕು. ಇಂಥ ಪರಿಹಾರ ಧನವನ್ನು ಕೊಡುವಾಗ, ಮತ್ತು ಅವಲೋಕನೆ ಮಾಡುವಾಗ, ಶಾಸಕರನ್ನು ಕಡೆಗಣಿಸಿ ಮಾಡುವಂಥ ವಿಚಾರ ಇದೆಯಲ್ಲ, ಇದು ಪ್ರಜಾಪ್ರಭುತ್ವಕ್ಕೆ ಮಾಡಿರತಕ್ಕಂಥ ಅಪಾಯಕಾರಿ ವಿಚಾರ ಎಂಬ ಮಾತನ್ನು ನಾನು ಹೇಳುತ್ತಾ ಇದ್ದೇನೆ. ಇದನ್ನು ತಾವುಗಳು ತೀವ್ರವಾಗಿ ಗಮನಿಸಬೇಕು ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ಏನೊಂದು ಅತ್ಯಂತ ಪರಿಣಾಮಕಾರಿಯಾದ ಘೋರ ದುರಂತ ಏನು ನಮ್ಮ ರಾಜ್ಯದಲ್ಲಿ ಸಂಭವಿಸಿದೆ, ಇದನ್ನು ಸರಿಪಡಿಸುವುದಕ್ಕೋಸ್ಕರವಾಗಿ ಸಮಗ್ರವಾದಂಥ ಒಂದು ಚಿಂತನೆಯಾಗಬೇಕು. ಇದನ್ನು ತಾವುಗಳು ಪರಿಣಾಮಕಾರಿಯಾಗಿ ನಿರ್ವಹಿಸುತ್ತೀರಿ ಎಂಬ ವಿಶ್ವಾಸವನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಹಾಗೆಯೇ ಆ ಒಂದು ಭರವಸೆಯನ್ನು ನಾವುಗಳು ಇಟ್ಟುಕೊಂಡಿದ್ದೇವೆ. ಒಂದು ವೇಳೆ ತಾವುಗಳು ಈ ಕಾರ್ಯದಲ್ಲಿ ವಿಫಲರಾದರೆ, ಮುಂದೆ ರಾಜ್ಯಪಾಲರ ಭಾಷಣದ ಅಧಿವೇಶನ ಬರುತ್ತದೆ, ನಾವಂತೂ ನಿಮ್ಮ ಸರಕಾರವನ್ನು ಅಷ್ಟು ಸುಲಭವಾಗಿ ಬಿಡುತ್ತೇವೆ ಎಂದು ತಾವುಗಳು ತಿಳಿದುಕೊಳ್ಳಬಾರದು. ಈ ವಿಷಯದಲ್ಲಿ ತೀವ್ರವಾಗಿ ತಾವು ಗಮನಹರಿಸಬೇಕು. ನಿಮ್ಮ ಪರಿಹಾರ ಕಾರ್ಯವು ಸಮರೋಪಾದಿಯಲ್ಲಿ ನಡೆಯುತ್ತಾ ಇಲ್ಲ. ಇದು ಅತ್ಯಂತ ನೋವು ತರುವಂಥ ವಿಚಾರ. ಜನರು ತೊಂದರೆಗೊಳಗಾಗಿ ಬೀದಿಪಾಲಾಗಿದ್ದಾರೆ, ಅವರು ಕಣ್ಣೀರು ಹಾಕುತ್ತಾ ಇದ್ದಾರೆ, ಅವರಿಗೆ ಪರಿಹಾರ ಕೊಡುವಲ್ಲಿ ವಿಳಂಬವಾಗಿದೆ. ತಾವುಗಳು ಈ ಬಗ್ಗೆ ಕೇಂದ್ರದವರ ಮೇಲೆ ಹೆಚ್ಚಿನ ಒತ್ತಡ ತರಬೇಕು. ನಾವುಗಳೆಲ್ಲರೂ ಬೇಕಾದರೆ ಪ್ರಧಾನಿಯವರ ಹತ್ತಿರ ನಿಯೋಗ ತೆಗೆದುಕೊಂಡು ಹೋಗೋಣ. ಪರಿಹಾರಕ್ಕಾಗಿ ಎಷ್ಟು ಹಣ ಬೇಕು ಎಂಬ ವಿಚಾರವನ್ನು ಅವರಿಗೆ ಮನದಟ್ಟು ಮಾಡಿಕೊಡೋಣ. ಪಕ್ಷಾತೀತವಾಗಿ ನಾವೆಲ್ಲರೂ ನಿಂತು ಈ ಕೆಲಸವನ್ನು ಮಾಡಲು ತಯಾರಾಗಿದ್ದೇವೆ. ಈ ಅಧಿವೇಶನ ಮುಗಿದ ನಂತರ ಯಾರ ನೇತೃತ್ವದಲ್ಲಿ ನಿಯೋಗ ಹೋಗಬೇಕು, ಯಾವ ರೀತಿಯಲ್ಲಿ ನಾವು ಕಾರ್ಯೋನ್ಮುಖರಾಗಬೇಕು ಆ ಕುರಿತು ಕಾರ್ಯಗಳನ್ನು ಹಾಕಿಕೊಳ್ಳಬೇಕು ಎಂಬಿತ್ಯಾದಿ ವಿಷಯಗಳ ಬಗ್ಗೆ ಎಲ್ಲಾ ಪಕ್ಷದವರೂ ಕೂಡ ಹೋಗಿ ನಮ್ಮ ನೆರೆಪರಿಹಾರದ ಕಾರ್ಯಕ್ಕಾಗಿ ಹಣವನ್ನು ತರಬೇಕು. ನಾವು ಆ ಹಣವನ್ನು ಸಾಲ ರೂಪದಲ್ಲಿ ತರುವುದಲ್ಲ, ಸಹಾಯಧನವಾಗಿ ಅವರು ನಮಗೆ ಕೊಡಬೇಕು. ಆ ದೃಷ್ಟಿಯಲ್ಲಿ ನಾವು ಸೂಕ್ತ ಪ್ರಯತ್ನವನ್ನು ಪಡಬೇಕಾಗಿದೆ ಎಂಬುದನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ. ಹಂಪನಗೌಡ:- ಮಾನ್ಯ ಅಧ್ಯಕ್ಷಿಣಿಯವರೇ ಈಗಾಗಲೇ ಈ ಸದನದಲ್ಲಿ ನೆರೆಹಾವಳಿ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಬಹಳಷ್ಟು ಬೆಳಕನ್ನು ಚೆಲ್ಲಿದ್ದಾರೆ. ನಾನು ರಾಜ್ಯ ಮಟ್ಟಕ್ಕೆ ಹೋಗದೆ ನನ್ನ ಕ್ಷೇತ್ರ ಮತ್ತು ಜಿಲ್ಲೆಗಳ ಬಗ್ಗೆ ಸೀಮಿತವಾಗಿ ಹೆಚ್ಚಿಗೆ ಹೇಳಬಯಸುತ್ತೇನೆ. ಏಕೆಂದರೆ ರಾಜ್ಯದಲ್ಲೇ ರಾಯಚೂರು ಜಿಲ್ಲೆ ನೆರೆಹಾವಳಿಯಿಂದ ಹೆಚ್ಚು ಹಾನಿಗೊಳಗಾಗಿರುವ ಜಿಲ್ಲೆ ಎಂದರೆ ತಪ್ಪಾಗಲಿಕ್ಕಿಲ್ಲ. ರಾಯಚೂರು ಜಿಲ್ಲೆಯಲ್ಲಿ 16 ರಿಂದ 19ರವರೆಗೆ ನೆರೆಹಾವಳಿ ಆದ ಮೇಲೆ ಸುಮಾರು 42 ಜನ ಪ್ರಾಣ ಕಳೆದುಕೊಂಡಿದ್ದಾರೆ. ಅದರ ಜೊತೆಗೆ ಸುಮಾರು 91,000ಕ್ಕೂ ಮೇಲ್ಪಟ್ಟು ಮನೆಗಳು ಬಿದ್ದಿವೆ, ಅದರಲ್ಲಿ 15,500 ಮನೆ ಪೂರ್ಣವಾಗಿ ಬಿದ್ದಿವೆ ಮತ್ತು 65 ಸಾವಿರ ಮನೆಗಳು ಭಾಗಶಃ ನಾಶವಾಗಿವೆ. 1 ಲಕ್ಷ 15 ಸಾವಿರ ಹೆಕ್ಟೇರ್ ಭೂಮಿಯಲ್ಲಿ ರೈತರ ಬೆಳೆ ನಾಶವಾಗಿವೆ. ಮತ್ತು ಸುಮಾರು 23 ಜನರು ಕಾಲರಾದಿಂದ ನನ್ನ ಕ್ಷೇತ್ರದಲ್ಲಿ ಮೃತಪಟ್ಟಿದ್ದಾರೆ. ನನ್ನ ಕ್ಷೇತ್ರ ಸಿಂಧನೂರು, ಈ ತಾಲೂಕು ಬಗ್ಗೆಯೂ ಕೂಡ ನಾನು ಹೇಳಬಯಸುತ್ತೇನೆ. ಕರ್ನಾಟಕದ ತಾಲ್ಲೂಕುಗಳಲ್ಲಿ ಅತಿಹೆಚ್ಚಿಗೆ ಹಾನಿಯಾಗಿರುವ ತಾಲ್ಲೂಕು ನನ್ನದು 141 ಗ್ರಾಮಗಳಲ್ಲಿ ಸುಮಾರು 20 ಸಾವಿರಕ್ಕೂ ಹೆಚ್ಚಿಗೆ ಮನೆಗಳು ಬಿದ್ದು

ಅದರಲ್ಲಿ ಆರೂವರೆ ಸಾವಿರ ಮನೆ ಪೂರ್ಣ ಬಿದ್ದಿದ್ದು ಸುಮಾರು 15 ಸಾವಿರ ಮನೆಗಳು ಭಾಗಶಃ ಬಿದ್ದು ಹೋಗಿವೆ. ಇದಲ್ಲದೆ ಸರ್ಕಾರ ನೆರೆಹಾವಳಿಯಲ್ಲಿ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನೂತನ ಸಂಪುಟ ರಚನೆಯಾದ ಮೇಲೆ ಮಾನ್ಯ ಮುಖ್ಯಮಂತ್ರಿಗಳು, ಕಂದಾಯಸಚಿವರು ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ಮತ್ತು ಕಂದಾಯ ಆಯುಕ್ತರೂ ಕೂಡ ನನ್ನ ಕ್ಷೇತ್ರಕ್ಕೆ ಬಂದು ಕಷ್ಟದಲ್ಲಿರುವ ಜನರನ್ನು ಮತ್ತು ಆಗಿರುವ ಅನಾಹುತವನ್ನು ಕಣ್ಣಾರೆ ಕಂಡಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ಹಾನಿಯಾಗಿರುವುದು ಸುಮಾರು ರೂ.131 ಕೋಟಿಗೂ ಮೇಲ್ಪಟ್ಟಿದ್ದು ಅದರಲ್ಲಿ ಸರ್ಕಾರದಿಂದ ಕೇವಲ ರೂ.11 ಕೋಟಿ ಮಾತ್ರ ಬಿಡುಗಡೆಯಾಗಿದೆ. ಇನ್ನೂ ಬಹಳಷ್ಟು ಹಣ ಸರ್ಕಾರದಿಂದ ಬಿಡುಗಡೆಯಾಗಬೇಕಾಗಿದೆ. ಇದರಲ್ಲಿ ರೈತರು ಬೆಳೆದಿರುವ ಸುಮಾರು 83 ಕೋಟಿಗೂ ಮೇಲ್ಪಟ್ಟು ಇದ್ದಂಥ ಬೆಳೆ ರಾಯಚೂರು ಜಿಲ್ಲೆಯಲ್ಲಿ ನಷ್ಟವಾಗಿದೆ ಅದಕ್ಕೆ ಇದುವರೆಗೂ ಸರ್ಕಾರದಿಂದ ಪರಿಹಾರ ಯಾವುದೂ ದೊರಕಿಲ್ಲ. ಇವೆಲ್ಲವನ್ನೂ ನೋಡಿದಾಗ ಸರ್ಕಾರ ಕೇವಲ ಬಿದ್ದಂತಹ ಮನೆಗಳು, ಪಂಪ್‌ಸೆಟ್‌ಗಳಿಗೆ ಮತ್ತು ದನಕರುಗಳಿಗೆ ಮಾತ್ರ ಪರಿಹಾರ ಕಾರ್ಯಕ್ರಮ ರೂಪಿಸಿಕೊಂಡಿದ್ದಾರೆ. ರೈತರ ಬಗ್ಗೆ ಸರಿಯಾದ ಕಾರ್ಯಕ್ರಮ ಹಾಕಿಕೊಂಡಿಲ್ಲ. ಒಂದು ಎಕರೆ ಪ್ಯಾಡಿ ಬೆಳೆಯಬೇಕಾದರೆ ಸುಮಾರು 4 ಸಾವಿರದಿಂದ 5 ಸಾವಿರ ರೂ ಖರ್ಚುಬರುತ್ತದೆ. ಒಂದು ಎಕರೆಯಲ್ಲಿ 30 ಚೀಲ ಪ್ಯಾಡಿ ಬೆಳೆದರೆ ಆರು ಸಾವಿರದಿಂದ 7 ಸಾವಿರ ರೂಪಾಯಿಗಳನ್ನು ರೈತ ಪಡೆಯುತ್ತಾನೆ. ಅಂತಹ ಪರಿಸ್ಥಿತಿಯಲ್ಲಿ ಎಕರೆಗೆ 15 ಚೀಲ ಕೂಡ ಬೆಳೆ ನನ್ನ ಕ್ಷೇತ್ರದಲ್ಲಿ ಬಂದಿಲ್ಲ. ಈ ರೀತಿಯಾಗಿ ಸುಮಾರು 45 ಕೋಟಿಗೂ ಹೆಚ್ಚಿನ ರೈತರ ಬೆಳೆ ನಷ್ಟವಾಗಿದೆ. ಅದಕ್ಕೆ ಸರ್ಕಾರ ಬೆಳೆ ಪರಿಹಾರ ಕೂಡ ಒದಗಿಸಬೇಕು ಮತ್ತು 11 ಗ್ರಾಮಗಳನ್ನು ಪುನರ್‌ವಸತಿ ಕಾರ್ಯಕ್ರಮದಲ್ಲಿ ತೆಗೆದುಕೊಳ್ಳಬೇಕು.

ಈ ಕುಟುಂಬಗಳವರು ನಿರ್ಗತಿಕರಾಗಿದ್ದಾರೆ. ಇದುವರೆಗೆ ಸರ್ಕಾರ ಈ ಬಗ್ಗೆ ಏನು ನಿರ್ಣಯ ತೆಗೆದುಕೊಂಡಿದೆ ಎಂಬುದು ಗೊತ್ತಾಗಿಲ್ಲ. ಅಲ್ಲಿ ಪುನರ್‌ವಸತಿ ಕಾರ್ಯಕ್ರಮ ತೆಗೆದುಕೊಳ್ಳಬೇಕಾದರೆ ಮೊದಲು ಅಲ್ಲಿರತಕ್ಕಂಥ ಕುಟುಂಬಗಳು ಎಷ್ಟು? ಆ ಕುಟುಂಬಗಳಿಗೆ ಎಷ್ಟು ಪರಿಹಾರ ಸಿಕ್ಕಿದೆ? ಈಗ ಅಲ್ಲಿ ಏನಾಗಿದೆ ಎಂದರೆ ಇವರು 11 ಸಾವಿರ ರೂಪಾಯಿ ಎಂದು ಇನ್‌ಕಂ ಲಿಮಿಟ್ ತೆರಿಗೆ ಕೊಂಡಿರತಕ್ಕಂಥದ್ದು. ಆ ಇನ್‌ಕಂ ಲಿಮಿಟ್ ಇಟ್ಟಿರುವುದರಿಂದ ಆ ಗ್ರಾಮದಲ್ಲಿರತಕ್ಕಂಥ ಕುಟುಂಬಗಳು 410 ಇದ್ದರೆ 300 ಮನೆಗಳು ಇರುತ್ತವೆ. ಅವರಲ್ಲಿ 300 ಜನರಿಗೆ ಪರಿಹಾರಧನ ಸಿಕ್ಕಿದೆ. ಇನ್ನು ಉಳಿದವರಿಗೆ ಪರಿಹಾರಧನ ಸಿಕ್ಕಿಲ್ಲ. ಆದ್ದರಿಂದ ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಕಾಳಜಿ ವಹಿಸಬೇಕು ಮತ್ತು ಅಲ್ಲಿರತಕ್ಕಂಥವರಿಗೆ ಪುನರ್‌ವಸತಿ ಕಾರ್ಯಕ್ರಮ ತೆಗೆದುಕೊಳ್ಳುವಂತೆ, ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ರೈತ ಕುಟುಂಬಗಳಿಗೆ 30 × 40 ಸೈಟನ್ನು ಕೊಡಬೇಕು ಎಂದು ಮಾಡಿದ್ದೀರಿ. ಗ್ರಾಮೀಣ ಪ್ರದೇಶದಲ್ಲಿರತಕ್ಕಂಥವರು ಕೃಷಿಕರು ಹಾಗೂ ಕಾರ್ಮಿಕರು, ಈ ಕೃಷಿ ಕಾರ್ಮಿಕರಿಗೂ ಮತ್ತು ರೈತ ಕುಟುಂಬಗಳಿಗೂ ಒಕ್ಕಲುತನ ಮಾಡಬೇಕಾದರೆ ದನಕರುಗಳನ್ನು ಕಟ್ಟುವುದಕ್ಕೆ ಮನೆಗಳು ಬೇಕಾಗುತ್ತವೆ. ಅದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ದೊಡ್ಡ ಸೈಟುಗಳ ಪ್ಲಾಟುಗಳನ್ನು ಮಾಡಿದರೆ ಅನುಕೂಲವಾಗುತ್ತದೆ. ನಾಲೆಯ ಅಕ್ಕಪಕ್ಕದಲ್ಲಿ ಈ ನೆರೆಹಾವಳಿ ಸಂಭವಿಸಿದ ಗ್ರಾಮಗಳು ಹತ್ತು ಸಾವಿರ ಎಕರೆಗೂ ಮೇಲ್ಪಟ್ಟು ಭೂಮಿ ಇವತ್ತು ಉಸುಕಿನಿಂದ ಸಂಪೂರ್ಣ ನಾಶವಾಗಿದ್ದು ಅಲ್ಲಿ ಯಾವುದೇ ಬೆಳೆಯನ್ನು ಬೆಳೆಯೂರದಂಥ ಪರಿಸ್ಥಿತಿ ಇದೆ. ಆ ಭೂಮಿಗಳು ಮೊದಲಿನ ಸ್ಥಿತಿ ಯಾವ ರೀತಿ ಬರಬೇಕು ಎಂದರೆ ಅದಕ್ಕೂ ಕೂಡ ಪರಿಹಾರಧನ ಒದಗಿಸಬೇಕಾಗುತ್ತದೆ. ಅದಲ್ಲದೆ ಈಗ ಪಂಪ್‌ಸೆಟ್ಟುಗಳಿಗೆ ಇನ್ನೂ ಹಣವನ್ನು ಬಿಡುಗಡೆ ಮಾಡಿಲ್ಲ. ಮತ್ತು ಈ ದಿಸೆಯಲ್ಲಿ ಇಲಾಖೆಗಳವರು ಕೊಟ್ಟಿರತಕ್ಕಂಥ ಮಾಹಿತಿಯ ಪ್ರಕಾರ ತಾವು 16 ಕೋಟಿ ರೂಪಾಯಿಗೂ ಮೇಲ್ಪಟ್ಟು ನಮ್ಮ ರಾಯಚೂರು ಜಿಲ್ಲೆಗೆ ಹಣ ಬಿಡುಗಡೆಯಾಗಬೇಕಾಗಿದೆ. ಈಗ ಸರ್ಕಾರ 9 ಕೋಟಿ 68 ಲಕ್ಷ ಮಾತ್ರ ಮನೆ ಬಿದ್ದಿರುವುದಕ್ಕೆ

ಪರಿಹಾರ ಒದಗಿಸಿದೆ. ರೂ.64 ಕೋಟಿ ದನಕರುಗಳಿಗೆ, ಉಳಿದ 132 ಕೋಟಿ ರೂಪಾಯಿ ಪಂಪು ಸೆಟ್ಟುಗಳಿಗೆ. ನಾನು ಸರ್ಕಾರದ ಮೇಲೆ ಒತ್ತಡ ತರುವುದು ಇಷ್ಟೆ. ಈ ರೀತಿ ಮಂದಗತಿಯಲ್ಲಿ ಈ ಪರಿಹಾರ ಕಾರ್ಯಕ್ರಮ ಮಾಡಿದರೆ ಬಹಳಷ್ಟು ಕಷ್ಟದಲ್ಲಿರತಕ್ಕಂಥ ಜನರಿಗೆ ಅವರನ್ನು ಕಷ್ಟದಿಂದ ಪಾರು ಮಾಡಲು ತೊಂದರೆಯಾಗುತ್ತದೆ. ಮತ್ತು ಈ ಅಂಕಿಅಂಶಗಳನ್ನು ನೋಡಿದಾಗ ತಾವೇನು ಕೇಂದ್ರ ಸರ್ಕಾರಕ್ಕೆ ಇವತ್ತು ಏನು ವರದಿಯನ್ನು ಸಲ್ಲಿಸಿದ್ದೀರಿ, ಅದರಲ್ಲಿ ಎರಡು ತರಹದ ಅಂಕಿಅಂಶಗಳು ಇದ್ದಾವೆ. ಒಂದು ಪರ್ಮನೆಂಟ್ ರಿಲೀಫ್‌ಗೆ ಸಂಬಂದಿಸಿದ್ದುದು ಮತ್ತು ಇನ್ನೊಂದು ಲಾಂಗ್‌ಟರ್ಮ್ ರಿಲೀಫ್, ಮತ್ತು ಒಂದು ಷಾರ್ಟ್ ಟರ್ಮ್ ರಿಲೀಫ್. ಇದರಲ್ಲಿ 112 ಕೋಟಿ ರೂಪಾಯಿ ಟೆಂಪೊರರಿ ರಿಲೀಫ್‌ಗೆ ತೋರಿಸಿದ್ದೀರಿ. ಮತ್ತು ರೂ.220 ಕೋಟಿ ಲಾಂಗ್ ಟರ್ಮ್ ರಿಲೀಫ್. ಅದರ ಜೊತೆಗೆ ತಾವು ಕೊಟ್ಟಿರತಕ್ಕಂಥದ್ದು ಮನೆಗಳನ್ನು ಕಟ್ಟುವ ಆಶ್ರಯ ಯೋಜನೆಯಲ್ಲಿ 11 ಕೋಟಿ ರೂಪಾಯಿ ರಾಜ್ಯಸರ್ಕಾರ ಇವತ್ತು ನಿಗದಿ ಮಾಡಿ, ಇವತ್ತು ಕೇಂದ್ರಸರ್ಕಾರಕ್ಕೆ ವರದಿ ಕೊಟ್ಟಿದ್ದೀರಿ. ನನ್ನ ತಾಲ್ಲೂಕಿನಲ್ಲಿ 11 ಗ್ರಾಮಗಳಲ್ಲಿ ಪುನರ್‌ವಸತಿ ಕಾರ್ಯಕ್ರಮವನ್ನು ತಾವು ಏನು ತೆಗೆದುಕೊಳ್ಳುತ್ತೀರಿ, ಆ ಗ್ರಾಮಗಳಲ್ಲಿ ಮನೆ ಕಟ್ಟಬೇಕಾದರೆ ಮನೆಗೆ 20 ಸಾವಿರ ಲೆಕ್ಕ ಇಟ್ಟುಕೊಂಡರೂ 5 ಕೋಟಿ ರೂಪಾಯಿ ಮೇಲ್ಪಟ್ಟು ನನ್ನ ಕ್ಷೇತ್ರ ಒಂದಕ್ಕೆ ಬರಬೇಕಾಗುತ್ತದೆ. ತಾವು ಇದರಲ್ಲಿ 11 ಕೋಟಿ ರೂಪಾಯಿ ಮಾತ್ರ ತೋರಿಸಿದ್ದೀರಿ. ಇಲ್ಲಿ ಹೇಳುತ್ತಿದ್ದೀರಿ ಒಂದು ಕಡೆಗೆ 92 ಗ್ರಾಮಗಳನ್ನು ಪುನರ್‌ವಸತಿ ಕಾರ್ಯಕ್ರಮ ನಾವು ಮಾಡಬೇಕಾಗಿದೆ. 92 ಗ್ರಾಮಗಳ ಪುನರ್‌ವಸತಿ ಕಾರ್ಯಕ್ರಮಕ್ಕೆ ಎಷ್ಟು ಹಣ ಬೇಕಾಗಬಹುದು? ತಾವು ತೋರಿಸಿರುವುದು ಕೇವಲ 11 ಕೋಟಿ. ಈ ರೀತಿ ಅನೇಕ ತಪ್ಪುಗಳು ಇದರಲ್ಲಿ ಇದ್ದಾವೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅದರ ಜೊತೆಗೆ ರೋಡ್ಸು, ಬ್ರಿಡ್ಜಸ್ ನಮ್ಮ ರಾಯಚೂರು ಜಿಲ್ಲೆಯಲ್ಲಿ 460 ಬ್ರಿಡ್ಜಸ್‌ಗಳು ಸಂಪೂರ್ಣವಾಗಿ ನಾಶವಾಗಿದೆ ಎಂದು ಈ ಒಂದು ಅಂಕಿಅಂಶಗಳಿಂದ ತೋರಿಸಿದ್ದೀರಿ. ಅದರಲ್ಲಿ 262 ಕೋಟಿ 60 ಲಕ್ಷ ರೂಪಾಯಿ. ನನ್ನ ಕ್ಷೇತ್ರದ ಸಿಂಧನೂರು ಪಟ್ಟಣದಲ್ಲಿರತಕ್ಕಂಥ ಒಂದು ಸೇತುವೆ ಏನಿದೆ, ಆ ಸೇತುವೆಗೆ ಮಾತ್ರ ಕೇವಲ ಎರಡೂವರೆ ಕೋಟಿ ರೂಪಾಯಿ ಅಂದಾಜು ಬೇಕಾಗಬಹುದು. ಆದರೆ 460 ಬ್ರಿಡ್ಜ್‌ಗಳನ್ನು ಕಟ್ಟಬೇಕು ಎಂದು ತಾವು ಹೇಳಿದ್ದೀರಿ. ಅದಕ್ಕೆ ಎಷ್ಟು ಹಣ ಬೇಕಾಗುತ್ತದೆ ಎಂದು ಹೇಳತಕ್ಕಂಥ ಅಂಕಿಅಂಶಗಳನ್ನೂ ಕೂಡ ತಪ್ಪಾಗಿ ಕೊಟ್ಟಿದ್ದಾರೆ. ಇಂತಹ ಅಂಕಿಅಂಶಗಳನ್ನು ಸರಿಪಡಿಸಿ, ನೆರೆಹಾವಳಿಯಲ್ಲಿ ಏನು ಅನಾಹುತ ಆಗಿದೆ ಅದನ್ನು ಇನ್ನೊಂದು ಸಲ ತಾವು ಸರ್ವೆ ಮಾಡಿಸಿ ಈ ಒಂದು ಸಂಕಷ್ಟದಲ್ಲಿರತಕ್ಕ ರೈತರಿಗೂ ಮತ್ತು ಬೇರೆ ಕೆಲವೊಂದು ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳಬೇಕಾಗಿದೆ ಅವುಗಳನ್ನು ಕೂಡ ಪರಿಗಣನೆಗೆ ತೆಗೆದುಕೊಂಡು ತೀವ್ರಗತಿಯಲ್ಲಿ ಮಾಡಿಸಬೇಕು ಎಂದು ತಮಗೆ ನಾನು ಒತ್ತಾಯ ಮಾಡುತ್ತೇನೆ.

† ಶ್ರೀ ಮನೋಹರ್ ತಹಶೀಲ್ದಾರ್ (ಹಾನಗಲ್):- ಮಾನ್ಯ ಉಪಾಧ್ಯಕ್ಷಿಣಿಯವರೆ, ರಾಜ್ಯದಲ್ಲಿ ಅನಿರೀಕ್ಷಿತವಾಗಿ ಬಂದಂತಹ ಈ ನೆರೆಹಾವಳಿ ವಿಚಾರವಾಗಿ ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ಪ್ರಥಮವಾಗಿ ವಂದಿಸುತ್ತಾ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನವೆಂಬರ್ 16 ರಿಂದ 20ನೇ ತಾರೀಖಿನೊಳಗೆ ಧಾರವಾಡ ಜಿಲ್ಲೆಯಲ್ಲಿ ಅತ್ಯಂತ ಹೆಚ್ಚಿನ ಮಳೆ ಆಗಿ ಪ್ರಾಣಿಗಳು ಕೊಚ್ಚಿಕೊಂಡು ಹೋಗಿದ್ದು, ರೈತರ ಬೆಳೆ ಹಾನಿ, ರಸ್ತೆ ಹಾನಿ, ಇವೆಲ್ಲ ಆಗಿದ್ದರೂ ಸರ್ಕಾರ ನಿರೀಕ್ಷಿಸಿದ ಮಟ್ಟದಲ್ಲಿ ಇವುಗಳಿಗೆ ಪರಿಹಾರವನ್ನು ಕೊಡುವುದಕ್ಕೆ ಆಗಿಲ್ಲ. ಯುದ್ಧೋಪಾದಿಯಲ್ಲಿ ನಾವು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿತ್ತು ಈಗ ಕೇವಲ ಮನೆ ಬಿದ್ದವರಿಗೆ ಮಾತ್ರ ನಾವು ಪರಿಹಾರ ಕೊಡುವುದಕ್ಕೆ ಸಾಧ್ಯ ಆಗಿದೆ. ಅದೂ ಸಹ ಪೂರ್ತಿಆಗಿಲ್ಲ. ಧಾರವಾಡ ಜಿಲ್ಲೆಯಲ್ಲಿ ಸರಾಸರಿ ಮಳೆ 40 ಎಂಎಂ ಇದ್ದು ಮೊನ್ನೆ ಆ ನಾಲ್ಕು ದಿವಸದಲ್ಲಿ ಬಿದ್ದ ಮಳೆಯ ಸರಾಸರಿ ಅಂದಾಜು 742 ಎಂಎಂ ಆಗಿದೆ. ಅತ್ಯಂತ ಹೆಚ್ಚಿಗೆ 417 ಎಂಎಂ ಬ್ಯಾಡಗಿ, ರಾಣಿಬೆನ್ನೂರು ಕಡೆ ಆಗಿದ್ದರೆ ಹಾನಗಲ್‌ನಲ್ಲಿ, ನನ್ನ ಮತ ಕ್ಷೇತ್ರ

ಅಲ್ಲಿಯೂ ಕೂಡ ಸುಮಾರು 228 ಎಂಎಂ ಆಗಿದೆ. ಆದರೆ ಈ ಮಳೆಯಿಂದ ತುಂಗಭದ್ರ ನದಿ, ವರದಾ ನದಿ, ಧರ್ಮಾ ನದಿ ಇತ್ಯಾದಿ ನದಿಗಳಲ್ಲಿ ಹೆಚ್ಚಿನ ಪ್ರವಾಹ ಬಂದು ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ನದಿ ಪಕ್ಕದಲ್ಲಿರುವಂತಹ ಊರುಗಳು ಆವೃತ ಹೊಂದಿ ಸಾಕಷ್ಟು ಮನೆಗಳು ಬಿದ್ದಿವೆ. ನಮ್ಮ ತಾಲ್ಲೂಕಿನ ವಿಚಾರ ನಾನು ಹೇಳಬೇಕು ಎಂದರೆ ನಮ್ಮಲ್ಲಿ ಮೂರು ಹಳ್ಳಿಗಳಿಗೂ ಹೆಚ್ಚು ಡ್ಯಾಮೇಜ್ ಆಗಿದೆ. ಅದರಲ್ಲಿಯೂ ಕೂಡ್ಲ ಎನ್ನುವಂತಹ ಒಂದು ಹಳ್ಳಿಯಲ್ಲಿ ಜನ ಏನು ಮೆಣಸಿನಕಾಯಿ, ರಾಗಿ ಜೋಳ, ಈ ತೆನೆಗಳ ಬಣವೆಗಳು ತೇಲಿಕೊಂಡು ಹೋಗಿವೆ. ಜೊತೆಗೆ ಸತತವಾಗಿ ಬಂದಂತಹ ಮಳೆಯಿಂದಾಗಿ ಆ ಬಣವೆಯಲ್ಲಿ ನೀರು ಹೋಗಿ ಏನು ನಮ್ಮ ರೈತರ ಬದುಕು ಎಷ್ಟೊಂದು ಹದಗೆಟ್ಟಿದೆ ಎಂದರೆ ಆ ಬಣವೆಯಲ್ಲಿಯೇ ಮೊಳಕೆ ಆಗಿವೆ. ಜೋಳದ ತೆನೆಯಲ್ಲಿ ಮೊಳಕೆ, ಮೆಕ್ಕೆಜೋಳದಲ್ಲಿ ಮೊಳಕೆ, ಭತ್ತದ ಬಣವೆಯಲ್ಲಿಯೂ ಮೊಳಕೆ. ಅದು ತಿನ್ನಲಿಕ್ಕೆ ಬರುವುದಿಲ್ಲ. ದನಕರುಗಳಿಗೆ ಕೂಡ ಹಾಕಲಿಕ್ಕೆ ಬರುವುದಿಲ್ಲ. ಅಂತಹ ಒಂದು ಪರಿಸ್ಥಿತಿ ನಮ್ಮಲ್ಲಿ ಆಯಿತು. ಸುಮಾರು 1650 ಮನೆಗಳು ನಮ್ಮ ತಾಲ್ಲೂಕಿನಲ್ಲಿ, ನಮ್ಮ ಕ್ಷೇತ್ರದಲ್ಲಿ ಪಾರ್ಶಯಲಿ, ಮತ್ತು ಪೂರ್ತಿಯಾಗಿ ಬಿದ್ದಂತಹ ವರದಿಗಳು ಇವೆ. ಅದಕ್ಕೆ ಇವತ್ತು 500 ರೂಪಾಯಿವರೆಗೆ ತಾವು ಪರಿಹಾರ ಕೊಟ್ಟಿದ್ದೀರಿ. ಮತ್ತು ಐದು ಸಾವಿರ ರೂಪಾಯಿ ಪೂರ್ತಿ ಬಿದ್ದಂತಹ ಮನೆಗಳಿಗೆ ಕೊಟ್ಟಿದ್ದೀರಿ. ಈ ರೀತಿ ಸುಮಾರು 147 ಮನೆಗಳಿಗೆ ಕೊಟ್ಟಿದ್ದಾರೆ. ಆದರೂ ಜನರ ಪರಿಸ್ಥಿತಿ ಸುಧಾರಿಸಲಿಲ್ಲ. ನಾವು ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕು. ನಮಗೆ ಹೆಚ್ಚು ಹಣ ಬಂದರೆ ನೊಂದವರಿಗೆ ಕೊಡಲಿಕ್ಕೆ ಸಾಧ್ಯವಾಗುತ್ತದೆಂದು ಅಧಿಕಾರಿಗಳು ಹೇಳುತ್ತಾರೆ. ಆದ್ದರಿಂದ ಮನೆ ಬಿದ್ದಹೋಗಿರುವುದಕ್ಕೆ ಇನ್ನಷ್ಟು ಹಣವನ್ನು ಒದಗಿಸುವುದಕ್ಕೆ ಮತ್ತು ಹೆಚ್ಚಿಗೆ ಕೊಡುವುದಕ್ಕೆ ಸರ್ಕಾರದವರು ತಕ್ಷಣ ಕ್ರಮ ಕೈಗೊಳ್ಳಬೇಕು. ಹಾಳಾದಂತಹ ಮನೆಗಳನ್ನು ಗುರ್ತಿಸಿ ಅವರಿಗೆ ಆಶ್ರಯ ಯೋಜನೆಯಲ್ಲಿ ಮನೆಯನ್ನು ಕೊಡಲಿಕ್ಕೆ ಸಾಧ್ಯವಿದ್ದರೆ ಅಂತಹವರಿಗೆ ತಕ್ಷಣ ಮನೆಯನ್ನು ಒದಗಿಸಿಕೊಟ್ಟು ಅವರಿಗೆ ಆಶ್ರಯ ಕೊಡಬೇಕೆನ್ನುವುದು ನನ್ನ ಎರಡನೆಯ ವಿಚಾರ. ಮೂರನೆಯ ವಿಚಾರ ಜೀವ ಹಾನಿಯ ಬಗ್ಗೆ, ಜನರ ಪ್ರಾಣ ಹಾನಿಯಾಗದೆ ಇದ್ದರೂ ಸಾಕಷ್ಟು ದನಕರುಗಳು ಹಾಳಾಗಿವೆ, ನಮ್ಮಲ್ಲಿ ವರದ ಮತ್ತು ಧರ್ಮ ಎಂದು ನದಿಗಳು ಇವೆ. ಧರ್ಮ ಕಾಲುವೆಯ ಉದ್ದಕ್ಕೂ ಅನೇಕ ಹಳ್ಳಗಳಿದ್ದು ಇವುಗಳಿಂದಾಗಿ ಸಾಕಷ್ಟು ದನಕರುಗಳು ಕೂಡ ತೇಲಿಹೋಗಿವೆ. ಅದಕ್ಕೆ ಇವತ್ತು ಪರಿಹಾರವನ್ನು ಕೊಡುವಂತಹ ಸಂದರ್ಭದಲ್ಲಿ ದನಗಳಿಗೆ ಏನೋ ಪರಿಹಾರವನ್ನು ಕೊಟ್ಟಿದ್ದಾರೆ, ಸಾಕಷ್ಟು ಕುರಿಗಳು ರಾತ್ರಿರಾತ್ರಿ ಬಂದಂತಹ ನೆರೆಯಿಂದಾಗಿ ತೇಲಿಕೊಂಡು ಹೋಗಿದೆ. ಅದರಲ್ಲಿಯೂ ವಲಸೆ ಬರುವಂತಹ ಕುರುಬರು ಅವರು ಸಾಮಾನ್ಯವಾಗಿ ರೈತರ ಜಮೀನಿನ ಹತ್ತಿರ ಬಂದು ಒಂದು ದಿನಕ್ಕೆ ಇಂತಿಷ್ಟು ದುಡ್ಡು ಎಂದು ಅವರು ಎಷ್ಟು ದಿವಸ ಇರುತ್ತಾರೋ ಅವರಿಗೆ ಕುರಿಗಳ ಸಂಖ್ಯೆಯ ಮೇಲೆ ಹಣವನ್ನು ಕೊಡುತ್ತಾರೆ. ಅಂತಹ ಕುರುಬರು ಬಹಳಷ್ಟು ಜನ ಇದ್ದಾರೆ. ನಮ್ಮಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಕುರಿಗಳು ತೇಲಿಹೋಗಿವೆ ಎಂದು ವರದಿ ಬಂದಿದ್ದರೂ ಅವರು ಅರ್ಜಿಯನ್ನು ಕೊಟ್ಟಿದ್ದರೂ ಅಲ್ಲಿನ ಸ್ಥಾನಿಕ ರೈತರು ಮತ್ತು ಮುಖಂಡರು ಹೇಳುತ್ತಿದ್ದರೂ ಈಗ ಕೇಳುತ್ತಿಲ್ಲ. ಜಿಲ್ಲಾಧಿಕಾರಿಗಳು ಪಶುವೈದ್ಯ ಶಾಲೆಯ ವೈದ್ಯರ ಸರ್ಟಿಫಿಕೇಟ್ ಬೇಕು ಮತ್ತು ಅದರ ಬಗ್ಗೆ ಖಚಿತವಾಗಿ ಅವರಿಗೆ ಮನವರಿಕೆಯಾಗಬೇಕು ಎಂದು ಹೇಳುತ್ತಾರೆ. ಹೊಳೆಯಲ್ಲಿ ತೇಲಿ ಹೋಗಿದ್ದಕ್ಕೆ ವೆಟರ್‌ನರಿ ಡಾಕ್ಟರ್ ಪಂಚಾಯತಿ ಮಾಡುವುದಕ್ಕೆ ಸಾಧ್ಯವಿದೆಯೋ ಪೋಸ್ಟ್ ಮಾರ್ಟಮ್ ಮಾಡುವುದಕ್ಕೆ ಸಾಧ್ಯವಿದೆಯೋ ಎನ್ನುವುದು ಒಂದು ಪ್ರಶ್ನೆ. ಎರಡನೆಯದು ದನಕರುಗಳನ್ನು, ಕುರಿಗಳನ್ನು ಕಳೆದುಕೊಂಡವರು ಸಾಮಾನ್ಯವಾಗಿ ಸುಳ್ಳು ಹೇಳುತ್ತಾರೆಯೇ? ಹಾಗೆ, ಹೇಳುವುದಕ್ಕಾಗುವುದಿಲ್ಲ. ಕನಿಷ್ಠ ಪಕ್ಷ ಒಂದು ಸ್ಕೇಲ್ ಮಾಡಿ 10 ಕುರಿ ಹೋದವರಿಗೆ ಇಷ್ಟು, 20 ಕುರಿ ಹೋದವರಿಗೆ ಇಷ್ಟು ಎಂದು ಅವರಿಗೆ ಪರಿಹಾರವನ್ನು ಜಾರಿ ಮಾಡಿಕೊಡಬೇಕು. ಒಂದೂ ಕುರಿಗೂ ಕೂಡ ಪರಿಹಾರವನ್ನು ಕೊಟ್ಟಿಲ್ಲ. ಕುರಿಯನ್ನು ಕಳೆದುಕೊಂಡಂತಹ ಜನಕ್ಕೆ ಪರಿಹಾರವನ್ನು ಕೊಡುವುದಕ್ಕೆ ತಾವು ಮುಂದಾಗಬೇಕು. ಹೇಗೆ

ಕೊಡಬೇಕು ಎನ್ನುವಂತಹ ಒಂದು ಪ್ರೊಸೀಜರ್ ಮಾಡಬೇಕು. ನೊಂದ ಕುರುಬರು ಮೇಲಿಂದ ಮೇಲೆ ನಮಗೆ ಟೆಲಿಗ್ರಾಂ ಮಾಡುತ್ತಿದ್ದಾರೆ ಮತ್ತು ಲಿಖಿತ ಮುಖಾಂತರ ತಿಳಿಸುತ್ತಿದ್ದಾರೆ. ನಾನು ಈ ವಿಚಾರವನ್ನು ಮುಖ್ಯಮಂತ್ರಿಗಳಿಗೆ ಮತ್ತು ರೆವಿನ್ಯೂ ಮಂತ್ರಿಗಳಿಗೆ ತಿಳಿಸಿದ್ದೇನೆ, ಅದಾಗ್ಯೂ ಏನೂ ಆಗಿಲ್ಲ. ಆದ್ದರಿಂದ ಕುರಿ ಕಳೆದುಕೊಂಡವರ ವಿಚಾರದಲ್ಲಿ ಸ್ವಲ್ಪ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಎಷ್ಟೋ ಬಹಳಷ್ಟು ಹಾಳಾಗಿದೆ. ಅಷ್ಟೂ ಪರಿಹಾರವನ್ನು ನೀವು ಕೊಡುವುದಕ್ಕಾಗುವುದಿಲ್ಲ. ನೀವು ಕೊಡುವ ಸಹಾಯಧನದ ಜೊತೆಗೆ ಕನಿಷ್ಠ ಅವರಿಗೆ ಸಾಲ ಸೌಲಭ್ಯವನ್ನು ಬ್ಯಾಂಕಿನಿಂದ ಕೊಡಿಸಿ, ಅಥವಾ ಬೇರೆ ರೀತಿಯಲ್ಲಿ ಕೊಡಿಸಿ, ಮತ್ತು ಬಡ್ಡಿ ರಹಿತ ಸಾಲವನ್ನು ಕೊಡಿಸಿದರೆ ಅವರಿಗೆ ಸ್ವಲ್ಪ ಮಟ್ಟಿಗಾದರೂ ಸಹಾಯವಾಗುತ್ತದೆ.

ಇನ್ನು ಕೆರೆಗಳ ವಿಚಾರವಾಗಿ ಹೇಳಬೇಕೆಂದರೆ, ನಮ್ಮ ತಾಲ್ಲೂಕಿನಲ್ಲಿ 700ಕ್ಕೂ ಹೆಚ್ಚು ಕೆರೆಗಳಿವೆ. ಇವತ್ತು ಸಿರೀಸ್ ಆಫ್ ಟ್ಯಾಂಕ್ಸ್ ಇರುವುದರಿಂದ ಒಂದು ಟ್ಯಾಂಕ್ ಒಡೆದರೆ ಅದರ ಕೆಳಗಡೆ ಬರುವಂತಹ ಎಲ್ಲಾ ಟ್ಯಾಂಕ್‌ಗಳು ಒಡೆದುಕೊಂಡು ಹೋಗುತ್ತವೆ. ನಮ್ಮಲ್ಲಿ 117 ಕೆರೆಗಳು ಡ್ಯಾಮೇಜ್ ಆಗಿವೆ. ಅದರಲ್ಲಿ 27 ಬ್ರೀಚ್ ಆಗಿದೆ. ಅದರ ಪ್ರತಿಯೊಂದು ಫೋಟೋ ಕೂಡ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದಾಗ ಮತ್ತು ಮಾನ್ಯ ಕಂದಾಯ ಮಂತ್ರಿಗಳು ಮತ್ತು ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾದ ಮಾನ್ಯ ಗೋಪಿನಾಥ್ ಸಾಂಡ್ರರವರು ಅಲ್ಲಿಗೆ ಬಂದಾಗ ನಾವು ಪ್ರತಿಯೊಂದನ್ನು ತೋರಿಸಿದ್ದೇವೆ. ಅಧಿಕಾರಿಗಳ ಪ್ರಕಾರ ಅವುಗಳ ಅಂದಾಜು 70 ಲಕ್ಷ ರೂಪಾಯಿಯಾಗುತ್ತದೆ. ಆದರೆ ಬಿಡುಗಡೆ ಮಾಡಿರುವ ಹಣ ಕೇವಲ 5 ಲಕ್ಷ ರೂಪಾಯಿಗಳು ಮಾತ್ರ. ಇದರಿಂದ ಯಾವ ಒಂದು ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಒಡೆದು ಹೋಗಿರತಕ್ಕ ಒಂದೊಂದು ಕೆರೆಯ ದುರಸ್ತಿಗೆ 20 ರಿಂದ 3 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಆದುದರಿಂದ, ಮುಂದಿನ ಮಳೆಗಾಲ ಬರುವುದರೊಳಗಾಗಿ ಈ ಎಲ್ಲಾ ಕೆರೆಗಳ ದುರಸ್ತಿ ಆಗಬೇಕು. ದುರಸ್ತಿಯಾಗದೆ ಹೋದರೆ ಮತ್ತೆ ರೈತ ತೊಂದರೆಗೀಡಾಗುತ್ತಾನೆ. ಆಗ ಒಂದು ದೊಡ್ಡ ಅನಾಹುತವೇ ಆದೀತು. ಈ ಒಂದು ವಿಷಯದಲ್ಲಿ ಸರ್ಕಾರ ಅತಿ ಹೆಚ್ಚಿನ ಕಾಳಜಿ ವಹಿಸಿ ಕೂಡಲೇ ಒಡೆದಿರುವಂಥ ಎಲ್ಲಾ ಕೆರೆಗಳ ಮತ್ತು ಹಾಳಾದಂಥ ಎಲ್ಲಾ ಕೆರೆಗಳನ್ನು ದುರಸ್ತಿ ಮಾಡುವುದಕ್ಕೆ ಕೂಡಲೇ ಅತಿ ಹೆಚ್ಚಿನ ಹಣವನ್ನು ಅಂದಾಜು ಮಾಡಿ, ಆ ಹಣವನ್ನು ಯಾವ ರೂಪದಲ್ಲಿ ಕೊಡುತ್ತೀರೋ ನನಗೆ ಗೊತ್ತಿಲ್ಲ. ಇವೊತ್ತು Deciltiing of Tanks ಎನ್ನುವಂಥ ಒಂದು ಯೋಜನೆ ಇದೆ. ಆ ಒಂದು ಯೋಜನೆಯನ್ನು ನಮ್ಮ ತಾಲ್ಲೂಕಿಗೆ ಕೊಟ್ಟು, ಹಾಳಾಗಿರುವಂಥ ಕೆರೆಗಳಿಗೆ ಇವೊತ್ತು ಮಣ್ಣನ್ನು ಬೇರೆ ಕಡೆಯಿಂದ ತರುವುದಕ್ಕೆ ತುಂಬಾ ಕಷ್ಟವಿದೆ. ಸುಮಾರು 500 ಟ್ರಕ್‌ಗಟ್ಟಲೆ ಮಣ್ಣು ಬೇಕಾಗುತ್ತದೆ. ಆದುದರಿಂದ, ಡಿ-ಸಿಲ್ಟೇಷನ್ ಯೋಜನೆ ಮುಖಾಂತರ ಕೆಲಸ ತೆಗೆದುಕೊಂಡರೆ ಕೆರೆಯಲ್ಲಿರುವಂಥ ಮಣ್ಣನ್ನು ಅಲ್ಲಿಯೇ ಹಾಕಿ ಡಿ-ಸಿಲ್ಟೇಷನ್ ಮಾಡಿದರೆ ಒಂದು ಕಡೆ ಡಿ-ಸಿಲ್ಟೇಷನ್ ಮಾಡಿದಂತಾಗುತ್ತದಲ್ಲದೆ ಮತ್ತೊಂದು ಕಡೆ ಕೆರೆ ದುರಸ್ತಿಯಾದಂತಾಗುತ್ತದೆ. ಈ ರೀತಿ ಮಾಡುವುದಕ್ಕೆ ಸಾಧ್ಯವಿದೆ. ಆದುದರಿಂದ, ತಕ್ಷಣಕ್ಕೆ ಕೆರೆಗಳ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಗಮನಹರಿಸಬೇಕಾಗಿದೆ. ಈಗಾಗಲೇ ಹಳ್ಳಿಗಳಲ್ಲಿ ಬಹಳಷ್ಟು ಕೆರೆಗಳಿದ್ದು, ದನಕರುಗಳು ಬಂದು ನೀರು ಕುಡಿಯುತ್ತವೆ, ಅಂಥ ಕೆರೆಗಳಲ್ಲಿಯೇ ಜನರು ಬಟ್ಟೆ ಒಗೆಯುತ್ತಾರೆ. ಕೆರೆಗಳು ಒಡೆದು ಹೋಗಿರುವುದರಿಂದ ಕುಡಿಯುವ ಒಂದು ಹನಿ ನೀರಿಗೂ ಕೂಡ ಬಹಳ ಕಷ್ಟಕರವಾದ ಪರಿಸ್ಥಿತಿ ಇದೆ. ಇದನ್ನು ಆದಷ್ಟು ಬೇಗನೆ ನೀಗಿಸಬೇಕೆಂದು ಸನ್ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ರಸ್ತೆಗಳ ವಿಚಾರವಾಗಿ ಹೇಳಬೇಕೆಂದರೆ, ನಮ್ಮ ತಾಲ್ಲೂಕಿನಿಂದ ಸುಮಾರು 50 ರಿಂದ 60 ಗ್ರಾಮಗಳಿಗಿದ್ದ ರಸ್ತೆ ಸಂಪರ್ಕ ಸಂಪೂರ್ಣ ಕಡಿದು ಹೋಗಿದೆ. ಇವೊತ್ತು ನಾವು ಸ್ವಲ್ಪ ಜೋರು ಮಾಡಿ ಕೆಎಸ್‌ಆರ್‌ಟಿಸಿ ಬಸ್ಸುಗಳನ್ನು ಹಾಕಿಸಿಕೊಂಡು, ರಸ್ತೆಗಳಿಗೆ ಬರೀ ಮಣ್ಣನ್ನು ಹಾಕಿ ಬಸ್ಸುಗಳು ಓಡಾಡುವಂತೆ ಮಾಡಿದ್ದೇವೆ. ಆದರೂ ಕೂಡ ಬಸ್ಸುಗಳನ್ನು ಅನಿಯಮಿತವಾಗಿ

ಬಿಡುತ್ತಿದ್ದಾರೆ. ಬೇರೆ ನಾಲ್ಕು ಬಸ್ಸುಗಳು ಓಡಾಟ ಮಾಡುತ್ತಿದ್ದರೆ, ಒಂದು ಕೆಎಸ್‌ಆರ್‌ಟಿಸಿ ಬಸ್ಸನ್ನು ಮಾತ್ರ ಬಿಡುತ್ತಿದ್ದಾರೆ. ನಮಗೆ ರಸ್ತೆ ಸರಿಯಿಲ್ಲ, ರಸ್ತೆ ದುರಸ್ತಿ ಮಾಡಿಸಿ, ಇಲ್ಲದಿದ್ದರೆ ಪ್ರಯಾಣ ಮಾಡುವುದಕ್ಕೆ ತುಂಬಾ ಕಷ್ಟವಿದೆ. ಈ ರಸ್ತೆ ಹಾಳಾಗಿರುವುದನ್ನೂ ಕೂಡ ನಾನು ಸನ್ಮಾನ್ಯ ರೆವಿನ್ಯೂ ಮಿನಿಸ್ಟರ್‌ರವರ ಗಮನಕ್ಕೆ ತಂದಿದ್ದೇವೆ. ಅಲ್ಲದೆ, ಸನ್ಮಾನ್ಯ ಮುಖ್ಯಮಂತ್ರಿಗಳು ಆ ಕ್ಷೇತ್ರಕ್ಕೆ ಬಂದಿದ್ದಾಗ ವಿಷಯ ತಿಳಿಸಿ ಫೋಟೋ ಸಹಿತ ಅವರ ಗಮನಕ್ಕೆ ತಂದು ಸಂಪೂರ್ಣವಾಗಿ ನಿವೇದಿಸಿಕೊಂಡಾಗ, ಆಗ ಅವರು ತಕ್ಷಣದಿಂದಲೇ 10 ಲಕ್ಷ ರೂಪಾಯಿಗಳನ್ನು ಹಾನಗಲ್ ತಾಲ್ಲೂಕಿಗೆ ರಸ್ತೆಗಾಗಿ ಬಿಡುಗಡೆ ಮಾಡಿ ಎಂದು ಸ್ಥಳದಲ್ಲಿಯೇ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿದರು. ಅನಂತರ, ರಸ್ತೆ ನಿರ್ಮಾಣಕ್ಕಾಗಿ 10 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆಯೆಂದು ಜಿಲ್ಲಾಧಿಕಾರಿಗಳಿಗೆ ಆದೇಶ ಬಂದಿದೆ. ಆದರೆ, ಹಣ ಬಂದಿಲ್ಲ. ಈ ಬಗ್ಗೆ ಕೇಳಿದಾಗ ಸರ್ಕಾರದಿಂದ ಹಣ ಬಂದ ಕೂಡಲೇ ನಿಮಗೆ ಹಣ ಬಿಡುಗಡೆ ಮಾಡಲಾಗುವುದೆಂದು ಹೇಳಿದರು. ಇದು ನಿಜಕ್ಕೂ ವಿಪರ್ಯಾಸ. ಸನ್ಮಾನ್ಯ ಸಚಿವರಾದ ಶ್ರೀ ರಾಜಶೇಖರ ಮೂರ್ತಿಯವರು ಈ ವಿಷಯದಲ್ಲಿ ತಕ್ಷಣ ಕ್ರಮ ಕೈಗೊಂಡು ರಸ್ತೆ ದುರಸ್ತಿಗೋಸ್ಕರ ವಿಶೇಷವಾದಂಥ ಹಣವನ್ನು ಬಿಡುಗಡೆ ಮಾಡದೆ ಹೋದರೆ ನಾವು ಬಸ್ಸುಗಳನ್ನು ಆ ರಸ್ತೆ ಮೇಲೆ ಓಡಾಡುವುದಕ್ಕೆ ಬಿಡುವುದಕ್ಕಾಗುವುದಿಲ್ಲ. ನಾವು ಪ್ರತಿನಿತ್ಯ ರೈತರಿಂದ ದೂರುಗಳನ್ನು ಸ್ವೀಕಾರ ಮಾಡುತ್ತಿರುವುದು ಮಾತ್ರವಲ್ಲದೆ ಬೈಗುಳಗಳನ್ನೂ ಸಹ ಕೇಳಬೇಕಾಗಿದೆ. ಇದರಿಂದ ಇವೊತ್ತು ನಾವು ಹಳ್ಳಿಗೆ ಹೋಗುವುದು ಕೂಡ ಕಷ್ಟವಾಗಿದೆ. ರೈತರು ''ನಾವು ಇಷ್ಟು ಹೇಳಿದರೂ ಕೂಡ ನೀವು ರಸ್ತೆ ಮಾಡಿಸುವುದಕ್ಕಾಗುವುದಿಲ್ಲ, ಪರಿಹಾರಕ್ಕಾಗಿ ಸರ್ಕಾರದಿಂದ ಬಿಡುಗಡೆಯಾದ 10 ಲಕ್ಷ ರೂಪಾಯಿಗಳು ಎಲ್ಲಿದೆ ಎಂದು ನನ್ನನ್ನು ಕೇಳುತ್ತಾರೆ. ಆದುದರಿಂದ, ಈ ಕೆಲಸವನ್ನು ತಕ್ಷಣದಿಂದಲೇ ಕೈಗೆತ್ತಿಕೊಳ್ಳಬೇಕು. ಇವೊತ್ತು ಜಿಲ್ಲಾ ಪರಿಷತ್ ರಸ್ತೆಗಳು, ಮಂಡಲ ಪಂಚಾಯಿತಿ ರಸ್ತೆಗಳು ಮತ್ತು ಪಿಡಬ್ಲ್ಯೂಡಿ ರಸ್ತೆಗಳೆಲ್ಲವೂ ಕೆಟ್ಟಸ್ಥಿತಿಯಲ್ಲಿವೆ. ಈ ಮೂರು ಭಾಗಗಳ ರಸ್ತೆ ದುರಸ್ತಿಗಾಗಿ 1 ಕೋಟಿ 60 ಲಕ್ಷ ರೂಪಾಯಿಗಳು ಬೇಕೆಂದು ಕೇಳಿದ್ದೇವೆ. ತಮ್ಮಲ್ಲಿ ನಿವೇದಿಸಿಕೊಳ್ಳುವುದೇನೆಂದರೆ, ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಬಿಡುಗಡೆ ಮಾಡಿ ಕಾಮಗಾರಿಗಳನ್ನು ಕೂಡಲೇ ಕೈಗೆತ್ತಿಕೊಂಡು ಅಲ್ಲಿಯ ಜನರ ಬವಣೆ ತಪ್ಪಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ಕೃಷಿ ಇಲಾಖೆಯವರು ವರದಿ ಮಾಡಿರುವ ಪ್ರಕಾರ ನಮ್ಮ ತಾಲ್ಲೂಕು ಒಂದರಲ್ಲಿಯೇ ಇಪ್ಪತ್ತೆರಡೂವರೆ ಸಾವಿರ ಎಕರೆಯಷ್ಟು ಬೆಳೆ ಹಾನಿಯಾಗಿದೆ. ಆದರೆ, ರೆವಿನ್ಯೂ ಅಧಿಕಾರಿಗಳು ಅದನ್ನು 17 ಸಾವಿರ ಎಕರೆಗಳಷ್ಟು ಬೆಳೆ ಹಾನಿಯಾಗಿದೆಯೆಂದು ನಮೂದಿಸಿದ್ದಾರೆ. ಇದರಲ್ಲಿ ಯಾವುದು ನಿಜವೆಂದು ಸ್ಪಷ್ಟಪಡಿಸಬೇಕು. ಜೊತೆಗೆ, ಕೆಲವು ಕಡೆ, ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ನಮ್ಮದು ಭತ್ತ ಬೆಳೆಯುವಂಥ ಪ್ರದೇಶವಾಗಿದ್ದು, ಭತ್ತವನ್ನು ಕೊಯ್ದು ಏನು ಮೆದೆ ಹಾಕಿದ್ದರು, ಆ ಮೆದೆಗೆ ನೀರು ನುಗ್ಗಿ ಭತ್ತ ಮೊಳಕೆಯಾಗಿದೆ. ಮತ್ತು ಕೆರೆ ಒಡೆದಿದ್ದರಿಂದಲೂ ಮತ್ತು ಹೆಚ್ಚು ಮಳೆ ಬಂದು ಹೆಚ್ಚು ನೀರು ಭತ್ತದ ಮೇಲೆ ನಿಂತಿದ್ದರಿಂದ ಭತ್ತ ಸಂಪೂರ್ಣ ಹಾಳಾಗಿದೆ. ಮುಖ್ಯವಾಗಿ ನಮ್ಮ ಬೆಳೆ ಭತ್ತ. ಅದು ಸುಮಾರು 22 ಎಕರೆಯಲ್ಲಿ ಸಂಪೂರ್ಣವಾಗಿ ನಾಶವಾಗಿರತಕ್ಕದನ್ನು ಕಣ್ಣಾರೆಕಂಡು ಜಿಲ್ಲಾಧಿಕಾರಿಯವರು ವರದಿ ಮಾಡಿದ್ದಾರೆ. ಅಂದಮೇಲೆ ಇವತ್ತು ನಾವು ರೈತರಿಗೆ ಏನು 300 ರಿಂದ 500ರವರೆಗೆ ಪರಿಹಾರವನ್ನು ಕೊಡುತ್ತಿದ್ದೇವೆಂದು ಸರ್ಕಾರ ಹೇಳಿದೆ ಅದನ್ನು ಇದುವರೆವಿಗೂ ಒಂದು ಎಕರೆಗೂ ಕೂಡ ಕೊಟ್ಟಿಲ್ಲ. ಆದುದರಿಂದ ಈ ಪರಿಹಾರವನ್ನು ಅದಕ್ಕಿಂತ ಹೆಚ್ಚು ಕೊಡಬೇಕೆಂದು ಕೇಳುವುದು ಸರಿಯಾಗಿದ್ದರೂ ಕೂಡ ಕೊನೆಯ ಪಕ್ಷ ತಾವು ಹೇಳಿದ ಪ್ರಕಾರವಾದರೂ ಒಂದು ಎಕರೆಗೆ 500 ರೂಪಾಯಿಗಳನ್ನು ಹಾಳಾಗಿರತಕ್ಕ ಪ್ರದೇಶಕ್ಕೆ ತತ್‌ಕ್ಷಣ ಕೊಡತಕ್ಕ ವ್ಯವಸ್ಥೆಯಾಗಬೇಕೆಂದು ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ಮೆದೆಗಳು, ಜೋಳದ ರಾಶಿ, ನೀರಿನಲ್ಲಿ, ನದಿಯಲ್ಲಿ ತೇಲಿಕೊಂಡು ಹೋಗಿದೆ. ಇಂಥವುಗಳಿಗೆ ಯಾವುದೇ ಒಂದು ವರಮಾನವನ್ನು ನಿಗಧಿ ಮಾಡಲಿ

ಯಾರೇ ರೈತರು ಇರಲಿ ಅವರಿಗೆ ತತ್‌ಕ್ಷಣ ಪರಿಹಾರವನ್ನು ಕೊಡಲು ವ್ಯವಸ್ಥೆ ಆಗಬೇಕು. ಇಂಥ ಕೇಸುಗಳು ನಮ್ಮಲ್ಲಿ ಸುಮಾರು 35-40 ಇವೆ. ಸಂಪೂರ್ಣವಾಗಿ ರೈತನ ಮನೆ ಮುಳುಗಿದೆ, ಯಾವುದೇ ದನಕರುಗಳನ್ನು ಸಾಕಲು ಬೇಕಾಗಿರತಕ್ಕಂಥ ಮೇವು ಇಲ್ಲದ ಪರಿಸ್ಥಿತಿ ಅವನಿಗೆ ಇದೆ, ಆದುದರಿಂದ ತಕ್ಷಣ ವಿಶೇಷವಾದಂಥ ನೆರವನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದಲಾದರೋ ಅಥವಾ ನೆರೆಹಾವಳಿಯ ನಿಧಿಯಿಂದಲಾದರೋ ಕೊಡುತ್ತೀರೋ ಗೊತ್ತಿಲ್ಲ. ಒಟ್ಟಿನಲ್ಲಿ ಅವರುಗಳಿಗೆ ವಿಶೇಷವಾದಂಥ ನೆರವಿನ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಯಾವ ಕೆರೆಗಳ ಕೆಳಗೆ ಇದ್ದಂಥ ಭೂಮಿ ಇತ್ತು ಆ ಕೆರೆಯು ಒಡೆದಿದೆ, ಆದರಿಂದಾಗಿ ಸಂಪೂರ್ಣವಾಗಿ ಮಣ್ಣು ರೈತನ ಹೊಲಕ್ಕೆ ಹೋಗಿ ಬೆಳೆ ನಾಶವಾಗಿ ಹೋಗಿದೆ. ಸುಮಾರು 2-3 ಪಟ್ಟು ಮಣ್ಣು ಕಲ್ಲು ಆ ಭೂಮಿಯ ಮೇಲೆ ಬಿದ್ದಿದೆ. ಆದರೆ ಆ ರೈತನಿಗೆ ಕೊಡತಕ್ಕ ಪರಿಹಾರದಿಂದ ನಿಜಕ್ಕೂ ಮೊದಲಿನ ರೀತಿಗೆ ಆ ಭೂಮಿಯನ್ನು ಮಾಡುವುದಕ್ಕೆ ಆಗುವುದಿಲ್ಲ. ಮೊದಲಿನ ರೀತಿಗೆ ಭೂಮಿಯನ್ನು ಸಮ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ನನ್ನ ಒಂದು ಸಲಹೆ ಏನೆಂದರೆ ಸರ್ಕಾರವೇ ಅದನ್ನು ಮಾಡಬೇಕು. ಅಥವಾ ಸಾಯಿಲ್ ಕನ್ಸ್‌ರ್‌ವೇಷನ್‌ನಿಂದ ಹೆಚ್ಚುವರಿ ಮಣ್ಣನ್ನು ತೆಗೆಯಿಸಿ ಆ ಭೂಮಿಯನ್ನು ಲೆವೆಲ್ ಮಾಡಬೇಕು. ಇದಕ್ಕೆ ರೈತನಿಗೆ ದುಡ್ಡನ್ನಾದರೂ ಕೊಡಿ ಇಲ್ಲದಿದ್ದರೆ ನೆರವನ್ನಾದರೂ ಕೊಡಿ. ಹೇಗೆ ಕೆರೆಯೊಡೆದರೆ ಕಟ್ಟಿಕೊಡುತ್ತೀರೋ ಹಾಗೆ ಹದಗೆಟ್ಟ ಭೂಮಿಯನ್ನು ಕೂಡ ಲೆವೆಲ್ ಮಾಡಿ ಕೊಡತಕ್ಕ ಜವಾಬ್ದಾರಿ ಸರ್ಕಾರ ವಹಿಸಬೇಕು. ಇವುಗಳೂ ಕೂಡ ಬಹಳ ಸಂಖ್ಯೆಯಲ್ಲಿವೆ ಆದುದರಿಂದ ತತ್‌ಕ್ಷಣ ಪರಿಹಾರ ಬರಬೇಕು. ಇಲ್ಲದಿದ್ದರೆ ರೈತರು 4-5 ವರ್ಷಗಳ ಕಾಲ ಬೆಳೆಯನ್ನು ಬೆಳೆಯುವುದಕ್ಕಾಗುವುದಿಲ್ಲ. ಅಂಥ ಒಂದು ಪರಿಸ್ಥಿತಿ ಬಂದಿದೆ. ಹೊಳೆಯ ಪಕ್ಕದಲ್ಲಿರತಕ್ಕ ಪಂಪ್‌ಸೆಟ್ಟುಗಳೂ ಸ್ವಲ್ಪ ಹೆಚ್ಚೂ ಕಡಿಮೆ ಎಲ್ಲವೂ ನೀರಿನಲ್ಲಿ ಮುಳುಗಿ ಹೋಗಿವೆ. ಕೆಲವು ಪಂಪ್‌ಸೆಟ್ಟುಗಳು ಕೊಚ್ಚಿ ಹೋಗಿವೆ. ಮೋಟಾರ್‌ಗಳೆಲ್ಲಾ ನೀರಿನಲ್ಲಿ ಇದ್ದುದರಿಂದ ಅವುಗಳನ್ನು ಚಾಲು ಮಾಡಿದಾಗ ಅವೆಲ್ಲಾ ಸುಟ್ಟು ಹೋಗಿವೆ. ಆದ್ದರಿಂದ ಪಂಪ್‌ಹೌಸ್ ಬಿದ್ದಿರಲಿ, ಅಥವಾ ಮೋಟಾರ್‌ಗಳು ಸುಟ್ಟಿರಲಿ, ಪೈಪ್ ಲೈನ್‌ಗಳು ಕಿತ್ತು ಹೋಗಿರಲಿ ಒಟ್ಟಿನಲ್ಲಿ 3 ಸಾವಿರ ರೂ.ಗಳನ್ನು ಕೊಡುತ್ತೇವೆಂದು ತಾವು ಏನು ಹೇಳುತ್ತಿದ್ದೀರಿ ಅದನ್ನು ನಮ್ಮಲ್ಲಿ ಇನ್ನೂ ಕೊಟ್ಟಿಲ್ಲವಾದ್ದರಿಂದ ತಕ್ಷಣ ಅದನ್ನು ಕೊಡಿಸಬೇಕು. ಇದನ್ನು ಅತಿಶೀಘ್ರವಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟೆಲ್ಲಾ ಗುರಿಯಾಗಿರುವ ರೈತರಿಗೆ ನಮ್ಮ ಸರ್ಕಾರದವರು ಘೋಷಣೆ ಮಾಡಿರುವಂತೆ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಬೇಕು, ಈಗ ಅಲ್ಲಿ ಏನಾಗಿದೆ ಎಂದರೆ ಸಾಲದ ವಸೂಲಾತಿ ಮಾತ್ರ ಬಹಳ ಜೋರಾಗಿ ನಡೆದಿದೆ. ಸರ್ಕಾರದವರು ಕೊಟ್ಟಿರುವಂಥ ಹೇಳಿಕೆಯ ಪರಿಜ್ಞಾನ ನಿಮ್ಮ ಸರ್ಕಾರದ ಅಧಿಕಾರಿಗಳಿಗೆ ಇರುವಂತೆ ಕಾಣಲಿಲ್ಲ. ಆದ್ದರಿಂದ ಸರ್ಕಾರದವರು ಕೂಡಲೇ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವಾಗಿ ಪರಿವರ್ತನೆ ಮಾಡುವುದರ ಜೊತೆಗೆ ಬೆಳೆ ಸಾಲದ ಬಡ್ಡಿಯನ್ನೂ ಮನ್ನಾ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಇವತ್ತಿನ ಪರಿಸ್ಥಿತಿಯನ್ನು ರೈತ ಬಹಳ ತೊಂದರೆಗೆ ಸಿಕ್ಕಿರುವುದರಿಂದ ಅವನು ತೆಗೆದುಕೊಂಡ ಯಾವುದೇ ರೀತಿಯ ಸಾಲವನ್ನೂ ಕೂಡ ವಾಪಸು ಕೊಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಅವನು ತೆಗೆದುಕೊಂಡಿರತಕ್ಕ ಸಾಲ ಏನಿದೆ ಆ ಸಾಲವನ್ನು ಮಾಫಿ ಮಾಡಬೇಕೆಂದು ನಾನು ಕೇಳುವುದಕ್ಕೆ ಇಷ್ಟಪಡದಿದ್ದರೂ ಆ ಸಾಲದ ಮೇಲಿನ ಬಡ್ಡಿಯನ್ನು ಪೂರ್ತಿಯಾಗಿ ಮಾಫಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವಾಗಿ ಪರಿವರ್ತನೆ ಮಾಡಬೇಕು. ಮತ್ತು ದೀರ್ಘಾವಧಿ ಸಾಲವನ್ನು ತೆಗೆದುಕೊಂಡಿರುವವರೂ ಕೂಡ ಬಹಳ ತೊಂದರೆಗೆ ಒಳಗಾಗಿರುವುದರಿಂದ ಅವರ ಸಾಲವನ್ನು ಕಂತಿನ ಮೂಲಕ ವಸೂಲ್ಮಾಡಿಕೊಳ್ಳಬೇಕು ಅಷ್ಟೇ ಅಲ್ಲ ಮುಂದೆ ಅವನು ಮತ್ತೆ

ಬೆಳೆಯನ್ನು ಬೆಳೆಯಲು ಹೊಸ ಸಾಲವನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇಂಥ ವಿಶಿಷ್ಟ ಪರಿಸ್ಥಿತಿಯಲ್ಲಿ ನಮ್ಮಲ್ಲಿ ಬರಗಾಲಕ್ಕಿಂತ ಕೆಟ್ಟ ಪರಿಸ್ಥಿತಿ ನಮಗೆ ಬಂದಿದೆ. ಭೂಕಂದಾಯವನ್ನು ತಾವು ರದ್ದು ಮಾಡಬೇಕು, ನೀರಿನ ತೆರಿಗೆಯನ್ನು ರದ್ದು ಮಾಡಬೇಕು, ಸರ್ಕಾರಕ್ಕೆ ರೈತರು ಏನು ಕೊಡಬೇಕು ಅದನ್ನು ಸಂಪೂರ್ಣವಾಗಿ ರದ್ದು ಮಾಡಲು ಆದೇಶ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಇನ್ನೊಂದು ಮಾತನ್ನು ಹೇಳುವುದಾದರೆ, ನಮ್ಮ ಕ್ಷೇತ್ರ ಸರ್ವ ರೀತಿಯಲ್ಲೂ ಹಾಳಾದ ಪ್ರದೇಶವಾಗಿರುವುದರಿಂದ ಇನ್‌ಷ್ಯೂರೆನ್ಸ್‌ನ್ನು ಕ್ಲೇಂ ಮಾಡುವುದಕ್ಕೆ ಬಹಳ ಅನುಕೂಲವಾಗಿದೆ. ಬ್ಯಾಂಕ್‌ಗಳಲ್ಲಿ, ಸೊಸೈಟಿಗಳಲ್ಲಿ ಸಾಲವನ್ನು ತೆಗೆದುಕೊಂಡಿರುವವರಿಗೆ ವಿಮಾ ಯೋಜನೆಯ ಅಡಿಯಲ್ಲಿ ಪೂರ್ಣ ಮನ್ನಾ ಮಾಡಬೇಕಾಗಿದೆ. ಇದು ಜಾರಿ ಆಗಬೇಕಾದರೆ ಆಣೆವಾರಿ 25 ಪರ್ಸೆಂಟ್‌ನೊಳಗೆ ಇರಬೇಕು. ನಮ್ಮಲ್ಲಿ ಆಣೆವಾರಿಯನ್ನು ಮಾಡಿರುವುದರಿಂದ ಇದನ್ನು ಒಂದು ವಿಶಿಷ್ಟ ಪರಿಸ್ಥಿತಿ ಎಂದು ಪರಿಗಣಿಸಿ ವಿಮಾ ಯೋಜನೆಗೆ ಅಳವಡಿಸಿದರೆ ಬಹಳಷ್ಟು ಜನ ರೈತರಿಗೆ ಅನುಕೂಲವಾಗುತ್ತದೆ. ಆದುದರಿಂದ ಬೆಳೆ ವಿಮಾ ಯೋಜನೆಯ ಅಡಿಯಲ್ಲಿ ನೊಂದ ರೈತರಿಗೆ ಫ್ಲಡ್‌ನಿಂದ ನಷ್ಟಕ್ಕೆ ಒಳಗಾಗಿರತಕ್ಕ ರೈತರಿಗೆ ಎಷ್ಟರ ಮಟ್ಟಿಗೆ ಅನುಕೂಲ ಮಾಡಿಕೊಡಬಹುದೆಂಬುದನ್ನು ತಾವು ಪರಿಗಣಿಸಿ ಕ್ರಮ ಕೈಗೊಳ್ಳಬೇಕು. ಇದರ ಬಗ್ಗೆ ಹೆಚ್ಚಿನ ಚಿಂತನೆ ಮಾಡಿ ಅವರಿಗೆ ಸಹಾಯ ಸಿಕ್ಕುವಂಥ ರೀತಿಯಲ್ಲಿ ಕಾನೂನನ್ನು ಮಾರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೀನು ಸೊಸೈಟಿಗಳನ್ನು ಮಾಡಿಕೊಂಡಿದ್ದಾರೆ. ಸೊಸೈಟಿಗಳ ಮುಖಾಂತರ ಕೆರೆಗಳಲ್ಲಿ ಮೀನುಗಳನ್ನು ಬಿಟ್ಟಿದ್ದಾರೆ. ಮಳೆ ಬಂದಾಗ ಕೆರೆಗಳಲ್ಲಿ ಬಿಟ್ಟಿದ್ದಂಥ ಮೀನುಗಳೆಲ್ಲಾ ಕೊಚ್ಚಿ ಹೋದುವು. ಅದೇ ರೀತಿ ಇನ್ನೂ ಕೆಲವು ಕಡೆ ಓವರ್ ಫ್ಲೋ ಆದುದರಿಂದ ಅಲ್ಲಿ ಒಂದು ಕೂಡ ಮೀನುಗಳಿಲ್ಲ. ಆದುದರಿಂದ ವಿಶೇಷವಾಗಿ ಮೀನುಗಾರರಿಗೆ ಅನುಕೂಲವಾಗುವಂಥ ರೀತಿಯಲ್ಲಿ ತಾವು ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ಅವರು ಮೀನುಗಳನ್ನು ಸಾಲ ಮಾಡಿ ತಂದು ಬಿಟ್ಟಿದ್ದಾರೆ. ಈ ಕಾರಣದಿಂದ ಅವರಿಗೆ ಪರಿಹಾರವನ್ನು ಒದಗಿಸಿಕೊಡಬೇಕು. ಇಷ್ಟೇ ಅಲ್ಲ, ಇನ್ನು ಬೇರೆ ಯಾವುದೇ ರೀತಿಯಿಂದ ಈ ಜನರಿಗೆ ಪರಿಹಾರವನ್ನು ಒದಗಿಸಿಕೊಡಲು ಸಾಧ್ಯವೇ ಅದರ ಪ್ರಕಾರ ತಾವು ತಕ್ಷಣ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ತಾವು ಈ ದಿಸೆಯಲ್ಲಿ ನಿಧಾನ ಮಾಡಿದರೆ ನಾವು ರೈತರಲ್ಲಿ ನಂಬಿಕೆಯನ್ನು ಕಳೆದುಕೊಳ್ಳುತ್ತೇವೆ. ನಾವು ಇವತ್ತು ಹಳ್ಳಿಗಳಿಗೆ ಹೋಗತಕ್ಕ ಪರಿಸ್ಥಿತಿಯಲ್ಲಿಲ್ಲ. ನಾವು ಹೋದ ಕೂಡಲೇ ಪರಿಹಾರವನ್ನು ಕೇಳುತ್ತಾರೆ. ಸರ್ಕಾರದವರು ಘೋಷಣೆ ಮಾಡಿರತಕ್ಕ ರೀತಿಯಲ್ಲಿ ನಿಮಗೆ ನಾವು ಪರಿಹಾರವನ್ನು ಕೊಟ್ಟೇಕೊಡಿಸುತ್ತೇವೆಂದು ಹೇಳಿ ಬಂದಿದ್ದೇವೆ. ಆದ್ದರಿಂದ ಈ ಪರಿಹಾರವನ್ನು ಯಾವಾಗ ಕೊಡಿಸುತ್ತೀರಿ, ಯಾವಾಗ ಕೊಡಿಸುತ್ತೀರೆಂದು ನಮ್ಮನ್ನು ಕೇಳುತ್ತಾರೆ. 3 ಸಾವಿರ ರೂ. ಪರಿಹಾರ ಕೊಡುತ್ತೇವೆಂದು ತಾವು ಏನು ಭರವಸೆ ಕೊಟ್ಟಿದ್ದೀರಿ ಅದು ನಮ್ಮಲ್ಲಿ ಇನ್ನೂ ಸರಿಯಾಗಿ ಯಾರಿಗೂ ಸಿಕ್ಕಿಲ್ಲ. ಆದುದರಿಂದ ತಕ್ಷಣ ನಷ್ಟಕ್ಕೊಳಗಾಗಿರುವವರ ವಿವರಗಳನ್ನು ಪಡೆದು ನಮಗೆ ಸಿಕ್ಕಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡಬೇಕು, ಆ ಭಾಗದ ಶಾಸಕರು ನಿರಾತಂಕವಾಗಿ ಓಡಾಡಲು ಅನುಕೂಲ ಮಾಡಿಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಂಡು ಈ ಕಾರ್ಯಕ್ರಮವನ್ನು ಯುದ್ಧದೋಪಾದಿಯಲ್ಲಿ ಕೈಗೊಳ್ಳಬೇಕೆಂದು ಹೇಳಿ ಸರ್ಕಾರಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಶ್ರೀ ಡಿ.ಎ. ಚಿನ್ನಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಎಂ. ಮಹದೇವ್:- ನೆರೆಹಾವಳಿ ಬಗ್ಗೆ ಮಾತನಾಡುತ್ತಿದ್ದೇವೆ ಇಲ್ಲಿ ಕೋರಂ ಹಾವಳಿಯಾಗಿದೆಯಲ್ಲ ಇದಕ್ಕೆ ಯಾರು ಕಾರಣ? ವಿರೋಧ ಪಕ್ಷದವರು ಇಷ್ಟು ಜನರು ಇದ್ದು....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ನಿಮ್ಮ ಪಕ್ಷದಲ್ಲಿ ಏನಾಯಿತು 190 ಜನ ಇದ್ದು 15 ಜನ ಇಲ್ಲ ನಾಚಿಕೆ ಬರುವುದಿಲ್ಲವೇ ನಿಮಗೆ....

ಶ್ರೀ ಎಂ. ಮಹದೇವ್:- ನಾವು ಇಷ್ಟು ಜನರಿದ್ದರೂ ಮ್ಯಾನೇಜ್ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಮಹದೇವ್‌ರವರು ಎಷ್ಟು ಹೊತ್ತಿಗೆ ಈ ಸದನಕ್ಕೆ ಪಾದಾರ್ಪಣೆ ಮಾಡಿದ್ದಾರೆಂದು ಕೇಳಿದರೆ ಗೊತ್ತಾಗುತ್ತದೆ ಮತ್ತು ಎಷ್ಟು ಹೊತ್ತಿಗೆ ಅವರು ಹೋಗುತ್ತಾರೆಂದೂ ತಿಳಿದುಕೊಳ್ಳಬೇಕು. ಈ ಸದನಕ್ಕಿಂತ ಹೆಚ್ಚಾಗಿ ಮುಖಂಡತ್ವ ಅದೂ ಇದು ಎಂದು ವಹಿಸಿಕೊಂಡು ಓಡಾಡುತ್ತಿದ್ದಾರೆ. 107 ಎಂದು ಆಗಿತ್ತು. ಅದು ಪೋಲೀಸ್ ಇಲಾಖೆಯ ಗುಂಡಾ ಕೇಸ್ ಅನ್ನು 107 ಸೆಕ್ಷನ್ ಪ್ರಕಾರ ದಸ್ತಗಿರಿ ಎಂದರೆ ಅಷ್ಟೇ....

ಶ್ರೀ ಎಂ. ಮಹದೇವ್:- ಈಗ 107 ಇಲ್ಲ ಇನ್ನೂ ಜಾಸ್ತಿ ಆಗಿದೆ. ನೀವು ನೋಡಿಲ್ಲ.

† ಶ್ರೀ ಎ. ರುಕ್ಮಯ್ಯ ಪೂಜಾರಿ:- ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಹೇಳಿದ ಹಾಗ ನೆರೆ ಹಾವಳಿ ಬಗ್ಗೆ ಇಲ್ಲಿ ಚರ್ಚೆಯಾಗುತ್ತಿದೆ ರೈತರ ಸಮಸ್ಯೆ ಬಗ್ಗೆ ನಮಗೆ ಕಳಕಳಿ ಇದೆ ಮತ್ತು ಇದರ ಗಂಭೀರತೆಯ ಬಗ್ಗೆ ನಾವು ಎಲ್ಲರೂ ವಿಚಾರ ಮಾಡುತ್ತಿದ್ದೇವೆ. ನಾವು ಇದರ ಬಗ್ಗೆ ಎಷ್ಟು ಕಾಳಜಿ ಇಟ್ಟುಕೊಂಡಿದ್ದೇವೆಂಬುದು ನಮ್ಮ ಹಾಜರಾತಿ ತೋರಿಸುತ್ತದೆ ಅದು ಒಂದು ಉದಾಹರಣೆ ಎಂದು ನಾನು ಹೇಳಬಯಸುತ್ತೇನೆ. ಮಹಾತ್ಮಾ ಗಾಂಧೀಜಿಯವರ ಹೆಸರನ್ನು ಹೇಳುತ್ತೇವೆ ಮಹಾತ್ಮಾ ಗಾಂಧೀಜಿಯವರು ಏನು ಹೇಳಿದ್ದಾರೆ ಎಂದರೆ ಈ ದೇಶದಲ್ಲಿ ನೂರಕ್ಕೆ 80 ಪರ್ಸೆಂಟ್ ರೈತರಿದ್ದಾರೆ, ಇವರ ಜೀವನ ಮಟ್ಟ ಸುಧಾರಣೆಯಾಗಿದೆಯೇ? ಸ್ವಾತಂತ್ರ್ಯ ಸಿಕ್ಕಿ 46 ವರ್ಷಗಳು ಕಳೆದರೂ, ಈ ಅಂತರದಲ್ಲಿ ರೈತರ ಬಗ್ಗೆ ಯಾವುದೇ ಕೆಲಸಗಳನ್ನು, ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿಲ್ಲ. ಮೊನ್ನೆ ತಾನೆ ಅತಿವೃಷ್ಟಿಯಿಂದ, ನೆರೆಹಾವಳಿಯಿಂದ ರೈತರಿಗೆ ತೊಂದರೆಯಾಗಿದ್ದು ಇದೂ ಕೂಡ ಅನಿರೀಕ್ಷಿತವಾದ ಒಂದು ಪರಿಸ್ಥಿತಿಯಾಗಿದೆ. ಇಂತಹ ಸಂದರ್ಭದಲ್ಲಿ ಬಹುಶಃ ಅಧಿಕಾರಿಗಳು ಸರಿಯಾದ ಸಮಯಕ್ಕೆ ಹೋಗಿ ಕಾರ್ಯ ಪ್ರವೃತ್ತರಾಗಿದಿದ್ದರೆ ಇಷ್ಟೆಲ್ಲಾ ಜೀವದ ಹಾನಿ, ಆಸ್ತಿಯ ಹಾನಿಯಾಗುತ್ತಿರಲಿಲ್ಲ. ಇದೆಲ್ಲವನ್ನೂ ಕಡಿಮೆ ಮಾಡಬಹುದಿತ್ತು. ನಮ್ಮ ಮುಖ್ಯಮಂತ್ರಿಗಳು, ಕಂದಾಯ ಸಚಿವರು ಆಯಾಯ ಕ್ಷೇತ್ರದ ಶಾಸಕರು ಕೂಡ ಅಲ್ಲಲ್ಲಿ ಏನು ತೊಂದರೆ ಉಂಟಾಗಿದೆ ಅಲ್ಲಿಗೆ ಹೋಗಿ ತೊಂದರೆಗೀಡಾದ ರೈತರಿಗೆ ಕೃಷಿಕರಿಗೆ ಶಾಂತಿಯನ್ನು ಹೇಳಿ ಬಂದಿರಬಹುದು. ಆದರೆ ಶಾಂತಿಯನ್ನು ಹೇಳಿದ ತಕ್ಷಣ ಅವರ ಸಮಸ್ಯೆ ಪರಿಹಾರವಾಗುವುದಿಲ್ಲ. ಅವರಿಗೆ ಏನು ಕಷ್ಟ ಇದೆ ಏನು ನಷ್ಟವಾಗಿದೆ ಅದರ ಬಗ್ಗೆ ಸಂಪೂರ್ಣ ಮಾಹಿತಿ ಪಡೆದು ಅದಕ್ಕೆ ಬೇಕಾದ ಪರಿಹಾರವನ್ನು ವ್ಯವಸ್ಥೆ ಮಾಡಬೇಕು ಅದು ನಮ್ಮ ಕಡೆಗೆ ಇರುವಂತಹ ಕೆಲಸವಾಗಿದೆ. ಪರಿಹಾರ ಕೊಟ್ಟರೆ ಎಷ್ಟು ಕೊಟ್ಟಿದ್ದೇವೆ ಎಷ್ಟು ಕೊಡಬೇಕಾಗಿದೆ ಎಂಬುದರ ಬಗ್ಗೆ ಸರಿಯಾಗಿ ಎಸ್ಟಿಮೇಟ್ ಮಾಡಿಲ್ಲ. ಎಸ್ಟಿಮೇಟ್ ಸರ್ವೆಯಾಗಿಲ್ಲ. 306 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ತಿಳಿಸಿದ್ದಾರೆ ನಿಜವಾಗಿಯೂ ಇದಕ್ಕಿಂತ 2-3 ಪಟ್ಟು ಜಾಸ್ತಿ ನಷ್ಟವಾಗಿರಬಹುದು. ಇದು ಕಡಿಮೆ ಎಂದು ನನಗನ್ನಿಸುತ್ತದೆ ಪರಿಹಾರ ಇನ್ನೂ ಜಾಸ್ತಿ ಕೊಡಬೇಕಾಗಿತ್ತು. ರೈತರ ಸಮಸ್ಯೆ ಬಹಳ ಗಂಭೀರವಾಗಿದೆ 92 ಜೀವ ಹಾನಿಯಾಗಿದೆ ಜಾನುವಾರುಗಳ ಜೀವ ಹೋಗಿದೆ ಆಸ್ತಿ ನಷ್ಟವಾಗಿದೆ ಮನೆ ಹೋಗಿದೆ ಈ ರೀತಿ ನಷ್ಟವಾದಂತಹ ಸಂದರ್ಭದಲ್ಲಿ ಪರಿಹಾರ ಕೊಡುವಂತಹ ಸಂದರ್ಭದಲ್ಲಿ ಪ್ರಾಮಾಣಿಕವಾದ ಪರಿಹಾರ ಕೊಡತಕ್ಕಂತಹ ಚಿಂತನೆ ಮಾಡುವುದು ಕೂಡ ಅಷ್ಟೇ ಅಗತ್ಯದ ಕೆಲಸವಾಗಿದೆ. ನೂರಕ್ಕೆ 10ಜನ ರೈತರ ಪರಿಸ್ಥಿತಿ ಕೂಡಲೇ ರೆಕವರಿ ಆಗಬಹುದು ಆದರೆ ಹೆಚ್ಚು ಜನ 10 ವರುಷವಾದರೂ ರೆಕವರಿಯಾಗುವುದಕ್ಕೆ ಬೇಕಾಗುತ್ತದೆ. ಅದಕ್ಕಿಂತ ಜಾಸ್ತಿ ಜೀವನ ಪರ್ಯಂತ ರೆಕವರಿಯಾಗುವುದಕ್ಕೆ ಸಾಧ್ಯವಿಲ್ಲ ಅಂತಹ ಪರಿಸ್ಥಿತಿಯಲ್ಲಿ ರೈತರಿದ್ದಾರೆ ಅಷ್ಟು

ತೊಂದರೆ ಉಂಟಾಗಿದೆ. ಇಂಥ ಒಂದು ಪರಿಸ್ಥಿತಿಯಲ್ಲಿ ಅವರಿಗೆ ಒಂದು ತಾತ್ಕಾಲಿಕ ಪರಿಹಾರವನ್ನು ಕೊಡುವ ದೃಷ್ಟಿಯಿಂದ ಕೂಡಲೇ ಅವರಿಗೆ ಪರಿಹಾರ ಎಷ್ಟು ಕೊಡಬೇಕೆಂದರೆ ನಷ್ಟ ಎಷ್ಟಾಗಿದೆ ಅಷ್ಟು ನಷ್ಟವನ್ನು ಪೂರ್ತಿ ಕೊಡುವಂತೆ, ಆದರಲ್ಲೂ ಕೂಡ ಅವರ ಕುಟುಂಬದ ಆದಾಯ ಅದನ್ನು ಪರಿಗಣಿಸುವುದು ಖಂಡಿತವಾಗಿಯೂ ಈ ಸಂದರ್ಭದಲ್ಲಿ ಸರಿಯಲ್ಲ. ಯಾವುದೇ ವ್ಯಕ್ತಿ ಅಥವಾ ಪ್ರತಿ ಕುಟುಂಬಕ್ಕೂ ಕೂಡ ತಾವು ಅವರಿಗೆ ಕೊಡತಕ್ಕಂಥ ಪರಿಹಾರ ಪ್ರಾಮಾಣಿಕವಾಗಿ, ನ್ಯಾಯಯುತವಾಗಿ ಕೊಡುವಂಥದ್ದು ಅಷ್ಟೇ ಮಹತ್ವದ್ದು ಇದೆ. ಮತ್ತೆ ಅದು ಎಲ್ಲರಿಗೂ ಒಂದೇ ರೀತಿಯದಾಗಿಯೂ ಇರಬೇಕು. ಇದರಲ್ಲಿ ಸಣ್ಣ ರೈತರು, ದೊಡ್ಡ ರೈತರೆಂದು ವ್ಯತ್ಯಾಸವಿರಬಾರದು, ಎಲ್ಲ ರೈತರಿಗೂ ಒಂದೇ ರೀತಿಯಲ್ಲಿ ಯಾರಿಗೂ ನಷ್ಟವಿಲ್ಲದೆ ಅವರಿಗೆ ಬರುವಂಥ ಪರಿಹಾರವನ್ನು ಕೊಡುವಂಥ ಒಂದು ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಳ್ಳಬೇಕಾಗಿದೆ. ಸಾಲವಿಲ್ಲದೆ ರೈತರು ಯಾರೂ ಕೂಡ ಇರುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ರೈತರ ಸಾಲ 100ಕ್ಕೆ 100 ಮನ್ನ ಮಾಡಬೇಕು. ಮನ್ನ ಮಾಡುವುದು ಮಾತ್ರವಲ್ಲ, ಅವರಿಗೆ ಇನ್ನು ಮುಂದೆ ಅವರ ಕೃಷಿ ಉತ್ತಮಗೊಳಿಸುವ ದೃಷ್ಟಿಯಿಂದ ಅಥವಾ ಕೃಷಿ ಮುಂದೆ ಅಭಿವೃದ್ಧಿ ಮಾಡುವ ದೃಷ್ಟಿಯಿಂದ ಅವರಿಗೆ ಸಹಾಯ ಮಾಡುವುದು ಅಗತ್ಯವಿದೆ. ಈ ದೃಷ್ಟಿಯಿಂದ ಬಡ್ಡಿರಹಿತ ಸಾಲ ಐದು ವರ್ಷದವರೆಗೆ ಯಾವ ಬಡ್ಡಿಯೂ ಇಲ್ಲದ ಸಾಲ ಕೊಡತಕ್ಕಂಥ ಕಾರ್ಯಕ್ರಮವನ್ನು ಕೂಡ ಮಾಡತಕ್ಕಂಥದ್ದು ತುಂಬ ಅಗತ್ಯವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾವು ಆ ಜಾಗಕ್ಕೆ ಹೋದಾಗ ಮನೆಗಳನ್ನು ಕಟ್ಟಿಸಿ ಕೊಡುತ್ತೇವೆಂದು ಕೆಲವರಿಗೆ ಭರವಸೆ ಕೂಡ ಕೊಟ್ಟಿದ್ದಾರೆ. ಕೃಷಿ ಕಾರ್ಮಿಕರಿಗೆ ಆಗಲಿ ಯಾರಿಗೇ ಆಗಲಿ ಮನೆಗಳನ್ನು ಕಟ್ಟಿಕೊಳ್ಳಲು ನಿವೇಶನಗಳನ್ನೂ ಕೂಡ ಕೊಟ್ಟಿಲ್ಲ. ಅವರಿಗೆ ಮನೆ ನಿವೇಶನಗಳನ್ನು ಕೊಡುವಂಥ ಕಾರ್ಯಕ್ರಮ ಆಶ್ರಯ ಯೋಜನೆ ಪ್ರಕಾರ ಇದೆ. ಆದರೆ ಆಶ್ರಯ ಯೋಜನೆಯ ಪ್ರಕಾರ ಅವರಿಗೆ ಮನೆಗಳನ್ನು ಕಟ್ಟಲಿಕ್ಕೆ ಕೊಡತಕ್ಕಂಥ ಸೈಟ್‌ನ ಅಳತೆ 30 ಮತ್ತು 40 ಇದರಲ್ಲಿ ಏನು ಮಾಡಲಿಕ್ಕೂ ಸಾಧ್ಯವಿಲ್ಲ. ಖಂಡಿತವಾಗಿಯೂ 60 ಮತ್ತು 50 ವಿಸ್ತೀರ್ಣಕ್ಕೆ ಅಳವಡಿಸಿದ್ದೇ ಆದರೆ ಖಂಡಿತವಾಗಿಯೂ ಮನೆ ಕಟ್ಟಿ ಅದರಲ್ಲಿ ಎರಡು ಜಾನುವಾರುಗಳನ್ನು ಸಾಕುವುದಕ್ಕೆ ಅನುಕೂಲವಾಗುತ್ತದೆ. ಇಲ್ಲವಾದರೆ ಬಹಳ ಕಷ್ಟವಾಗುತ್ತದೆ. ಇದನ್ನು 30 ಮತ್ತು 40ರ ಬದಲು 50 × 60 ಕೊಟ್ಟರೆ ತುಂಬ ಅನುಕೂಲವಾಗುತ್ತದೆಂದು ನನಗನ್ನಿಸುತ್ತದೆ. ನನ್ನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹುಶಃ ಪ್ರತಿ ವರ್ಷ ಹೂಳು ಸಮಸ್ಯೆ ಉಂಟಾಗುತ್ತದೆ. ಮಳೆ ಬಂದಾಗ ದೋಣಿಗಳು ಮುಳುಗಿ ಜೀವಕ್ಕೆ ಹಾನಿಯಾಗುವಂಥ ಪರಿಸ್ಥಿತಿ ಉಂಟಾಗುತ್ತದೆ. ಮತ್ತು ಕರಾವಳಿ ಪ್ರದೇಶಗಳಲ್ಲಿ ಮಣ್ಣು ಕೊರತೆ ಉಂಟಾಗಿ ಅಲ್ಲಿ ಮನೆಗಳು ನಾಶವಾಗುತ್ತವೆ. ಅಲ್ಲಿ ಬೆಳೆಯತಕ್ಕಂಥ ಭತ್ತ, ಮತ್ತು ತೆಂಗು ಬೆಳೆಯೂ ಕೂಡ ನಾಶವಾಗುವಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಹಲವಾರು ಇಂಥ ಸಂದರ್ಭಗಳಲ್ಲಿ ಅನಿರೀಕ್ಷಿತವಾದ ಘಟನೆಗಳು ಸಂಭವಿಸುತ್ತವೆ. ನೆರೆಹಾವಳಿ ಅನಿರೀಕ್ಷಿತವಾಗಿ ಬಂದು ನಮ್ಮ ಕೈಮೀರಿ ತೊಂದರೆಗಳು ಉಂಟಾಗುತ್ತವೆ. ಆದರೆ ಹಲವಾರು ಸಂದರ್ಭಗಳಲ್ಲಿ ಅದಕ್ಕೆ ಸರಿಯಾದ ಪರಿಹಾರ ಕ್ರಮ ತೆಗೆದುಕೊಳ್ಳುವ ಕಾರಣ ಅಲ್ಲಿ ತೊಂದರೆಗಳಾಗುತ್ತಿವೆ. ನಮ್ಮ ಜಿಲ್ಲೆಯಲ್ಲಿ ಮುಖ್ಯವಾಗಿ ಕರಾವಳಿ ಪ್ರದೇಶಗಳಲ್ಲಿ ತಡೆಗೋಡೆ ಕಟ್ಟುವಂಥಾದ್ದನ್ನು ಹಲವಾರು ವರ್ಷಗಳಿಂದ ಅದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇವೆ. ಹೋರಾಟ ಮಾಡುತ್ತಿದ್ದೇವೆ. ಇವತ್ತಿನವರೆಗೂ ಕೂಡ ಆ ತಡೆಗೋಡೆ ಕಟ್ಟುವಂಥ ಕೆಲಸ ಆಗಿಲ್ಲ. ತಡೆಗೋಡೆ ಕಟ್ಟುವಂಥದ್ದಕ್ಕೆ ಪ್ರಾಮಾಣಿಕ ಪ್ರಯತ್ನ ಇವತ್ತು ಆಗಿದ್ದರೆ ಬಹುಶಃ ಕರಾವಳಿ ಪ್ರದೇಶಗಳಲ್ಲಿ ಆಗತಕ್ಕಂಥ ಎಲ್ಲಾ ಕಷ್ಟನಷ್ಟಗಳನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತಿತ್ತು. ಈ ವರ್ಷ ನಮ್ಮಲ್ಲಿ ಸುಮಾರು 13 ದೋಣಿಗಳು ಕಾಣೆಯಾಗಿವೆ. ಸುಮಾರು ನಾಲ್ಕು ಲಕ್ಷ ಅರವತ್ತೊಂದು ಸಾವಿರ ಹೆಕ್ಟೇರ್ ಕೃಷಿ ಜಮೀನು ಹಾಳಾಗಿದೆ. ಈ ಸಂದರ್ಭದಲ್ಲಿ ಪರಿಸ್ಥಿತಿಯನ್ನು ತಾವು ತುಂಬಾ ಗಂಭೀರವಾಗಿ ಪರಿಗಣಿಸಿ ಹಲವಾರು ಸಮಸ್ಯೆಗಳನ್ನು ಪರಿಹಾರ ಮಾಡಲಿಕ್ಕೆ ಒಂದು ಒಳ್ಳೆಯ ಯೋಜನೆಯನ್ನು

ಹಾಕಿಕೊಂಡು ತಡೆಗೋಡೆಗಳನ್ನು ಕಟ್ಟುವಂಥಾಗಬೇಕು. ಮತ್ತು ಇದೇ ಭಾಗದಲ್ಲಿ ಹೂಳನ್ನು ಎತ್ತುವಂಥ ಕಾರ್ಯಕ್ರಮ ಮಾಡಿದರೆ ತುಂಬ ಪ್ರದೇಶದ ರೈತರಿಗೆ ತುಂಬ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಸರ್ಕಾರದವರು ಸತ್ತವರಿಗೆ ಪರಿಹಾರ ಕೊಡುವಂಥದ್ದನ್ನು ಕೂಡ ಪ್ರಕಟಣೆ ಮಾಡಿದ್ದಾರೆ. 40 ಸಾವಿರ 50 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ತಾವು ಹೇಳಿದ್ದೀರಿ. ಆದರೆ ಇದರಲ್ಲಿ ವ್ಯತ್ಯಾಸ ಏತಕ್ಕೆ ಮೊನ್ನೆದಿನ ನಡೆದಂಥ ಕೋಮು ಘರ್ಷಣೆಯಲ್ಲಿ ಸತ್ತಂಥ ವ್ಯಕ್ತಿಗೆ ಒಂದು ಲಕ್ಷ ರೂಪಾಯಿಯನ್ನು ಕೊಡುವುದಾದರೆ ಇದರಲ್ಲಿ ಏತಕ್ಕೆ ಈ ವ್ಯತ್ಯಾಸ. ಪ್ರಾಣದಲ್ಲಿ ವ್ಯತ್ಯಾಸವನ್ನು ತಾವು ಕಾಣಲಿಕ್ಕೆ ಸಾಧ್ಯ ಉಂಟೆ? ಅದರಲ್ಲೂ ಕೂಡ ಸತ್ತವರಿಗೆ ಒಂದು ಲಕ್ಷ ರೂಪಾಯಿ ಕೊಡುವಂಥಾದರೆ ಅದು ನ್ಯಾಯ ಕೂಡ ಹೌದು. ಆದ್ದರಿಂದ ಅದನ್ನು ಕೂಡ ತಾವು ಹೆಚ್ಚಿಸಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಜಾಸ್ತಿ ಮಳೆ ಬಂದು ನಿಂತು ಮತ್ತೆ ಮಳೆ ಬಂದಿರತಕ್ಕಂಥ ನಮ್ಮ ಜಿಲ್ಲೆಯಲ್ಲಿ ಆಗಿದೆ. ಇದಕ್ಕಾಗಿ ನಮ್ಮ ಜಿಲ್ಲೆಯಲ್ಲಿ ಸಣ್ಣ ಸಣ್ಣ ಹರಿವೆ ನೀರು ಹರಿದುಹೋಗಲು ತೋಡಿರುವಂಥದ್ದು ಇದೆ. ಅದಕ್ಕೆ ನಾವು ವೆಂಟೆರ್ ಡ್ಯಾಮ್ ಕಟ್ಟಿರುತ್ತೇವೆ. ಇದರಿಂದ ಗದ್ದೆಗಳಿಗೆ ನೀರನ್ನು ಒದಗಿಸುವಂಥ ಕಾರ್ಯಕ್ರಮ ನಮ್ಮ ಜಿಲ್ಲೆಯಲ್ಲಿ ಆಗುತ್ತಿದೆ. ಮಳೆ ಬಂದು ಆಸುಪಾಸು ದರದಲ್ಲಿ ಇದ್ದಂಥ ಎಲ್ಲಾ ಭತ್ತ ಸಂಪೂರ್ಣವಾಗಿ ಹಾಳಾಗಿದೆ. ಈ ಸಂದರ್ಭದಲ್ಲಿ ನಷ್ಟದ ಬಗ್ಗೆ ಸರ್ವೆ ಮಾಡಿ ಅದರ ಸಂಪೂರ್ಣ ನಷ್ಟವನ್ನು ಅಂದಾಜು ಮಾಡುವಂಥಾದ್ದು ತುಂಬ ಅಗತ್ಯವಿದೆ. ಪರಿಹಾರ ಕೊಡುವ ಬಗ್ಗೆ ತಾವು ಜಾಸ್ತಿ ಕೊಡುವಂಥ ಆಲೋಚನೆ ಮಾಡಬೇಕಾಗಿದೆ. ಮತ್ತು ನೆರೆಯ ಹಾವಳಿಯಿಂದ ನಮ್ಮ ಜಿಲ್ಲೆ ಮಾತ್ರವಲ್ಲ ರಾಜ್ಯದ ಹೆಚ್ಚಿನ ರಸ್ತೆಗಳು ಹಾಳಾಗಿವೆ. ನೆರೆಹಾವಳಿಯಿಂದ ಕೆಟ್ಟಂಥ ರಸ್ತೆಗಳ ರಿಪೇರಿ ಇವತ್ತಿನವರೆಗೂ ಆಗಿಲ್ಲ. ರಿಪೇರಿ ಆಗಿಲ್ಲದೆ ವಾಹನಗಳ ಸಂಚಾರಕ್ಕೂ ಕೂಡ ಬಹಳ ತೊಂದರೆಯಾಗಿದೆ. ಈ ದೃಷ್ಟಿಯಿಂದ ಎಲ್ಲಾ ರಸ್ತೆಗಳನ್ನು ಆದಷ್ಟು ಬೇಗ ರಿಪೇರಿ ಮಾಡುವಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಅದಕ್ಕೆ ಬೇಕಾದಂಥ ಹಣವನ್ನು ಕೂಡ ಸರ್ಕಾರದವರು ಒದಗಿಸಬೇಕಾದದ್ದು ಅಷ್ಟೇ ಅಗತ್ಯವಿದೆ ಎಂದು ಹೇಳುತ್ತೇನೆ. ಇವತ್ತು ನೆರೆಹಾವಳಿ ಬಂತು, ಬೆಳೆ ನಾಶವಾಯಿತು. ಪುನಃ ಬೆಳೆ ಬೆಳೆಸಬೇಕೆಂದರೆ ಬಹಳ ಕಷ್ಟ ಇದೆ. ಆರ್ಥಿಕ ಸಹಾಯ ಮಾಡುತ್ತೇವೆ, ಪಂಪ್ ಇದೆ, ನೀರು ಇದೆ ಎಂದರೂ ಕರೆಂಟ್ ಇಲ್ಲ. ನಮ್ಮಲ್ಲಿ ದಿನಕ್ಕೆ 3 ಗಂಟೆ ವಿದ್ಯುತ್ ಕಡಿತ ಮಾಡುತ್ತಿದ್ದಾರೆ. ಮೂರು ಗಂಟೆ ಮಾತ್ರವಲ್ಲ, ದಿನಕ್ಕೆ 25 ಸಲ ಕಟ್ ಆಗುತ್ತಿದೆ. ಒಬ್ಬ ರೈತ ಪಂಪ್ ಚಾಲು ಮಾಡಿ ಮನೆಗೆ ಮುಟ್ಟುವ ಹೊತ್ತಿಗೆ ಪಂಪ್ ನಿಂತು ಹೋಗಿರುತ್ತದೆ. ಈ ರೀತಿ ದಿನಕ್ಕೆ 25 ಸಲ ಕರೆಂಟ್ ಹೋಗುತ್ತದೆ. ಹೀಗಾಗಿ ನೀರು ಇದ್ದರೂ ಭತ್ತ, ಅಡಿಕೆ, ತೆಂಗಿಗೆ ನೀರು ಬಿಡಲಿಕ್ಕೆ ಸಾಧ್ಯವಿಲ್ಲ. ಅಲ್ಲಿನ ಟ್ರಾನ್ಸ್‌ಫಾರ್ಮರ್ ಸರಿಯಾಗಿಲ್ಲ. ಇದರಿಂದಾಗಿ ನಮ್ಮ ವಿಠ್ಠಲ ಕ್ಷೇತ್ರದ ಆಸುಪಾಸಿನ ರೈತರಿಗೆ ತುಂಬಾ ತೊಂದರೆಯಾಗಿದೆ. ಅಲ್ಲಿಗೆ ಫೀಡ್ ಮಾಡತಕ್ಕ ಪುತ್ತೂರಿನ ಟ್ರಾನ್ಸ್‌ಫಾರ್ಮರನ್ನು ಕೂಡ ಬದಲಾವಣೆ ಮಾಡಬೇಕಾಗಿದೆ. ಇದನ್ನು ಆದಷ್ಟು ಜಾಗ್ರತೆ ಸರಿ ಮಾಡಿ ವಿದ್ಯುತ್ ಕೊರತೆಯನ್ನು ನೀಗಿಸಬೇಕೆಂದು ತಮ್ಮನ್ನು ಒತ್ತಾಯಿಸುತ್ತಿದ್ದೇನೆ. ಇನ್‌ಶ್ಯೂರೆನ್ಸ್ ಬಗ್ಗೆ ಹೇಳುವುದಾದರೆ, ಇಡೀ ತಾಲ್ಲೂಕನ್ನು ಯೂನಿಟ್ ಆಗಿ ಮಾಡುವುದರ ಬದಲು ಕುಟುಂಬವನ್ನು ಯೂನಿಟ್ ಆಗಿ ಮಾಡಿ ಯಾರಿಗೆ ನಷ್ಟವಾಗಿದೆ ಅವರಿಗೆ ಪರಿಹಾರ ಕೊಡತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿದೆ. ಇದನ್ನು ಮಾಡಬೇಕೆಂದು ಹೇಳಿ, ಖಂಡಿತ ನೆರೆಹಾವಳಿಯಿಂದ ಯಾರಿಗೆ ತೊಂದರೆಯಾಗಿದೆ ಅದರ ಬಗ್ಗೆ ಸಂಪೂರ್ಣ ಮಾಹಿತಿ ಪಡೆದು ನೂರಕ್ಕೆ ನೂರು ಪರಿಹಾರ ಕೊಟ್ಟು ಜೀವನ ಮಟ್ಟ ಸುಧಾರಣೆ ಮಾಡುವುದು ಮತ್ತು ಮುಂದೆ ಜೀವನ ಮಾಡುವುದಕ್ಕೆ ತೊಂದರೆಯಾಗದಂತೆ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಪ್ರಾರ್ಥಿಸಿ ಇಷ್ಟು ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಹಾಕಿಕೊಂಡು ತಡೆಗೋಡೆಗಳನ್ನು ಕಟ್ಟುವಂಥಾಗಬೇಕು. ಮತ್ತು ಇದೇ ಭಾಗದಲ್ಲಿ ಹೂಳನ್ನು ಎತ್ತುವಂಥ ಕಾರ್ಯಕ್ರಮ ಮಾಡಿದರೆ ತುಂಬ ಪ್ರದೇಶದ ರೈತರಿಗೆ ತುಂಬ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಸರ್ಕಾರದವರು ಸತ್ತವರಿಗೆ ಪರಿಹಾರ ಕೊಡುವಂಥದ್ದನ್ನು ಕೂಡ ಪ್ರಕಟಣೆ ಮಾಡಿದ್ದಾರೆ. 40 ಸಾವಿರ 50 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ತಾವು ಹೇಳಿದ್ದೀರಿ. ಆದರೆ ಇದರಲ್ಲಿ ವ್ಯತ್ಯಾಸ ಏತಕ್ಕೆ ಮೊನ್ನೆದಿನ ನಡೆದಂಥ ಕೋಮು ಘರ್ಷಣೆಯಲ್ಲಿ ಸತ್ತಂಥ ವ್ಯಕ್ತಿಗೆ ಒಂದು ಲಕ್ಷ ರೂಪಾಯಿಯನ್ನು ಕೊಡುವುದಾದರೆ ಇದರಲ್ಲಿ ಏತಕ್ಕೆ ಈ ವ್ಯತ್ಯಾಸ. ಪ್ರಾಣದಲ್ಲಿ ವ್ಯತ್ಯಾಸವನ್ನು ತಾವು ಕಾಣಲಿಕ್ಕೆ ಸಾಧ್ಯ ಉಂಟೆ? ಅದರಲ್ಲೂ ಕೂಡ ಸತ್ತವರಿಗೆ ಒಂದು ಲಕ್ಷ ರೂಪಾಯಿ ಕೊಡುವಂಥಾದರೆ ಅದು ನ್ಯಾಯ ಕೂಡ ಹೌದು. ಆದ್ದರಿಂದ ಅದನ್ನು ಕೂಡ ತಾವು ಹೆಚ್ಚಿಸಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಜಾಸ್ತಿ ಮಳೆ ಬಂದು ನಿಂತು ಮತ್ತೆ ಮಳೆ ಬಂದಿರತಕ್ಕಂಥ ನಮ್ಮ ಜಿಲ್ಲೆಯಲ್ಲಿ ಆಗಿದೆ. ಇದಕ್ಕಾಗಿ ನಮ್ಮ ಜಿಲ್ಲೆಯಲ್ಲಿ ಸಣ್ಣ ಸಣ್ಣ ಹರಿವೆ ನೀರು ಹರಿದುಹೋಗಲು ತೋಡಿರುವಂಥದ್ದು ಇದೆ. ಅದಕ್ಕೆ ನಾವು ವೆಂಟೆರ್ ಡ್ಯಾಮ್ ಕಟ್ಟಿರುತ್ತೇವೆ. ಇದರಿಂದ ಗದ್ದೆಗಳಿಗೆ ನೀರನ್ನು ಒದಗಿಸುವಂಥ ಕಾರ್ಯಕ್ರಮ ನಮ್ಮ ಜಿಲ್ಲೆಯಲ್ಲಿ ಆಗುತ್ತಿದೆ. ಮಳೆ ಬಂದು ಆಸುಪಾಸು ದರದಲ್ಲಿ ಇದ್ದಂಥ ಎಲ್ಲಾ ಭತ್ತ ಸಂಪೂರ್ಣವಾಗಿ ಹಾಳಾಗಿದೆ. ಈ ಸಂದರ್ಭದಲ್ಲಿ ನಷ್ಟದ ಬಗ್ಗೆ ಸರ್ವೆ ಮಾಡಿ ಅದರ ಸಂಪೂರ್ಣ ನಷ್ಟವನ್ನು ಅಂದಾಜು ಮಾಡುವಂಥಾದ್ದು ತುಂಬ ಅಗತ್ಯವಿದೆ. ಪರಿಹಾರ ಕೊಡುವ ಬಗ್ಗೆ ತಾವು ಜಾಸ್ತಿ ಕೊಡುವಂಥ ಆಲೋಚನೆ ಮಾಡಬೇಕಾಗಿದೆ. ಮತ್ತು ನೆರೆಯ ಹಾವಳಿಯಿಂದ ನಮ್ಮ ಜಿಲ್ಲೆ ಮಾತ್ರವಲ್ಲ ರಾಜ್ಯದ ಹೆಚ್ಚಿನ ರಸ್ತೆಗಳು ಹಾಳಾಗಿವೆ. ನೆರೆಹಾವಳಿಯಿಂದ ಕೆಟ್ಟಂಥ ರಸ್ತೆಗಳ ರಿಪೇರಿ ಇವತ್ತಿನವರೆಗೂ ಆಗಿಲ್ಲ. ರಿಪೇರಿ ಆಗಿಲ್ಲದೆ ವಾಹನಗಳ ಸಂಚಾರಕ್ಕೂ ಕೂಡ ಬಹಳ ತೊಂದರೆಯಾಗಿದೆ. ಈ ದೃಷ್ಟಿಯಿಂದ ಎಲ್ಲಾ ರಸ್ತೆಗಳನ್ನು ಆದಷ್ಟು ಬೇಗ ರಿಪೇರಿ ಮಾಡುವಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಅದಕ್ಕೆ ಬೇಕಾದಂಥ ಹಣವನ್ನು ಕೂಡ ಸರ್ಕಾರದವರು ಒದಗಿಸಬೇಕಾದದ್ದು ಅಷ್ಟೇ ಅಗತ್ಯವಿದೆ ಎಂದು ಹೇಳುತ್ತೇನೆ. ಇವತ್ತು ನೆರೆಹಾವಳಿ ಬಂತು, ಬೆಳೆ ನಾಶವಾಯಿತು. ಪುನಃ ಬೆಳೆ ಬೆಳೆಸಬೇಕೆಂದರೆ ಬಹಳ ಕಷ್ಟ ಇದೆ. ಆರ್ಥಿಕ ಸಹಾಯ ಮಾಡುತ್ತೇವೆ, ಪಂಪ್ ಇದೆ, ನೀರು ಇದೆ ಎಂದರೂ ಕರೆಂಟ್ ಇಲ್ಲ. ನಮ್ಮಲ್ಲಿ ದಿನಕ್ಕೆ 3 ಗಂಟೆ ವಿದ್ಯುತ್ ಕಡಿತ ಮಾಡುತ್ತಿದ್ದಾರೆ. ಮೂರು ಗಂಟೆ ಮಾತ್ರವಲ್ಲ, ದಿನಕ್ಕೆ 25 ಸಲ ಕಟ್ ಆಗುತ್ತಿದೆ. ಒಬ್ಬ ರೈತ ಪಂಪ್ ಚಾಲು ಮಾಡಿ ಮನೆಗೆ ಮುಟ್ಟುವ ಹೊತ್ತಿಗೆ ಪಂಪ್ ನಿಂತು ಹೋಗಿರುತ್ತದೆ. ಈ ರೀತಿ ದಿನಕ್ಕೆ 25 ಸಲ ಕರೆಂಟ್ ಹೋಗುತ್ತದೆ. ಹೀಗಾಗಿ ನೀರು ಇದ್ದರೂ ಭತ್ತ, ಅಡಿಕೆ, ತೆಂಗಿಗೆ ನೀರು ಬಿಡಲಿಕ್ಕೆ ಸಾಧ್ಯವಿಲ್ಲ. ಅಲ್ಲಿನ ಟ್ರಾನ್ಸ್‌ಫಾರ್ಮರ್ ಸರಿಯಾಗಿಲ್ಲ. ಇದರಿಂದಾಗಿ ನಮ್ಮ ವಿಠ್ಠಲ ಕ್ಷೇತ್ರದ ಆಸುಪಾಸಿನ ರೈತರಿಗೆ ತುಂಬಾ ತೊಂದರೆಯಾಗಿದೆ. ಅಲ್ಲಿಗೆ ಫೀಡ್ ಮಾಡತಕ್ಕ ಪುತ್ತೂರಿನ ಟ್ರಾನ್ಸ್‌ಫಾರ್ಮರನ್ನು ಕೂಡ ಬದಲಾವಣೆ ಮಾಡಬೇಕಾಗಿದೆ. ಇದನ್ನು ಆದಷ್ಟು ಜಾಗ್ರತೆ ಸರಿ ಮಾಡಿ ವಿದ್ಯುತ್ ಕೊರತೆಯನ್ನು ನೀಗಿಸಬೇಕೆಂದು ತಮ್ಮನ್ನು ಒತ್ತಾಯಿಸುತ್ತಿದ್ದೇನೆ. ಇನ್‌ಶ್ಯೂರೆನ್ಸ್ ಬಗ್ಗೆ ಹೇಳುವುದಾದರೆ, ಇಡೀ ತಾಲ್ಲೂಕನ್ನು ಯೂನಿಟ್ ಆಗಿ ಮಾಡುವುದರ ಬದಲು ಕುಟುಂಬವನ್ನು ಯೂನಿಟ್ ಆಗಿ ಮಾಡಿ ಯಾರಿಗೆ ನಷ್ಟವಾಗಿದೆ ಅವರಿಗೆ ಪರಿಹಾರ ಕೊಡತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿದೆ. ಇದನ್ನು ಮಾಡಬೇಕೆಂದು ಹೇಳಿ, ಖಂಡಿತ ನೆರೆಹಾವಳಿಯಿಂದ ಯಾರಿಗೆ ತೊಂದರೆಯಾಗಿದೆ ಅದರ ಬಗ್ಗೆ ಸಂಪೂರ್ಣ ಮಾಹಿತಿ ಪಡೆದು ನೂರಕ್ಕೆ ನೂರು ಪರಿಹಾರ ಕೊಟ್ಟು ಜೀವನ ಮಟ್ಟ ಸುಧಾರಣೆ ಮಾಡುವುದು ಮತ್ತು ಮುಂದೆ ಜೀವನ ಮಾಡುವುದಕ್ಕೆ ತೊಂದರೆಯಾಗದಂತೆ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಪ್ರಾರ್ಥಿಸಿ ಇಷ್ಟು ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಖರ್ಚಾಗಬೇಕು, ಜನರಿಗೆ ಮುಟ್ಟಬೇಕೆಂದು ನಮ್ಮ ಪ್ರತಿನಿಧಿಗಳ ಇರಾದೆ. ಜನತೆಯ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾದುದು ನಮ್ಮ ಜವಾಬ್ದಾರಿ. ಆದ್ದರಿಂದ ಇಂಥದ್ದೆಲ್ಲಾ ನಮ್ಮ ಗಮನಕ್ಕೆ ಬರಬೇಕು. ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹಾಗೂ ಸರ್ಕಾರಕ್ಕೆ ಕೇಳುತ್ತೇನೆ. ಜಿಲ್ಲಾಧಿಕಾರಿಗಳಿಗೆ ನೀವು ಕಡ್ಡಾಯವಾಗಿ ಸೂಚನೆ ಕೊಡಬೇಕು. ಇದುವರೆವಿಗೂ ಏನು ಪರಿಹಾರ ಕೊಟ್ಟಿದ್ದಾರೆ, ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಬಾಬತ್ತಿಗೆ ಎಷ್ಟೆಷ್ಟು ಖರ್ಚಾಗಿದೆ ಅದು ನಿಜವಾಗಿಯೂ ಸಾರ್ಥಕವಾಗಿದೆಯೇ, ಜನರಿಗೆ ಮುಟ್ಟಿದೆಯೇ ಎನ್ನುವುದರ ಬಗ್ಗೆ ಆಗಾಗ ಮೀಟಿಂಗ್ ಕರೆಯಬೇಕು. ಫ್ಲಡ್‌ಕಮಿಟಿ ಮೀಟಿಂಗ್‌ನ್ನು ಹಿಂದೆ ಜಿಲ್ಲಾಧಿಕಾರಿಗಳು ಕರೆಯುತ್ತಿದ್ದರು. ಯಾವ ಯಾವ ಕೆಲಸಗಳನ್ನು ಅಗತ್ಯವಾಗಿ ತೆಗೆದುಕೊಳ್ಳಬೇಕು, ಯಾವ ಯಾವ ಕೆಲಸಗಳಿಗೆ ಆದ್ಯತೆ ಕೊಡಬೇಕು ಎನ್ನುವ ಬಗ್ಗೆ ಸಲಹೆ ಪಡೆದು ಕಾರ್ಯಕ್ರಮ ಹಾಕಿಕೊಳ್ಳುತ್ತಿದ್ದರು. ನಮ್ಮ ಜಿಲ್ಲೆಯಲ್ಲಿ ಈ ಕೆಲಸ ಆಗಬೇಕಾಗಿದೆ. ಮಾನ್ಯ ವಾಟಾಳ್‌ನಾಗರಾಜ್ ಅವರು ಹೇಳಿದ ಪ್ರಕಾರ ಬೇರೆ ಕಡೆಯೂ ಆಗಿಲ್ಲವೆನಿಸುತ್ತದೆ. ಇದನ್ನು ಮಾಡುವುದಕ್ಕೆ ಕೂಡಲೇ ಆದೇಶ ಕೊಡಬೇಕೆಂದು ಹೇಳುತ್ತೇನೆ. ಎಲ್ಲಾ ಜಿಲ್ಲಾಧಿಕಾರಿಗಳೂ ಇದನ್ನು ಮಾಡುವುದಕ್ಕೆ ಆದೇಶ ಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಮಳೆ ಅನಾಹುತದಿಂದ ಸತ್ತಂಥ ರೈತರಿಗೆ ಏನು ಪರಿಹಾರ ಕೊಡುತ್ತಿದ್ದೀರಿ ಅದು ಏನೇನೂ ಸಾಲದು. ಇದರ ಬಗ್ಗೆ ನಿಜವಾಗಿಯೂ ವಿಚಾರ ಮಾಡಬೇಕು. ಎಲ್ಲಾ ಮನುಷ್ಯರ ಜೀವವೂ ಒಂದೇ. ಯಾರೇನೂ ಸೂಪರ್ ಹ್ಯೂಮನ್‌ಗಳಲ್ಲ. ಯಾರೇ ಸತ್ತರೂ ಸರ್ಕಾರ ಒಂದೇ ದೃಷ್ಟಿಯಲ್ಲಿ ಒಂದೇ ತೂಕದಲ್ಲಿ ಪರಿಹಾರವನ್ನು ಕೊಡಬೇಕು. ರೈತ ಇವತ್ತು ಮಳೆಯಿಂದ ಆಗಲೀ ಯಾವುದೇ ರೀತಿಯಿಂದಾಗಲೀ ಬಡ ರೈತ ಸತ್ತಾಗ.ಒಂದೇ ರೀತಿ ಪರಿಹಾರ ಇರಬೇಕು. ಕೋಮುಗಲಭೆಯಲ್ಲಿ ಸತ್ತವನಿಗೆ ಲಕ್ಷ, ಏರೋಪ್ಲೇನ್ ಅಪಘಾತದಲ್ಲಿ ಸತ್ತವನಿಗೆ 1 ಲಕ್ಷ ಪರಿಹಾರ ಕೊಡುವ ಹಾಗೆ ಮಳೆ ಹಾನಿಯಿಂದ ಸತ್ತ ರೈತನಿಗೂ 1 ಲಕ್ಷ ಪರಿಹಾರ ಕೊಡಬೇಕು. ಇದನ್ನು ನಾನು ಒತ್ತಾಯಪೂರ್ವಕವಾಗಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಜೊತೆಗೆ ನಾನು ಬಹಳ ಮುಖ್ಯವಾಗಿ ಹೇಳುವುದು ಏನೆಂದರೆ ನಮ್ಮಲ್ಲಿ ರಸ್ತೆಗಳು, ಮೋರಿಗಳು, ಸೇತುವೆಗಳು ಬಹಳ ಹಾಳಾಗಿವೆ. ಮಾನ್ಯ ಹಾರ್‍ನಹಳ್ಳಿ ರಾಮಸ್ವಾಮಿಯವರು ನಮ್ಮ ಜಿಲ್ಲೆಗೆ ಬಂದಾಗ ಕೆಲವೊಂದು ಸ್ಥಳಗಳಿಗೆ ಭೇಟಿ ಕೊಟ್ಟು ಖುದ್ದು ಪರಿಶೀಲನೆ ಮಾಡಿದ್ದಾರೆ. ಜಾನುವಾರುಗಳೇ ಓಡಾಡುವುದಕ್ಕೆ ಆಗದ ರಸ್ತೆಗಳಲ್ಲಿ ಮನುಷ್ಯರು ಓಡಾಡುವುದಕ್ಕೆ ಹೇಗೆ ಸಾಧ್ಯ? ನಮ್ಮ ಭಾಗದಲ್ಲಿ ಮಳೆ ಹಾನಿಗೆ ಸಿಕ್ಕಿ ಹಾಳಾಗಿರತಕ್ಕ ನಮ್ಮ ಭಾಗದ ರಸ್ತೆಗಳಲ್ಲಿ ವಯಸ್ಸು ಆಗಿರುವವರು, ಮಂತ್ರಿಗಳು ಕಾರ್‌ನಲ್ಲಿ ಕುಳಿತು ಹೋಗಿ ನೋಡಿ ಬರುವಷ್ಟು ಹೊತ್ತಿಗೆ ಸೊಂಟಕ್ಕೆ ಏನಾದರೂ ಏಟು ಬಿತ್ತೆಂದರೆ ತಕ್ಷಣ ಈ ರಸ್ತೆಗಳು ರಿಪೇರಿ ಆಗುವ ಕೆಲಸ ಆಗಬೇಕೆನ್ನುವ ಮಾತನ್ನು ಹೇಳುತ್ತಾರೋ ಏನೋ ಎಂದು ನನಗನ್ನಿಸುತ್ತದೆ. ರಸ್ತೆಗಳ ಪರಿಸ್ಥಿತಿ ಆ ಮಟ್ಟದಲ್ಲಿದೆ. ಸಾಕಷ್ಟು ಹಣವನ್ನು ಜಿಲ್ಲಾಪರಿಷತ್‌ನವರಿಗೆ ಕೊಡಬೇಕು. ಇದರ ಜೊತೆಗೆ ಮುಖ್ಯವಾಗಿ ಮಲೆನಾಡು ಪ್ರದೇಶಗಳಿಗೆ ಮಲೆನಾಡಿನಲ್ಲಿ ಫ್ಲಡ್‌ಗೆ ಹಣವನ್ನು ಕೊಟ್ಟಿದ್ದೇ ಆದರೆ ಕಾಮಗಾರಿಗಳ ಕೆಲಸವನ್ನು ಅಗತ್ಯವಾಗಿ ಆದಷ್ಟು ಬೇಗ ಮಾಡಿ ಜನಗಳಿಗೆ ಅನುಕೂಲ ಮಾಡಿಕೊಡಲಿಕ್ಕೆ ಆಗುತ್ತದೆ. ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಅಧ್ಯಕ್ಷರಾಗಿ ಮಾನ್ಯ ಸಚಿವರಾದ ಹಾರ್‍ನಳ್ಳಿ ರಾಮಸ್ವಾಮಿಯವರೂ ಸಹ ಇಲ್ಲಿದ್ದಾರೆ. ತಕ್ಷಣ ಅವರು ವಿಚಾರ ಮಾಡಬೇಕಾಗುತ್ತದೆ. ಏಕೆಂದರೆ ಪರಿಹಾರ ಕೊಡಲಿಕ್ಕೆ ಸಾಕಷ್ಟು ಹಣ ಕೇಂದ್ರ ಸರ್ಕಾರದಿಂದ ಬಂದಿಲ್ಲವೆಂದು ನನಗನಿಸುತ್ತದೆ. ಹಣವನ್ನು ನೀವಾದರೂ ಕೊಟ್ಟು ರಸ್ತೆ ಸೇತುವೆ ಮೋರಿಗಳು ಕೊಚ್ಚಿಕೊಂಡು ಹೋಗಿವೆ ಅದನ್ನು ರಿಪೇರಿ ಮಾಡಿಸುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮಲ್ಲಿ ಅಂದರೆ ಮಲೆನಾಡು ಪ್ರದೇಶಗಳಿಂದ ಆಗುವ ಅನಾಹುತವೆಂದರೆ, ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳು ಮಳೆಗಾಳಿ ಜಾಸ್ತಿಯಾದಾಗ ವಿದ್ಯುತ್‌ಕಂಬಗಳು ಮುರಿದುಹೋಗುತ್ತವೆ, ಆಮೇಲೆ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟುಹೋಗುತ್ತವೆ. ತಕ್ಷಣ ರಿಪೇರಿ ಮಾಡಲಿಕ್ಕೆ ರೀಪ್ಲೇಸ್

ಮಾಡಲಿಕ್ಕೆ ಕೆಇಬಿಯವರು ಮೆಟಿರಿಯಲ್ಸ್ ಇಲ್ಲವೆಂದು ಹೇಳುತ್ತಾರೆ. ಏಕೆಂದರೆ ವಾರ್ಷಿಕವಾಗಿ ಏನು ಮೆಟಿರಿಯಲ್ಸ್ ಕೊಡುತ್ತಾರೆ ಅವು ಟ್ರಾನ್ಸ್‌ಫಾರ್ಮರ್‌ಗಳು ಏನು ಸುಟ್ಟು ಹೋಗುತ್ತವೆ ಅದಕ್ಕೆ ಸಾಕಾಗುವುದಿಲ್ಲ. ಹೀಗಿರಬೇಕಾದರೆ ಮಳೆಗಾಲದಲ್ಲಿ ಸಾಕಷ್ಟು ಕಂಬಗಳು ಬೀಳುವುದರಿಂದ ಮತ್ತು ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗುವುದರಿಂದ ಹೆಚ್ಚಿಗೆ ಮೆಟಿರಿಯಲ್ಸ್ ಅವರಿಗೆ ಕೊಡಬೇಕು. ಕೆಇಬಿ ಮೂಲಕ ಈ ಕೆಲಸ ಮಾಡಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಕಟ್ಟಡಗಳು ಇವೆ. ಶಾಲಾ ಕಟ್ಟಡಗಳು, ಆಸ್ಪತ್ರೆಯ ಕಟ್ಟಡಗಳು ಆ ಕಟ್ಟಡಗಳ ದುರಸ್ತಿಯಾಗಬೇಕಾಗುತ್ತದೆ. ತಕ್ಷಣ ಕಾರ್ಯಕ್ರಮ ಹಾಕಿಕೊಳ್ಳದಿದ್ದರೆ ಶಾಲಾಕಾಲೇಜುಗಳವರು ಮರದ ಕೆಳಗಡೆ ನೆರಳಿನಲ್ಲಿ ಪಾಠಪ್ರವಚನಗಳನ್ನು ಮಾಡಬೇಕಾದ ಸಂದರ್ಭ ಬರುತ್ತದೆ. ಕೂಡಲೇ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿ ಆ ಕೆಲಸವನ್ನು ತ್ವರಿತವಾಗಿ ಮಾಡಬೇಕೆಂದು ಹೇಳುತ್ತೇನೆ. ಬೆಳೆ ನಾಶವಾದರೆ, ಜಮೀನು ಮಳೆ ಬಂದು ಕೊಚ್ಚಿಕೊಂಡು ಹೋದರೆ ಜಮೀನಿನಲ್ಲಿ ಮರಳು ತುಂಬಿಕೊಂಡರೆ ಕೊಡುವ ಪರಿಹಾರದ ಹಣವನ್ನು ಹೆಚ್ಚಿಸಿದ್ದೀರಿ. ಅದನ್ನು ನೂರು ರೂಪಾಯಿಗೆ ಹೆಚ್ಚಿಸಿದ್ದೀರಿ. ಅದು ಏನೇನೂ ಸಾಲದು. ಕನಿಷ್ಟ 500 ರೂಪಾಯಿ ಒಂದು ಎಕರೆಗೆ ಕೊಟ್ಟರೆ ಒಳ್ಳೆಯದೆಂದು ನನಗನಿಸುತ್ತದೆ. ಅದರಿಂದ ಜನರಿಗೆ ಸಹಾಯ ಆದಹಾಗೆ ಆಗುತ್ತದೆ, ಆ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ನಮ್ಮಲ್ಲಿ ಒಂದು ತೊಡಕು ಇದೆ. ನಮ್ಮಲ್ಲಿ ಒಬ್ಬ ಬಡವನಿಗೆ ಒಂದೆರಡು ಎಕರೆ ಹಳ್ಳದ ಸಾಲಿನಲ್ಲಿ ಗದ್ದೆ ಇರುತ್ತದೆ. ಅಂತಹವರಿಗೆ ಒಂದೆರಡು ಎಕರೆ ಕಾಫಿತೋಟ ಇದ್ದರೆ ಅವನಿಗೆ ಪರಿಹಾರ ಕೊಡುವುದಕ್ಕೆ ಬರುವುದಿಲ್ಲವೆನ್ನುವ ಮಾತನ್ನು ಹೇಳುತ್ತಾರೆ. ಏಕೆಂದರೆ ಕಾಫಿತೋಟದ ಬೆಲೆ ಜಾಸ್ತಿಯಿರುವುದರಿಂದ ಅವನು ಸಣ್ಣ ಹಿಡುವಳಿದಾರ ಆಗುವುದಿಲ್ಲ ಅದಕ್ಕೆ ಪರಿಹಾರ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಇದು ನಿಜವಾಗಿಯೂ ಬಹಳ ಅನ್ಯಾಯ. ಒಬ್ಬ ಬಡ ರೈತನ ಗದ್ದೆಯಲ್ಲಿ ಮರಳು ತುಂಬಿಕೊಂಡಿದ್ದರೆ ಅವನಿಗೆ ಒಂದು ಎಕರೆ ಕಾಫಿತೋಟ ಇದೆಯೆಂದು ಹೇಳಿ ಪರಿಹಾರ ಕೊಡುವುದಿಲ್ಲ. ಅಂತಹವರು ಎಷ್ಟೋ ಸಾರಿ ಕಾಫಿತೋಟದ ಕಲ್ಟಿವೇಷನ್ ಮಾಡಿಯೇ ಇರುವುದಿಲ್ಲ. ಅವನಿಗೆ ಪರಿಹಾರ ಕೊಡದಿದ್ದರೆ ಅವನು ಆಗಿರುವ ಅನಾಹುತವನ್ನು ಹೇಗೆ ಸರಿಪಡಿಸಿಕೊಳ್ಳುತ್ತಾನೆ? ಇದನ್ನು ನೀವು ವಿಚಾರ ಮಾಡಬೇಕಾಗುತ್ತದೆ. ಆದ್ದರಿಂದ ಇದನ್ನು ರೂಲ್ಸ್‌ನಲ್ಲಿ ರಿಲ್ಯಾಕ್ಸ್ ಮಾಡಬೇಕಾಗುತ್ತದೆ. ಒಂದೆರಡು ಎಕರೆ ಗದ್ದೆ ಇದ್ದು ಅಂತಹವರು ಒಂದು ಎಕರೆ ಕಾಫಿತೋಟ ಇಟ್ಟುಕೊಂಡಿದ್ದರೆ ಅಂತಹವರಿಗೂ ಸಹ ಪರಿಹಾರ ಕೊಡುವುದಕ್ಕೆ ಸರ್ಕಾರ ಇರುವ ಕಾನೂನು ಬದಲಾವಣೆ ಮಾಡಿ ಸಹಾಯ ಮಾಡಬೇಕೆಂದು ಹೇಳಿ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಭಾರತದ ನಕಾಶೆಯಲ್ಲಿ ಕರ್ನಾಟಕವನ್ನು ತೋರಿಸಿಲ್ಲವೆಂದು ಹೇಳಿದರು. ಯಾವ ಪ್ರಕಾರ ವಾಟಾಳ್ ನಾಗರಾಜ್‌ರವರು ಹೇಳಿದರು ಅದೇ ಪ್ರಕಾರ ಭಾರತದ ನಕಾಶೆಯಲ್ಲಿ ಕರ್ನಾಟಕವನ್ನು ತೋರಿಸಿಲ್ಲ, ಕರ್ನಾಟಕದ ನಕಾಶೆಯಲ್ಲಿ ಬೆಳಗಾಂ ಜಿಲ್ಲೆಯನ್ನು ತೋರಿಸಿಲ್ಲ, ಬೆಳಗಾಂ ಜಿಲ್ಲೆಯ ನಕಾಶೆಯಲ್ಲಿ ಬೈಲಹೊಂಗಲ ಮತದಾರ ಕ್ಷೇತ್ರವನ್ನು ತೋರಿಸಿಲ್ಲ. ಈ ಮಾತನ್ನು ಬಹಳ ಖೇದದಿಂದ ಹೇಳಬಯಸುತ್ತೇನೆ. ಸರ್ಕಾರದವರು ಯಾವುದೇ ಒಂದು ಪರಿಹಾರ ಕೊಡಲಿಕ್ಕೆ ಅಧಿಕಾರಿಗಳ ಒಂದು ರಿಪೋರ್ಟ್ ಮೇಲೆ ಅವಲಂಭಿಸಿರುತ್ತಾರೆ. ಅಧಿಕಾರಿಗಳ ಒಂದು ರಿಪೋರ್ಟ್‌ನ ಆಧಾರದ ಮೇಲೆ ಸರ್ಕಾರದವರು ಒಂದು ರಿಪೋರ್ಟ್‌ನ್ನು ಕಳುಹಿಸಿಕೊಡುತ್ತಾರೆ. ತಮ್ಮ ರಿಪೋರ್ಟ್‌ನಲ್ಲಿ ಸವದತ್ತಿ ತಾಲ್ಲೂಕಿನಲ್ಲಿ 4 ಸಾವಿರ ಮನೆಗಳು ಮಾತ್ರ ಬಿದ್ದವು ಎಂದು ಹೇಳುತ್ತಾರೆ. ಆದರೆ ಬೈಲಹೊಂಗಲದಲ್ಲಿ ಸಾವಿರಾರು ಮನೆಗಳು ಬಿದ್ದರೂ ಈ ರಿಪೋರ್ಟಿನಲ್ಲಿ ತೋರಿಸಿಲ್ಲ. ಇದು ನನಗೆ ಬಹಳ ಖೇದ ಅನ್ನಿಸುತ್ತದೆ. ತಾವು ಬೈಲಹೊಂಗಲದ ತಹಶೀಲ್ದಾರ್ ಸಾಹೇಬರು ಅವರು ತಮ್ಮ ತಾಲ್ಲೂಕಿನೊಳಗೆ ಇಂತಹ ಎಫೆಕ್ಟ್

ಆದ ಕಾಲಕ್ಕೆ ಟೂರ್ ಮಾಡಿದ್ದಾರೆಯೇ ಎಂದು ತಾವು ನೋಡಬೇಕು. ಅವರ ಟೂರ್ ಪ್ರೋಗ್ರಾಮನ್ನು ತಾವು ತರಿಸಿರಿ. ತಿಂಗಳ ಪ್ರೋಗ್ರಾಮ್‌ನಲ್ಲಿ ಕೊನೆಯಪಕ್ಷ ಬೈಲಹೊಂಗಲ ತಾಲ್ಲೂಕಿನಲ್ಲಿ ಒಂದಾದರೂ ಪ್ರದೇಶವನ್ನು ಅವರು ವಿಸಿಟ್ ಮಾಡಿದ್ದಾರೆಯೆ? ಅಥವಾ ಯಾವುದಾದರೂ ಊರಲ್ಲಿ ಅವರು ತಂಗಿದ್ದಾರೆಯೇ, ಅಥವಾ ಒಂದು ಊರಿಗೆ ಹೋಗಿದ್ದಾರೆಯೇ ಎಂಬುದನ್ನು ರಿಪೋರ್ಟ್ ತರಿಸಿ ತಾವು ನೋಡಬೇಕು. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಅಧಿಕಾರಿಗಳು ಬರೀ ತಮ್ಮ ಕುರ್ಚಿಯಲ್ಲಿ ಕುಳಿತುಕೊಂಡು ಯಾವುದೇ ಕೆಲಸ ಮಾಡದೇ ಇರದ ಕಾರಣ ಇಂತಹ ರಿಪೋರ್ಟ್‌ಗಳು ಹೊರಬರುತ್ತವೆ. ನಾನೇ ಒಂದು ಪತ್ರ ಬರೆದಾಗ, ನಿಮ್ಮ ತಾಲ್ಲೂಕಿನಲ್ಲಿ ಕುರಿ ಸತ್ತಿಲ್ಲ ಎಂದು ಹೇಳಿದರು. ನಾನು ಹೇಳಿದೆ, ಬೈಲಹೊಂಗಲ ತಾಲ್ಲೂಕು ಪೈಕಿ ವಣ್ಣೂರು ಮಂಡಲದಲ್ಲಿ ಸಾವಿರಾರು ಕುರಿಗಳು ಸತ್ತಿವೆ, ಮನೆಗಳು ಬಿದ್ದಿವೆ, ರಸ್ತೆಗಳು ನಾದುರಸ್ತಿಯಾಗಿವೆ. ಹೀಗಾಗಿ ಕೆ.ಎಸ್.ಆರ್.ಟಿ.ಸಿ.ಯವರು ಬಸ್‌ಗಳನ್ನು ಬಂದ್ ಮಾಡಿದ್ದಾರೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿ ಅವರು ಬಸ್ಸುಗಳನ್ನು ಬಂದ್ ಮಾಡಬೇಡಿ ಎಂದು ಹೇಳುತ್ತಿದ್ದಾರೆ. ಆವಾಗ ಅವರು ಹೇಳುತ್ತಾರೆ ನಾನು ಆರ್.ಐ.ಗೆ ಪತ್ರ ಬರೆಯುತ್ತೇನೆ, ಇಲ್ಲಿ ಕುರಿಗಳು ಸತ್ತಿವೆ ಎಂದು ಎಂ.ಎಲ್.ಎ. ಯವರು ರಿಪೋರ್ಟ್ ಮಾಡಿದ್ದಾರೆ, ಇದು ನಿಜವೇ ತಿಳಿಸಿರಿ ಎಂದು. He is not concerned at all to go to that village and see what has happened. ಮುಂದೆ ನಾನು ಫೋನು ಹಚ್ಚಿ ಕೇಳಿದಾಗ ಹೇಳಿದರು ನಾನು ಆರ್.ಐ.ಗೆ ಪತ್ರ ಬರೆದಿದ್ದೇನೆ, ಅವರ ಕಡೆಯಿಂದ ಉತ್ತರ ಬಂದನಂತರ ಮುಂದೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು. ಮುಂದೆ ಏನು ಮಾಡಿದ್ದಾರೆ ಎಂದರೆ, ನಾಲ್ಕು ಕುರಿಗಳಿಗೆ ಐನೂರು ರೂಪಾಯಿಯಂತೆ ಕಾಂಪನ್‌ಸೇಶನ್ ಕೊಟ್ಟಿದ್ದೇವೆ ಎಂದು ಅವರು ಪತ್ರ ಬರೆಯುತ್ತಾರೆ. ಯಾವ ಪ್ರಕಾರವಾಗಿ ಮಕ್ಕಳಿಗೆ ಪೆಪ್ಪರ್‌ಮೆಂಟ್ ಕೊಡುತ್ತೇವೆ, ಆ ಪ್ರಕಾರವಾಗಿ ಪರಿಹಾರ ಕಾಮಗಾರಿಯಲ್ಲಿ ಅಪೋಜಿಶನ್ ಏರಿಯಾ ಇರುವ ಕಡೆ ಸರ್ಕಾರದವರು ಮಾಡಿದ್ದಾರೆ ಎಂದು ನಾನು ಹೇಳುತ್ತೇನೆ. ಇದನ್ನು ಮಾಡಬಾರದು. ರಾಜಕಾರಣ ಮಾಡುವಲ್ಲಿ ಮಾಡಬೇಕು. ಆದರೆ ಇಂತಹ ಕೆಲಸ ಮಾತ್ರ ಯಾವಾಗಲೂ ಮಾಡಬಾರದು. ಯಾವುದು ಎದುರುಪಕ್ಷದ ಪ್ರದೇಶ ಇದೆ, ಇಂತಹ ಪ್ರದೇಶದಲ್ಲಿ ಒಂದಾದ ಬೈಲಹೊಂಗಲ ತಾಲ್ಲೂಕಿನಲ್ಲಿ ಇಷ್ಟು ಮನೆಗಳು ಬಿದ್ದಿವೆ, ಯಾವುದಾದರೂ ಒಂದು ಮನೆಗೆ ಕಾಂಪನ್‌ಸೇಶನ್ ಕೊಟ್ಟಿದ್ದೇವೆ ಎಂದು ಅವರು ಹೇಳಲಿ. ಒಂದು ನಕಾಶೆಯನ್ನು ತೋರಿಸುತ್ತಾರೆ ಮತ್ತು ಅದರಲ್ಲಿ ನೋಡಿದರೆ ಎಷ್ಟು ಮಳೆಯಾಗಿದೆ ಎಂದು ತೋರಿಸುತ್ತಾರೆ. ಮಳೆಯಾದದ್ದು ಖರೆ. ಮಳೆಯಾದರೆ ಮನೆಗಳು ಬೀಳುವುದಿಲ್ಲವೇನು? ರಸ್ತೆಗಳು ಕೆಡುವುದಿಲ್ಲವೇನು? ಶಾಲೆಗಳು ಬೀಳುವುದಿಲ್ಲವೇನು? ನಾವು ಹೋಗಿ ಕೇಳಿದೆವು ಎಂದರೆ, ನಾವು ಡಿ.ಸಿ.ಯವರಿಗೆ ರಿಪೋರ್ಟ್ ಮಾಡಿದ್ದೇವೆ, ನೋಡಿತ್ತೇವೆ ಎಂದು ಹೇಳುತ್ತಾರೆ. ಒಬ್ಬ ತಹಸೀಲ್ದಾರ್ ಗ್ರೇಡ್‌ನವರು ಇಂತಹ ಹಳ್ಳಿಗಳಿಗೆ ಹೋಗಿ ವಿಸಿಟ್ ಮಾಡುವುದಕ್ಕೆ ತಯಾರಿಲ್ಲ. ಇದೇನು ನೀವು ಧಕ್ಷ, ಪ್ರಾಮಾಣಿಕ ಸರ್ಕಾರವನ್ನು ಕೊಡುವಂಥಾದ್ದು? ಮಾನ್ಯ ವೀರಪ್ಪ ಮೊಯಿಲಿಯವರು ಅಧಿಕಾರವನ್ನು ವಹಿಸಿಕೊಂಡ ದಿವಸ ಹೇಳಿದರು, ಈ ರಾಜ್ಯದಲ್ಲಿ ನಾವು ಪ್ರಾಮಾಣಿಕ, ದಕ್ಷ ಸರ್ಕಾರವನ್ನು ಕೊಡುತ್ತೇವೆ ಎಂದು. ಇದು ನಿಮ್ಮ ಧಕ್ಷ ಆಡಳಿತವೇನು? ಒಬ್ಬ ಅಸಿಸ್ಟೆಂಟ್ ಕಮಿಷನರ್, ಡೆಪ್ಯೂಟಿ ಕಮಿಷನರ್ ಅವರಿಗೆ ಟೈಮ್ ಇರುವುದಿಲ್ಲ, ನಾನು ಒಪ್ಪುತ್ತೇನೆ, ಅವರು ಹೋಗಲಿಕ್ಕೆ ಆಗುವುದಿಲ್ಲ. ಆದರೆ ಒಬ್ಬ ತಾಲ್ಲೂಕು ಅಧಿಕಾರಿ, ಜೀಪ್ ಇರತಕ್ಕಂಥ ಅಧಿಕಾರಿ ಸಹಿತ ಹೋಗಿ ನೋಡುವುದಕ್ಕೆ ಆಗುವುದಿಲ್ಲವೆಂದರೆ, ಇನ್ನು ಯಾರು ಹೋಗಬೇಕು? ನಾನು ಪತ್ರ ಬರೆದು ಎಷ್ಟು ಕುರಿಗಳು ಸತ್ತವು ಎಂದರೆ ಚರ್ಮ ತಂದುಕೊಡಲಿಲ್ಲ, ಆದ್ದರಿಂದ ಕಾಂಪನ್‌ಸೇಶನ್ ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಕುರಿ ಸತ್ತದ್ದು ಸಂಕಟ ಇರುವಾಗ, ಡಾಕ್ಟರ್ ಕಡೆಯಿಂದ ಪಂಚನಾಮೆ ಮಾಡಬೇಕೆನ್ನುತ್ತಾರೆ. ದನದ ಡಾಕ್ಟರನ್ನು ಹುಡುಕಿಕೊಂಡು ಬಂದು ಪೋಸ್ಟ್‌ಮಾರ್ಟಮ್ ಮಾಡಿಸಿ, ಚರ್ಮ ತಂದುಕೊಟ್ಟ ನಂತರ ಈ

ಐದುನೂರು ರೂಪಾಯಿ ಕಾಂಪನ್‌ಸೇಶನ್ ಅನ್ನು ತೆಗೆದುಕೊಳ್ಳಬೇಕು. ನಿಜವಾಗಿ ಕುರಿ ಕಳೆದುಕೊಂಡಿದ್ದರೆ ಅಂತಹವರಿಗೆ ಪರಿಹಾರಧನ ಕೊಡಿ. ಅದು ಬಿಟ್ಟು ಪೋಸ್ಟ್‌ಮಾರ್ಟಮ್ ಮಾಡಿಸಬೇಕು ಎಂದರೆ, ಹೇಗೆ? ಪೋಸ್ಟ್‌ಮಾರ್ಟಮ್ ನಂತರ ರಿಪೋರ್ಟ್ ಬರಬೇಕು. ಅದು ಬರಬೇಕಾದರೆ ಚರ್ಮ ಬರಬೇಕು. ಚರ್ಮ ಬಂದನಂತರ ತಹಸೀಲ್ದಾರ್ ಅವರಿಗೆ ಭೇಟಿಯಾಗಬೇಕು. ಇದೆಲ್ಲ ಆದನಂತರ ಕಾಂಪನ್‌ಸೇಶನ್ ಎಂದರೆ ಇದು ನಿಮ್ಮ ನೀತಿಯೇನು? ಇದು ಧಕ್ಷ ಆಡಳಿತವೇನು? ಇದು ನಿಮ್ಮ ಪ್ರಾಮಾಣಿಕತೆಯೇ ಎಂದು ನಾನು ಕೇಳುತ್ತೇನೆ. ಆದ ಕಾರಣ ಇವತ್ತು ಯಾರ ಅಧಿಕಾರಿಗಳು ತಪ್ಪು ಮಾಡಿದ್ದಾರೆ, ಯಾವ ಅಧಿಕಾರಿಗಳು ಯಾವ ಹಳ್ಳಿಗೆ ಹೋಗಿಲ್ಲ, ಅವರ ಮೇಲೆ ನಿರ್ಧಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಇವತ್ತಿನ ದಿವಸ ಕೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ನಮ್ಮ ಕಡೆ ಮುಖ್ಯ ಕ್ರಾಪ್ ಎಂದರೆ ಜೋಳ, ಹತ್ತಿ ಮತ್ತು ಸಜ್ಜೆ. ಇವುಗಳಿಗೆ ಎಷ್ಟು ಮಳೆ ಬೇಕೋ ಅಷ್ಟು ಆದರೆ ಅಡ್ಡಿಯಿಲ್ಲ.

ಈ ವರ್ಷ ಮುಂಗಾರಿ ಮಳೆಯಿಂದ ಬೆಳೆ ಸಂಪೂರ್ಣವಾಗಿ ಹಾಳಾಗಿ ಬಿಟ್ಟಿತು. ಜೋಳ ಪೂರ್ಣ ಹಾಳಾಯಿತು, ಹತ್ತಿ 8–10 ಕ್ವಿಂಟಾಲ್ ಬರತಕ್ಕಂಥಾದ್ದು 2–3 ಕ್ವಿಂಟಾಲ್ ಬಂತು. ಈ ವರ್ಷ ಮತ್ತೆ ಹಿಂಗಾರಿಗೆ ಬಿಳಿ ಜೋಳ ಇದ್ದುದು ಹಾಲು ಸೋರಿತು. ಇದಕ್ಕೆಲ್ಲಾ ಯಾರಿಗೆ ಯಾರು ಜವಾಬ್ದಾರರು. ಇದನ್ನು ಏನಾದರೂ ಸ್ವಲ್ಪ ವಿಚಾರ ಮಾಡಬೇಕು. ತಾವು ಬೈಲಹೊಂಗಲ ಕ್ಷೇತ್ರಕ್ಕೆ ಎಷ್ಟು ಪರಿಹಾರ ಕೊಟ್ಟಿದ್ದೀರಿ. ಇವತ್ತಿನದಿವಸ ಮುರಿಕುಂಬಿಯಿಂದ ಹಿಡಿದುಕೊಂಡು ದಾರಿಮನೆತನಕ ರಸ್ತೆ ಬಂದ ಆಗಿದೆ, ಕೆ.ಎಸ್.ಆರ್.ಟಿ.ಸಿ ಯವರಿಗೆ ತಿಳಿಸಿದ್ದಾರೆ, ಮೊನ್ನೆ ಪ್ರಶ್ನೆ ಹಾಕಿದಾಗ ಸಹಿತ ಮಾನ್ಯ ರೆವಿನ್ಯೂ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ರಸ್ತೆ ಹಾಳಾದದ್ದು ನಿಜ, ಬ್ರಿಡ್ಜ್ ಬಿದ್ದಿರುವುದು ನಿಜ, ಕೆ.ಎಸ್.ಆರ್.ಟಿ.ಸಿ ಬಸ್ ಸ್ಟಾಪ್ ಮಾಡಿರುವುದು ನಿಜ. ಆದರೆ, ಕ್ರಮ ಏನು ಕೈಗೊಂಡಿದ್ದೀರಿ. ಕ್ರಮ ಏಕೆ ಕೈಗೊಳ್ಳಲಿಲ್ಲ. ಸರ್ಕಾರದವರ ನಜರಿಗೆ ಬಂದಿದೆ, ಮತ್ತೆ ನಾವು ಇನ್ನು ಯಾರ ನಜರಿಗೆ ತರಬೇಕು. ತಹಶೀಲ್ದಾರ್‌ರವರು ಕೇಳುವುದಕ್ಕೆ ತಯಾರಿಲ್ಲ, ಡೆಪ್ಯೂಟಿ ಕಮೀಷನರ್‌ರವರು ಕೇಳುವುದಕ್ಕೆ ತಯಾರಿಲ್ಲ. ಇವತ್ತು ಸರ್ಕಾರದಲ್ಲಿ ಪ್ರಶ್ನೆ ಹಾಕಿ, ಕೇಳಿದರೂ ಸಹಿತ, ನೀವು ಕೇಳುವುದಕ್ಕೆ ತಯಾರಿಲ್ಲವೆಂದರೆ, ಈ ಸರ್ಕಾರ ಇದೆಯೋ ಇಲ್ಲವೋ ಎಂದು ಕೇಳುವ ಪ್ರಸಂಗ ಬರುತ್ತದೆ. ನೀವೇ ಹೇಳಿ, ಕೊನೆಯಪಕ್ಷ ಬಸ್ಸುಗಳು ಬರುವುದಕ್ಕಾದರೂ ರೋಡ್ ಮಾಡಿಕೊಡಿ ಎಂದು ಕೇಳಿದೆವು. ನೀವು ಪೂರ್ಣ ರಸ್ತೆ ಮಾಡುವುದಕ್ಕೆ ಸಾಧ್ಯವಿಲ್ಲ. ಅದನ್ನು ನಾನು ತಿಳಿದುಕೊಂಡಿದ್ದೇನೆ. ಒಮ್ಮಿಂದೊಮ್ಮೆಗೆ ಜಲ್ಲಿ ಹಾಕಿ, ಠಾರ್ ರೋಡ್ ಮಾಡಿ ಎಂದು ಹೇಳುವುದಕ್ಕೆ ತಯಾರಿಲ್ಲ. ಕೊನೇಪಕ್ಷ ಮೋಟಾರು ಹೋಗುವಂಥ ರಸ್ತೆ ಮಾಡುವ ಸ್ಥಿತಿಯಲ್ಲಿ ಈ ಸರ್ಕಾರ ಇಲ್ಲದೇಹೋದರೆ, ಈ ಸರ್ಕಾರ ಇದೆಯೋ ಇಲ್ಲವೋ ಎಂದು ನಿಮ್ಮನ್ನು ಕೇಳುತ್ತಿದ್ದೇನೆ. ಇವತ್ತಿನದಿವಸ ಯಾವ ಪ್ರಕಾರವಾಗಿ ಕೆಲಸ ನಡೆದಿದೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ಏನು ಕೆಲಸ ನಡೆದಿದೆ, ಯಾರು ರೆವಿನ್ಯೂ ಸೆಕ್ರಟರಿ ಇದ್ದಾರೋ ಯಾರು ರೆವಿನ್ಯೂ ಸೆಕ್ರಟರಿ–2 ಇದಾರೋ ಅವರು ವಿಸಿಟ್ ಮಾಡಿದ್ದಾರೆಯೇ. ಯಾವ ಜಿಲ್ಲೆಗೆ ವಿಸಿಟ್ ಮಾಡಿದ್ದೀರಿ, ಎಲ್ಲಿ ಹೋಗಿ ನೋಡಿದ್ದಾರೆ? ಯಾರಾದರೂ ಒಬ್ಬರು ಆಫೀಸರ್ಸ್ ನೋಡಿದ್ದಾರೆಯೇ? ಇವತ್ತಿನದಿವಸ ಅದು ಬೇಡ. ಬೆಳಗಾಂ ಜಿಲ್ಲೆ ಇವತ್ತು ತಂದೆ ತಾಯಿ ಇಲ್ಲದಂಥ ಜಿಲ್ಲೆ. ಅನಾಥಶಿಶು ತರಹ, ಆ ಪ್ರಕಾರವಾಗಿ ನಾವು ಅನಾಥ ಶಿಶುವಿದ್ದಹಾಗೆ ಇದ್ದೇವೆ, ಬೆಳಗಾಂ ಜಿಲ್ಲೆಯವರು. ಏಕೆಂದರೆ, ನಮಗೆ ಒಬ್ಬರು ಮಂತ್ರಿ ಇಲ್ಲ, ಯಾರೂ ಇಲ್ಲವೇ ಇಲ್ಲ. ಬೆಳಗಾಂ ಜಿಲ್ಲೆಯಲ್ಲಿ ಎಲ್ಲರೂ ಕೈಎತ್ತುವಂಥ ಜನ ಆಗಿ, ಇವತ್ತಿನದಿವಸ ಅವರನ್ನು ಯಾರೂ ಕೇಳುವುದಕ್ಕೆ ತಯಾರಿಲ್ಲ. ಎಲ್ಲಾ ಮುಗಿದ ನಂತರ ನಮ್ಮ ಕಡೆ. ಕೊನೇಪಕ್ಷ ಹಾಲಿ ಇರತಕ್ಕ ಜಿಲ್ಲಾಮಂತ್ರಿ ಮಾಡುವಂಥ ಅನುಕಂಪ ಮುಖ್ಯಮಂತ್ರಿಯವರಿಗೆ ಇಲ್ಲ. 14 ಮಂದಿ ಸಾಕು ಎಂದು ಹೇಳುತ್ತಾರೆ. ಇರುವ 14 ಮಂದಿ ಎಂ.ಎಲ್.ಎ.ಗಳು ನಾವು ರಾಜ್ಯ ನಡೆಸುತ್ತೇವೆ, ನಾವು ಯಾವ ಕೆಲಸವನ್ನು ಬೇಕಾದರೂ ನೋಡುತ್ತೇವೆ, ರಾಜ್ಯದ ಆಡಳಿತ ಸುಸೂತ್ರವಾಗಿ ನಡೆಯುತ್ತಿದೆ

ಎಂದು ಹೇಳುತ್ತಾರೆ. ಇದೇ ನಿಮ್ಮ ಆಡಳಿತ ಸುಸೂತ್ರವಾಗಿ ನಡೆಯುವಂಥಾದ್ದು. 14 ಮಂದಿ ಮಂತ್ರಿಗಳಿದ್ದಾಗ, ಬೆಳಗಾಂ ಜಿಲ್ಲೆಯವರನ್ನು ಕೊನೇಪಕ್ಷ ಮಂತ್ರಿ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಏಕೆ ಮಾಡುವುದಕ್ಕೆ ಸಾಧ್ಯವಿಲ್ಲ. ಇವತ್ತಿನವರೆಗೂ ಒಂದು ರಿವ್ಯೂ ಮಾಡುವುದಕ್ಕೆ ತಯಾರಿಲ್ಲ. ಇವತ್ತಿನವರೆಗೆ ಬೆಳಗಾಂ ಜಿಲ್ಲೆಯಲ್ಲಿ ಯಾವುದೇ ಒಂದು ರಿವ್ಯೂ ಆಗಿಲ್ಲ. ಯಾವುದೇ ಒಂದು ಕೆಲಸ ಸಹಿತ ನಡೆದಿಲ್ಲ. ನಿಮ್ಮ ಸರ್ಕಾರದ ರೊಕ್ಕ ಬೇಡ, ನಿಮ್ಮ ನೆರೆಹಾವಳಿ ತಂಡ ಬಂದು ನೋಡುವುದು ಬೇಡ. ಬೆಳಗಾಂಜಿಲ್ಲೆಯಲ್ಲಿ ಯಾವುದೇ ಹಣ ಖರ್ಚಾಗಿಲ್ಲ. ನಿಮಗೆ ಒಂದೇ ಒಂದು ಉದಾಹರಣೆ ಹೇಳಬೇಕೆಂದರೆ, ಕಾಡಾ ಇದೆ. ಆ ಕಾಡಾದಲ್ಲಿ ಡಿಸೆಂಬರ್‌ವರೆಗೆ ಒಂದು ದುಡ್ಡೂ ಖರ್ಚು ಮಾಡಿಲ್ಲ. ಲೆಕ್ಕ ಹಾಕಿ, ಕಾಡಾದಲ್ಲಿ ರೋಡ್ಸ್ ತೆಗೆದುಕೊಳ್ಳುವುದಕ್ಕೆ ಬರುತ್ತದೆ, ಶಾಲೆ ರಿಪೇರಿ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಯಾವುದೇ ಒಂದು ಬೇಕಾದ ಕೆಲಸ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಇವತ್ತಿನ ದಿವಸ ಡಿಸೆಂಬರ್ 31ರ ತನಕ ಒಂದು ರೊಕ್ಕ ಖರ್ಚು ಮಾಡಿಲ್ಲ. ಏಕೆ ಮಾಡಿಲ್ಲ? ಅದೇ ರೊಕ್ಕವನ್ನು ಕೊನೇಪಕ್ಷ, ನೆರೆಹಾವಳಿ ಇದ್ದಲ್ಲಿ ಖರ್ಚು ಮಾಡಬಹುದಿತ್ತು. ನಾನು ಒಪ್ಪುತ್ತೇನೆ, ಸರ್ಕಾರದಲ್ಲಿ ರೊಕ್ಕ ಇರುವುದಿಲ್ಲ, ಇಲ್ಲದೆ ಸರ್ಕಾರವನ್ನು ನಡೆಸುವುದು ಕಠಿಣವಾಗುತ್ತದೆ. ನಾವು ಒಂದೇಸಾರಿ 8–10 ಲಕ್ಷ ರೂಪಾಯಿ ಕೇಳಿದರೆ, ಯಾರಿಗೂ ಕೊಡಲಿಕ್ಕೆ ಆಗುವುದಿಲ್ಲ. ನನ್ನ ಕ್ಷೇತ್ರಕ್ಕೆ ಬೇಕು 2–3 ಕೋಟಿ ರೂಪಾಯಿ. ಇದೇ ರೀತಿ ಪ್ರತಿಯೊಂದು ಕ್ಷೇತ್ರಕ್ಕೂ ಕೊಟ್ಟರೆ ಸರ್ಕಾರದಲ್ಲಿ ರೊಕ್ಕ ಎಲ್ಲಿ ತರಬೇಕು. ಇದನ್ನು ನಾನು ತಿಳಿದುಕೊಂಡಿದ್ದೇನೆ. ಇದೇ ಸಮಯದಲ್ಲಿ ಯಾವ ವರ್ಕ್ ಮಂಜೂರಾಗಿವೆ, ಯಾವ ವರ್ಕ್ ತೆಗೆದುಕೊಳ್ಳುವುದಕ್ಕಾಗುತ್ತದೆ, ಅದನ್ನಾದರೂ ತೆಗೆದುಕೊಳ್ಳುವಂಥ ಕರ್ತವ್ಯ ಮಾಡಬೇಕು. ಅದನ್ನು ಯಾವಾಗ ಮಾಡುವುದಕ್ಕೆ ಬರುತ್ತದೆ. ಜಿಲ್ಲಾದಲ್ಲಿ ಯಾರಾದರೂ ಒಬ್ಬರು ಕೇಳುವಂಥ ಅಧಿಕಾರಿಗಳು ಇದ್ದರೆ, ಕೇಳುವವರು ಒಬ್ಬರು ಇದ್ದರೆ, ಏನಾದರೂ ಹೇಳಬಹುದು. ಇವತ್ತಿನದಿವಸ ನಿಮಗೆ ಹೇಳಬಹುದು. ಇರಿಗೇಷನ್ ಡಿಪಾರ್ಟ್‌ಮೆಂಟ್ ಇದೆ, ಮಲಪ್ರಭ ಇರಿಗೇಷನ್ ಚೀಫ್ ಇಂಜಿನಿಯರ್ ಇದ್ದಾರೆ, ಆ ಆಫೀಸಿನಲ್ಲಿ ಒಂದೂ ಕೆಲಸ ನಡೆದಿಲ್ಲ. ಇದನ್ನು ನಾವು ಯಾರಿಗೆ ಹೇಳೋಣ. ಒಂದು ರೋಡ್ ಮಾಡುವುದಕ್ಕೆ ತಯಾರಿಲ್ಲ. ಒಂದು ಶಾಲೆ ರಿಪೇರಿ ಮಾಡುವುದಿಲ್ಲ. ಶ್ರೀಮತಿ ಮೋಟಮ್ಮನವರು ಹೇಳಿದರು. ಮಳೆಗಾಲದಲ್ಲಿ ಶಾಲೆಗಳು ಬಿದ್ದಿವೆ, ಹುಡುಗರು ಹೊರಗೆ ಕುಳಿತುಕೊಳ್ಳುತ್ತಾರೆ. ಇವರಿಗೆ ನೀವೇನಾದರೂ ಮಾಡಿ ಎಂದಕೂಡಲೇ, ಅವರು ಹೇಳುತ್ತಾರೆ ಜಿಲ್ಲಾಪರಿಷತ್ತಿನವರು ನಿಮ್ಮ ತಾಲ್ಲೂಕಿಗೆ 50 ಸಾವಿರ ರೂಪಾಯಿ ಕೊಟ್ಟಿದ್ದಾರೆ. ಆ 50 ಸಾವಿರ ರೂಪಾಯಿಗಳಲ್ಲಿ ನೀವೇನಾದರೂ ಮಾಡಿಕೊಳ್ಳಿ ಎಂದು. ನಮ್ಮಲ್ಲಿ 780 ಹಳ್ಳಿಗಳಿವೆ, ಒಂದು ತಾಲ್ಲೂಕಿನಲ್ಲಿ. ಈ 780 ಹಳ್ಳಿಗಳಿಗೆ, 50 ಸಾವಿರ ರೂಪಾಯಿಗಳಲ್ಲಿ ನಾವೇನು ಮಾಡಬೇಕು? ಕೊನೆಯಪಕ್ಷ ಒಂದು ಶಾಲೆ ರಿಪೇರಿಗಾದರೂ ಕೊಡುವುದಕ್ಕೆ ಒಂದು ರಸ್ತೆ ರಿಪೇರಿಗೆ ಕೊಡುವುದಕ್ಕೆ ಕುಡಿಯುವ ನೀರಿನ ಪಂಪ್‌ಸೆಟ್ಸ್, ಟ್ರಾನ್ಸ್‌ಫಾರಂ ಎಲ್ಲಾ ಸುಟ್ಟು ಹೋಗಿವೆ. ಈ ಪರಿಸ್ಥಿತಿ ಇರುವಾಗ ನೀವೇನು ಮಾಡುವುದಕ್ಕೆ ಹೋಗುತ್ತಿದ್ದೀರಿ. ಇಂಥಾದ್ದರಲ್ಲಿ ಬ್ಯಾಂಕಿನವರು ಸಾಲ ವಸೂಲಿ ಮಾಡುವುದಕ್ಕೆ ಬರುತ್ತಾರೆ. ಎಲ್ಲಿ ಎಫೆಕ್ಟೆಡ್ ಏರಿಯಾ ಇದೆ, ಕೊನೆಯಪಕ್ಷ ಅಲ್ಲಿ ಸಾಲದ ಬಡ್ಡಿಯನ್ನಾದರೂ ವಜಾ ಮಾಡಬೇಕು. ಬಡ್ಡಿ ಸೂಟ್ ಬಿಡುವುದಕ್ಕೆ ಆಗದೇ ಇದ್ದರೂ, ಬಡ್ಡಿಯಲ್ಲಿ ರಿಯಾಯಿತಿ ಕೊಟ್ಟು, ಅದನ್ನು ಕನ್‌ವರ್ಷನ್ ಆದರೂ ಮಾಡಿ. ಆ ಲೋನನ್ನು ಕನ್‌ವರ್ಷನ್ ಮಾಡಿ. ನೀವು ಸೂಟ್ ಬಿಟ್ಟರೆ ಒಳ್ಳೆಯದು, ಸೂಟ್ ಬಿಡುವುದಕ್ಕೆ ಆಗಲಿಲ್ಲವೆಂದರೆ, ಈ ವರ್ಷ ಬಡ್ಡಿ ವಸೂಲ್ಮಾಡುವುದಕ್ಕೂ ಆಗುವುದಿಲ್ಲ. ಯಾವುದಕ್ಕೂ ಇಲ್ಲಿ ಯಾರೂ ಹೇಳುವವರೂ ಇಲ್ಲ, ಕೇಳುವವರೂ ಇಲ್ಲ. ಏನು ಕೇಳಿದರೂ, ಇವತ್ತಿನದಿವಸ ಈ ಕರ್ನಾಟಕ ರಾಜ್ಯ ಏನಾದರೂ ನಡೆದಿದ್ದೇ ಆದರೆ ಹಳೇ ಮೈಸೂರಿನವರದೇ ಹೊರತಾಗಿ, ಬಾಂಬೆ ಕರ್ನಾಟಕ ಅಥವಾ ಬೇರೆ ಯಾರೂ ಕೇಳುವುದಿಲ್ಲ. ಇಲ್ಲಿ ಹೋದ ವರ್ಷ ರೇಷ್ಮೆ ಬೆಳೆಗೆ ರೋಗ ಬಂತು. ಶಾಸಕರು ಮಂತ್ರಿಗಳು ಕೂಡಿ ಮಿಲಾತಿಯಾಗಿ ಅವತ್ತಿನ ದಿವಸ ಇಲ್ಲಿ ಆನ್ಸರ್

ಒಂದೊಂದಕ್ಕೂ ಪರಿಹಾರ ಕೊಟ್ಟಿದ್ದಾರೆ. ಇಷ್ಟು ಪರಿಣಾಮಕಾರಿಯಾಗಿ ಪರಿಹಾರವನ್ನು ಕೊಡತಕ್ಕಂಥ ಕಾರ್ಯಕ್ರಮ ಆಗಿದೆ ಎನ್ನತಕ್ಕಂಥಾದ್ದನ್ನು ಮಾನ್ಯ ಅಧ್ಯಕ್ಷರೇ ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನನ್ನ ತಾಲ್ಲೂಕಿನಲ್ಲಿ ಪ್ರಾಣಹಾನಿ ಆಗಿರುವ ರಿಪೋರ್ಟ್ 11 ಎಂದು ಹೇಳಿದ್ದಾರೆ. ಮನುಷ್ಯರು ಸತ್ತಿದ್ದುದು ಪ್ರಾಣಿಗಳು ಅಲ್ಲ. ಅಲ್ಲಿ ರಿಪೋರ್ಟ್ ಆಗಿದ್ದು 14. ಆ 14ರಲ್ಲಿ ಒಂದು ಪ್ರವಾಹದಿಂದ ಸತ್ತಿದ್ದು ಅಲ್ಲ. ಇನ್ನು 2ನ್ನು ರಿಪೋರ್ಟ್ ಮಾಡಿಲ್ಲ. ಇಲ್ಲಿ 11 ಜನ ಸತ್ತಿದ್ದು ಎಂದು ರಿಪೋರ್ಟ್ ಕೊಟ್ಟಿದ್ದಾರೆ. ಆದರೆ ಇನ್ನು 3 ಹೇಗೆ ರಿಜೆಕ್ಟ್ ಮಾಡಿದ್ದಾರೆಂದರೆ ಒಬ್ಬ ಮುದುಕಿ ರಾಣಿಬೆನ್ನೂರುನಲ್ಲಿ ಮನೆ ಬಿದ್ದು ಮನೆ ಗೋಡೆ ಅವರ ಮೇಲೆ ಬಿದ್ದು ಸತ್ತಿದ್ದಾರೆ. ಅವರು ಮೋಚಿ ಕೆಲಸಮಾಡತಕ್ಕಂಥವರು. ಅವರು ಚಪ್ಪಲಿ ಹೋಲಿದು ಊಟ ಮಾಡತಕ್ಕಂಥ ಜನರು. ಅವರನ್ನು ಜಿಲ್ಲಾಧಿಕಾರಿಗಳು ರಿಜೆಕ್ಟ್ ಮಾಡಿದ್ದಾರೆ. ಕಾರಣವೇನೆಂದರೆ ಆಕೆ ಮಗ ಮಹಾರಾಷ್ಟ್ರದಲ್ಲಿ ಕಾನ್ಸ್‌ಟೇಬಲ್ ಆಗಿದ್ದಾನಂತೆ. ಅವನ ವಾರ್ಷಿಕ ಉತ್ಪನ್ನ 11 ಸಾವಿರಕ್ಕೆ ಮೀರಿದೆಯಂತೆ ಅದಕ್ಕೆ ರಿಜೆಕ್ಟ್ ಮಾಡಿದ್ದಾರೆ. ಆಕೆ ಮಗ ಆಕೆಯನ್ನು ಜೋಪಾನ ಮಾಡದಿದ್ದದ್ದಕ್ಕೆ ಆಕೆ ತನ್ನ ಮಗಳ ಮನೆಯಲ್ಲಿ ಇದ್ದದು, ಮಗಳು ಚಪ್ಪಲಿ ಹೋಲಿದು ಜೀವನ ಮಾಡುತ್ತಿದ್ದರು. ಅಂತಹವರ ಮನೆ ಬಿದ್ದರೆ ಅವರಿಗೆ ಉತ್ಪನ್ನ ಜಾಸ್ತಿ ಇದೆ ಎಂದು ರಿಜೆಕ್ಟ್ ಮಾಡಿದ್ದಾರೆ. ಇದು ರಿಜೆಕ್ಟ್ ಆಗಬಾರದಾಗಿತ್ತು. ಅವರಿಗೆ ಹಣ ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ಇನ್ನೊಂದು ಹಿರೆಬಿದರೆ ಎನ್ನತಕ್ಕಂಥ ಗ್ರಾಮ ಇದೆ. ಅಲ್ಲಿ ಸತ್ತಂಥ ಮನುಷ್ಯನನ್ನು ದಫನ ಮಾಡಲಿಕ್ಕೆ ಸಾಧ್ಯವಾಗಲಿಲ್ಲ?

4.50 ಪಿ.ಎಂ

ಒಮ್ಮಿಂದೊಮ್ಮೆಲೆ ಇಡೀ ಊರಿನಲ್ಲಿ ಈ ತುಂಗಭದ್ರಾ ನೆರೆಹಾವಳಿ ಬಂತು. ಆ ಹಣ ಕೊಚ್ಚಿಕೊಂಡು ಹೋಯಿತು. ಕೊಚ್ಚಿಕೊಂಡು ಹೋಯಿತೆಂದು ಇಡೀ ಜನ ಹೇಳುತ್ತಿದ್ದಾರೆ, ಗ್ರಾಮದ ಜನ ಹೇಳುತ್ತಿದ್ದಾರೆ, ಆ ಮಂಡಲ ಅಧ್ಯಕ್ಷರು ಹೇಳುತ್ತಿದ್ದಾರೆ, ಮಂಡಲ ಸದಸ್ಯರು ಎಲ್ಲರೂ ಹೇಳುತ್ತಿದ್ದಾರೆ. ಆದರೂ ಸಹಿತಾ ಹಣ ಸಿಕ್ಕಿಲ್ಲ, ನಾವು ನೋಡಿಲ್ಲವೆಂದು ಅದು ಒಂದನ್ನು ರಿಜೆಕ್ಟ್ ಮಾಡಿದ್ದಾರೆ. ಈ ಎರಡೂ ನಿಜವಾಗಿಯೂ ಅವರಿಗೆ ಪರಿಹಾರ ಸಿಗುವುದು ಅತಿ ಅವಶ್ಯಕ ಎನ್ನತಕ್ಕಂಥಾದ್ದನ್ನು ತಮ್ಮ ಮೂಲಕ ಹೇಳಿಲಿಕ್ಕೆ ಇಚ್ಚೆಪಡುತ್ತೇನೆ. ಇದರ ಜೊತೆಗೆ ಪ್ರಾಣಹಾನಿಯಾದವರಿಗೆ 8 ಸಾವಿರದಿಂದ 40 ಸಾವಿರ ಮಾಡಿದ್ದಾರೆ. ನೆರೆಹಾವಳಿಯಿಂದ, ಸೃಷ್ಟಿಯ ವಿಕೋಪದಿಂದ ಸತ್ತಂಥ ಜನರಿಗೆ 40 ಸಾವಿರ ಕೊಡುತ್ತಿದ್ದೀರಿ. ಇವತ್ತು ಕೋಮುಗಲಭೆಗಳಾದರೆ ಕೋಮು ಗಲಭೆಗಳಲ್ಲಿ ಸತ್ತಂಥವರಿಗೆ ಲಕ್ಷಾಂತರ ರೂಪಾಯಿಗಳನ್ನು ಪರಿಹಾರ ರೂಪವಾಗಿ ಕೊಡುತ್ತಿದ್ದೀರಿ. ಅದಕ್ಕೋಸ್ಕರ ನಾನು ತಮ್ಮ ಮುಖೇನ ಸರ್ಕಾರಕ್ಕೆ ಒತ್ತಾಯ ಪೂರ್ವಕವಾಗಿ ಹೇಳುವುದೇನೆಂದರೆ, ಈ ಸೃಷ್ಟಿಯ ವಿಕೋಪಕ್ಕೆ ಒಳಗಾಗಿ ಸತ್ತಂಥ ಕುಟುಂಬದ ಸದಸ್ಯರಿಗೂ ಸಹಿತಾ ಒಂದು ಲಕ್ಷ ರೂಪಾಯಿ ಕೊಟ್ಟರೆ ತಪ್ಪೇನೂ ಇಲ್ಲ ಎನ್ನತಕ್ಕಂಥಾದ್ದನ್ನು ತಮ್ಮ ಮುಖಾಂತರ ಹೇಳುತ್ತಾ ಆಮೇಲೆ ಅವರ ಆದಾಯ 11 ಸಾವಿರಕ್ಕಿಂಥ ಕಡಿಮೆ ಇರಬೇಕು ಎನ್ನತಕ್ಕಂಥ ಈ ಕಂಡೀಷನ್‌ಅನ್ನು ಒತ್ತಾಯ ಮಾಡಬಾರದು, ಇದನ್ನು ರಿಲ್ಯಾಕ್ಸ್ ಮಾಡಬೇಕು ಎನ್ನತಕ್ಕಂಥಾದ್ದನ್ನು ತಮ್ಮ ಮುಖೇನ ಹೇಳಲಿಕ್ಕೆ ಇಚ್ಚೆಪಡುತ್ತೇನೆ. ಇದರ ಜೊತೆಗೆ ಮನೆಗಳು ಬಿದ್ದಿವೆ. ನಾವು ರಾಣಿಬೆನ್ನೂರು ತಾಲ್ಲೂಕಿನಲ್ಲಿ ಸುಮಾರು 10 ಸಾವಿರ ಮನೆಗಳು ಬಿದ್ದಿವೆ. ಸುಮಾರು 3–4 ಸಾವಿರ ಮನೆಗಳು ಸಂಪೂರ್ಣವಾಗಿ ನಾಶವಾಗಿವೆ. ಸುಮಾರು 6–7 ಸಾವಿರ ಮನೆಗಳು ಪಾರ್ಷಿಯಲ್ ಆಗಿ ಕೊಲಾಪ್ಸ್ ಆಗಿದೆ. ಇಷ್ಟು ವಿಪರ್ಯಾಸ ಇಲ್ಲಿ ಕಂಡು ಬರುತ್ತಿದೆ. ಅಧಿಕಾರಿಗಳು ರಿಪೋರ್ಟ್‌ನ್ನು ತುರ್ತಾಗಿ ಮಾಡಿ ಅಂಕಿಯನ್ನು ಸರ್ಕಾರಕ್ಕೆ ಏನು ಕೊಟ್ಟಿದ್ದಾರೆ ಆ ಅಂಕಿಗಿಂತ ಪರಿಹಾರ ಮೇಲೆ ಹೋಗಬಾರದು ಎನ್ನುತ್ತಾರೆ. ಪರಿಹಾರ ಕೊಡುವಾಗ ಹೆಚ್ಚು ಮನೆಗಳು ಬಿದ್ದಿರುವುದರಿಂದ ಅಧಿಕಾರಿಗಳು ಕೊಟ್ಟಿರತಕ್ಕಂಥ ಅಂಕಿ ಸಂಖ್ಯೆಗಳನ್ನು ತಪ್ಪಿದ್ದರೆ ತಿದ್ದಿಕೊಂಡು ಎಲ್ಲರಿಗೂ ಪರಿಹಾರ ಕೊಡಬೇಕೆಂದು ತಮ್ಮ ಮುಖೇನ ಸರ್ಕಾರದಲ್ಲಿ ಮನವಿ

ಮಾಡಿಕೊಳ್ಳುತ್ತೇನೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಸಂಪೂರ್ಣ ಮನೆ ಬಿದ್ದದಕ್ಕೆ ಹಣ ಕೊಟ್ಟಿದ್ದಾರೆ. ಪಾರ್ಷಿಯಲ್ ಆಗಿ ಬಿದ್ದಂಥ ಮನೆಗಳವರಿಗೆ ಪರಿಹಾರ ಕೊಡಲಿಕ್ಕೆ ನಮ್ಮಲ್ಲಿ ಹಣ ಇಲ್ಲ. ಇದರ ಬಗ್ಗೆ ಜಿಲ್ಲಾಧಿಕಾರಿಗಳ ಹತ್ತಿರ ಮಾತನಾಡಿದಾಗ ಹಣ ಇಲ್ಲ ಎಂದು ಹೇಳುತ್ತಿದ್ದಾರೆ. ಸೆಕ್ರೆಟರಿಯಟ್ ಅಧಿಕಾರಿಗಳಲ್ಲಿ ಕೇಳಿದಾಗ ನಾವು ಹಣ ಕಳುಹಿಸಿದ್ದೇವೆಂದು ಹೇಳುತ್ತಾರೆ. ಯಾವುದು ಖರೇವು? ಯಾವುದು ಸತ್ಯಕ್ಕೆ ದೂರವಾದುದು ನನಗಂತೂ ತಿಳಿಯುತ್ತಿಲ್ಲ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಅವರು ಮೊದಲು ಏನೊಂದು ಅಂಕಿ ಸಂಖ್ಯೆಗಳನ್ನು ಕಳುಹಿಸಿದ್ದರು ಅದಕ್ಕಿಂಥ ಹೆಚ್ಚು ಹಣವನ್ನು ಸರ್ಕಾರದಿಂದ ಕೊಡುವುದಿಲ್ಲ ಎನ್ನತಕ್ಕಂಥದ್ದನ್ನು ಕಡ್ಡಾಯವಾಗಿ ಇಲ್ಲಿ ಹೇಳುತ್ತಿದ್ದಾರೆ ಎನ್ನತಕ್ಕಂಥಾದ್ದು ಅವರು ಹೇಳುತ್ತಿದ್ದಾರೆ. ನಾನು ಹೇಳುತ್ತೇನೆ, ಅಧ್ಯಕ್ಷಿಣಿಯವರೆ, ಇವರು ಏನು ಅಧಿಕಾರಿಗಳನ್ನು ಸರ್ವೇ ಮಾಡಲಿಕ್ಕೆ ಕಳುಹಿಸಿದ್ದರು ಅವರು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಅದು ಅವಸರವಸರವಾಗಿ ಕೊಟ್ಟಂಥ ಒಂದು ಮಾಹಿತಿ. ಅದಕ್ಕೆ ಕಡ್ಡಾಯ ಮಾಡಬಾರದು. ನಿಜವಾಗಿಯೂ ಸರ್ವೇ ಮಾಡಿ, ಎಷ್ಟು ಜನರಿಗೆ ನಷ್ಟವಾಗಿದೆ ಅವರೆಲ್ಲರಿಗೂ ಹಣವನ್ನು ಕೊಡತಕ್ಕಂಥ ವ್ಯವಸ್ಥೆಯಾಗಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಒಂದು ರೀತಿಯಲ್ಲಿ ಪಾರ್ಷಿಯಲ್ ಆಗಿ ಬಿದ್ದಂಥ ಮನೆಗಳಿಗೆ ಪರಿಹಾರ ಕೊಡಲಿಕ್ಕೆ ಇನ್ನೂ 18 ಲಕ್ಷ ರೂಪಾಯಿಗಳು ಬೇಕು. ಈಗಾಗಲೇ ಸರ್ಕಾರದಿಂದ ತಹಸೀಲ್ದಾರ್ ಚೆಕ್ ಕೊಟ್ಟುಬಿಟ್ಟಿದ್ದಾರೆ. ಅನೇಕ ಜನರ ಚೆಕ್‌ಗಳು ಬ್ಯಾಂಕ್‌ಗಳಿಗೆ ಹೋದರೆ ಬೌನ್ಸ್ ಆಗಲಿಕ್ಕೆ ಹತ್ತಿವೆ. ಅದು ನಮಗೂ ಅವಮರ್ಯಾದೆ, ಮತ್ತು ನಮ್ಮ ಸರ್ಕಾರಕ್ಕೂ ಅವಮರ್ಯಾದೆ ಆಗುತ್ತಿದೆ ಎನ್ನತಕ್ಕಂಥ ಮಾತನ್ನು ತಮ್ಮ ಮುಖೇನ ಸರ್ಕಾರಕ್ಕೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಧಕ್ಷತೆಯಿಂದ ಅಧಿಕಾರಿಗಳು ಕೆಲಸ ಮಾಡಬೇಕು. ಎಲ್ಲಾ ಚೆಕ್ ಕೊಡಬಾರದಾಗಿತ್ತು. ಕೊಟ್ಟ ಮೇಲೆ ಅವು ಸಂಪೂರ್ಣವಾಗಿ ಆನರ್ ಆಗತಕ್ಕಂಥಾದ್ದನ್ನು ನೋಡಬೇಕು ಎನ್ನತಕ್ಕಂಥಾದ್ದನ್ನು ತಮ್ಮ ಮುಖೇನ ಸರ್ಕಾರಕ್ಕೆ ನಾನು ವಿನಂತಿಪೂರ್ವಕವಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ ಅಧ್ಯಕ್ಷಿಣಿಯವರೆ, ಪ್ರಾಣಹಾನಿಗಳನ್ನು ನೋಡಿಬಿಟ್ಟರೆ ನನ್ನ ತಾಲ್ಲೂಕಿನಲ್ಲಿ ಯಾವುದೇ ಮನುಷ್ಯನ ಹೃದಯ ಕರಗಲೇಬೇಕು. ಅಧಿಕಾರಿಗಳು ಬಂದು ನೋಡಿದ್ದಾರೆ, ಕುರಿಗಳು ಸುಮಾರು 8 ಸಾವಿರಕ್ಕೂ ಮೇಲ್ಪಟ್ಟು ಒಂದೇ ಸಮನೆ ಸತ್ತಿವೆ. ರಾಶಿ ರಾಶಿಯಾಗಿ ಅವುಗಳನ್ನು ಒಡ್ಡಿ ಅನೇಕ ಅಧಿಕಾರಿಗಳಿಗೆ ನಾವು ತೋರಿಸಿದ್ದೇವೆ. ಜಿಲ್ಲಾಧಿಕಾರಿಗಳಿಗೆ ತೋರಿಸಿದ್ದೇವೆ. ಅನಿಮಲ್ ಅಸ್ಬೆಂಡರಿ ಡಿಪಾರ್ಟ್‌ಮೆಂಟಿಗೆ ತೋರಿಸಿದ್ದೇವೆ. ಅನೇಕ ಕುರಿಗಳು ತೇಲಿ ಹೋಗಿವೆ. ನಮ್ಮ ಮುಖ್ಯಮಂತ್ರಿಗಳು ಬಂದರು, ನಮ್ಮ ಕಂದಾಯ ಮಂತ್ರಿಗಳು ಬಂದರು, ನಮ್ಮ ಜಿಲ್ಲೆ ಉಸ್ತುವಾರಿ ಮಂತ್ರಿಗಳು ಬಂದರು, ಊರಿನಲ್ಲಿ ಹಿರಿಯ ಗ್ರಾಮಸ್ಥರು, ಮಂಡಲ ಸದಸ್ಯರು, ಪ್ರಧಾನರು ಇರುತ್ತಾರೆ. ಅದು ಅಭಿಪ್ರಾಯದ ಮೂಲಕ ನಿಜವಾದ ಪರಿಸ್ಥಿತಿಯನ್ನು ಕಂಡುಹಿಡಿದು ಎಲ್ಲರಿಗೂ ಪರಿಹಾರವನ್ನು ಕೊಡಬೇಕೆಂದು ಮಂತ್ರಿಗಳು ಆದೇಶಕೊಟ್ಟು ಬಂದರೂ ಸಹಿತಾ ಇನ್ನೂವರೆಗೆ ಅದೇ ಕಡಿಮೆ ಅಂಕಿ ಸಂಖ್ಯೆಗಳನ್ನು ಅಧಿಕಾರಿಗಳು ತೋರಿಸಿ 5,247 ದನಕರುಗಳು ಸತ್ತಿವೆಯೆಂದು ಹೇಳುತ್ತಾರೆ. 8000ಕ್ಕಿಂತಲೂ ಮೇಲ್ಪಟ್ಟು ಕುರಿಗಳು ಸತ್ತಿವೆ, ನಿಮ್ಮ ಅಧಿಕಾರಿಗಳು ತಪ್ಪು ವರದಿಯನ್ನು ಸರಕಾರಕ್ಕೆ ಕೊಟ್ಟಿದ್ದಾರೆ ಎಂಬುದನ್ನು ನಾನು ಹೇಳಬೇಕಾಗುತ್ತದೆ. ಇದರ ಜೊತೆಗೆ ಮನುಷ್ಯರು ಸತ್ತರೆ ಪರಿಹಾರವನ್ನು ಕೊಡುತ್ತೀರಿ, ಕುರಿಗಳು ಸತ್ತರೆ ಕೊಡುತ್ತೀರಿ, ಆಡುಗಳು ಸತ್ತರೆ ಕೊಡುತ್ತೀರಿ, ಆದರೆ ಅನೇಕ ಸಣ್ಣ ಸಣ್ಣ ಬಡಜನರು 200–500 ಕೋಳಿಗಳನ್ನು ಇಟ್ಟುಕೊಂಡು ಫಾರ್ಮ ಮಾಡಿಕೊಂಡು ತಮ್ಮ ಉಪಜೀವನವನ್ನು ಅದರಿಂದ ಮಾಡಿಕೊಂಡು ಇದ್ದಾರೆ, ಅಂಥವರು ನೆರೆಹಾವಳಿಯಿಂದ ಸಂಪೂರ್ಣವಾಗಿ ನೀರಲ್ಲಿ ತಮ್ಮ ಕೋಳಿ ಫಾರ್ಮ ಮುಳುಗಿ ಹೋದ ನಷ್ಟವನ್ನು ಅನುಭವಿಸಿದ್ದಾರೆ. ಅಂಥವರಿಗೆ ಪರಿಹಾರ ಕೊಡಲು ಪ್ರಾವಿಷನ್ ಇಲ್ಲ ಎಂದು ಜಿಲ್ಲಾಧಿಕಾರಿಗಳು ಹೇಳುತ್ತಾರೆ. ಅವರು ನಾಲ್ಕು ಕಾಲಿನ ಪ್ರಾಣಿಗಳಿಗೆ ಮಾತ್ರ ಪರಿಹಾರ ಕೊಡಲು ಅವಕಾಶ ಇದೆ

ಕಲಘಟಗಿ, ಮೊದಲೇ ಮಲೆನಾಡು, ಮನೆ ಕೆರಿಹಂಚಿನವಿರುತ್ತವೆ, ನಮ್ಮ ಕಂದಾಯ ಮತ್ತು ಲಾ ಮಿನಿಸ್ಟರ್‌ಗಳದಂತೆ ಆರ್‌ಸಿಸಿ ಬಿಲ್ಡಿಂಗ್ ಇರುವುದಿಲ್ಲ, ಮಲೆನಾಡಿನಲ್ಲಿ ಮಳೆ ಜಾಸ್ತಿ ಆಗಿ ಸಂಪೂರ್ಣ ಅವೆಲ್ಲಾ ಬಿದ್ದುಹೋಗಿವೆ. ಮುಖ್ಯವಾಗಿ ಬೆಳೆಯುವ ಭತ್ತ ಅಂತೂ ಸಂಪೂರ್ಣವಾಗಿ ಕೈಗೆ ಬಂದದ್ದು ಬಾಯಿಗೆ ಬರಲಿಲ್ಲ ಎನ್ನುವಂತಾಗಿದೆ. ಇನ್ನೂ ಅನೇಕ ಮನೆಗಳು ಕುಸಿದು ಬಿದ್ದಿವೆ. ಈಗಾಗಲೇ ಸರ್ಕಾರ ಒಂದು ಮನೆ ಕಟ್ಟಡಕ್ಕೆ 500 ರೂ ಎಂದು ಕೊಡುತ್ತಾ ಇದ್ದಾರೆ, ಆದರೆ 500 ರೂ ರಿಪೇರಿಗೆ ಯಾವುದಕ್ಕೂ ಸಾಲುತ್ತಿಲ್ಲ, ಇವರು ಹೇಳುತ್ತಿದ್ದಾರೆ ನಾವು 5 ಸಾವಿರ ಕೊಡುತ್ತೇವೆ ಮೂರು ಸಾವಿರ ಮೆಟರಿಯಲ್ಸ್‌ಗೆ ಕೊಡುತ್ತೇವೆ ಎಂದು. ಅದು ಯಾವುದಕ್ಕೂ ಆಗುವುದಿಲ್ಲ, ಈಗಾಗಲೇ ಕೆಲವುಕಡೆ ಗೋಲಿಬಾರಿನಲ್ಲಿ ಗುಂಡು ಹೋದರೆ 1 ಲಕ್ಷ 2 ಲಕ್ಷ ಕೊಟ್ಟಿದ್ದಾರೆ, ಅದನ್ನು ನೋಡಿದರೆ ಈ ರೈತರು ಏನು ಕರ್ಮ ಮಾಡಿದ್ದಾರೋ ಎಂದು ನಮಗನಿಸುತ್ತಾ ಇದೆ. ಹಿಂದೆ 87ರಲ್ಲಿ ನಮ್ಮ ಸರ್ಕಾರ ಕೂಡ ಅನೇಕ ಈ ಬರಗಾಲ ಪರಿಸ್ಥಿತಿಯಲ್ಲಿ ಸಾಕಷ್ಟು ಈ ಹಳ್ಳಿಗಾಡು ಪ್ರದೇಶದಲ್ಲಿ ರಸ್ತೆ ರಿಪೇರಿ ಮಾಡಿರಬಹುದು, ಕುಡಿಯುವ ನೀರಿನ ಯೋಜನೆ ಬಗ್ಗೆ ಸಾಕಷ್ಟು ಒಳ್ಳೆಯ ಯೋಜನೆಗಳನ್ನು ಮಾಡಿದರು. ತಮ್ಮ ಮುಂದೆ ನಾನು ಹೇಳುತ್ತೇನೆ, ಈ ಅಧಿಕಾರಿಗಳು ಕೂಡ ಬರಲಿಲ್ಲ. ನಮ್ಮ ಕಂದಾಯ ಕಮೀಷನರ್ ಬೆಂಗಳೂರಿನಲ್ಲಿ ಕುಳಿತುಕೊಂಡು ಒಂದು ಟೆಲಿಗ್ರಾಂನ್ನು ಕೊಟ್ಟರು. 5 ಗಂಟೆಗೆ ಮೀಟಿಂಗ್‌ಗೆ ಬನ್ನಿ ಎಂದು. ಅಟ್‌ಲೀಸ್ಟ್ ಅವರಲ್ಲಿ ಶಾಸಕರನ್ನು ಕರೆದು ಅಥವಾ ಅಲ್ಲಿ ಅಧಿಕಾರಿಗಳನ್ನು ಕರೆದು ಯಾವ ಯಾವ ತಾಲ್ಲೂಕಿನಲ್ಲಿ ಏನಾಗಿದೆ ಎಂದು ಹೇಳಬೇಕಾಗಿತ್ತು. ಇದಕ್ಕೆ ಮಾನ್ಯ ಸಚಿವರೂ ಬರಲಿಲ್ಲ, ಅಧಿಕಾರಿಗಳೂ ಬರಲಿಲ್ಲ. ಇಂಥ ಒಂದು ಪರಿಸ್ಥಿತಿಯಲ್ಲಿ ರೈತರಿಗೆ ಬಹಳ ಅನ್ಯಾಯವಾಗಿದೆ. ಅನ್ಯಾಯಕ್ಕೆ ಕೊಡತಕ್ಕಂಥ ಪರಿಹಾರ ಬಹಳ ಕಡಿಮೆ ಇದೆ. ಇಂಥ ಸಂದರ್ಭದಲ್ಲಿ ರೈತರು ತೆಗೆದುಕೊಂಡ ಸಾಲವನ್ನು ಮರುಪಾವತಿ ಮಾಡಬೇಕು ಎಂದರೆ ಬಹಳ ಕಷ್ಟವಾಗುತ್ತದೆ. ಬಡ್ಡಿಯನ್ನು ಬಿಟ್ಟು ರೈತರಿಗೆ ರೀಫೈನಾನ್ಸ್ ಮಾಡಬೇಕು ಎಂದು ಹೇಳಿ ನಾನು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ. ರೈತರಲ್ಲಿ ಸಣ್ಣವರು, ದೊಡ್ಡವರು ಎಂದು ಹೇಳಿ ಆರ್ಥಿಕ ಮಿತಿಯನ್ನು ಹಾಕಿದ್ದಾರೆ. ಇದನ್ನೆಲ್ಲಾ ತೆಗೆಯಬೇಕು. ನಮ್ಮ ಜಿಲ್ಲೆಗೆ ಬರ ಪರಿಹಾರವನ್ನು ಸರ್ಕಾರದವರು ಕೊಟ್ಟಿಲ್ಲ. ಜಿಲ್ಲಾಧಿಕಾರಿಗಳಿಗೆ ಕೇಳಿದರೆ ನಾನು ರಿಪೋರ್ಟನ್ನು ಕೊಟ್ಟಿದ್ದೇನೆ ಸರ್ಕಾರದವರು ಕೊಟ್ಟಿಲ್ಲ ಎಂದು ಹೇಳುತ್ತಿದ್ದಾರೆ. ನಿಮಗೆ ಹೇಳಬೇಕೆಂದರೆ ಹುಬ್ಬಳ್ಳಿ ತಾಲ್ಲೂಕಿನಲ್ಲಿ ಹತ್ತಿ ಮೆಣಸಿನಕಾಯಿ, ಜೋಳ ಸಂಪೂರ್ಣವಾಗಿ ಪೀಕು ಬಂದಿದ್ದು ನಾಶವಾಗಿದೆ. ಈ ಬೆಳೆಗಳಿಗೆ ಒಂದು ಎಕರೆಗೆ ಕನಿಷ್ಠ ಒಂದು ಸಾವಿರ ರೂಪಾಯಿಯ ಗೊಬ್ಬರವನ್ನು ಹಾಕುತ್ತಿದ್ದಾರೆ. ಒಂದೂವರೆ ಸಾವಿರ, ಎರಡು ಸಾವಿರ ರೂಪಾಯಿ ಒಂದು ಎಕರೆಗೆ ಖರ್ಚು ಮಾಡಿದಂಥ ರೈತರು ಯಾವ ಪೀಕನ್ನು ವಾಪಸ್ ತೆಗೆದುಕೊಳ್ಳದಂಥ ಪರಿಸ್ಥಿತಿಯಲ್ಲಿದ್ದಾರೆ. ಇಂಥ ಸಂದರ್ಭದಲ್ಲಿ ಕೇಂದ್ರಸರ್ಕಾರದಿಂದ ಹೆಚ್ಚಿನ ಸಹಾಯವನ್ನು ತೆಗೆದುಕೊಂಡು ಪರಿಹಾರ ಕಾಮಗಾರಿಗಳನ್ನು ತೆಗೆದುಕೊಂಡು ಸರ್ಕಾರದವರು ಎಲ್ಲೆಲ್ಲಿ ಹಾನಿಯಾಗಿದೆ ಅಲ್ಲಿ ಈ ಕಾರ್ಯಕ್ರಮಗಳು ಜಾರಿ ಮಾಡಬೇಕು ಎಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ. ಈಗಾಗಲೇ ನಮ್ಮ ಕೆಲವು ಸ್ನೇಹಿತರು ಹೇಳಿದಹಾಗೆ ಎಲೆಕ್ಟ್ರಿಸಿಟಿಯಿಂದ ಬಹಳ ತೊಂದರೆಯಾಗಿದೆ. ಈ ವಿದ್ಯುಚ್ಛಕ್ತಿ ಇಲ್ಲದೆ ಕುಡಿಯುವ ನೀರಿಗೂ ಕೂಡ ಬಹಳ ತೊಂದರೆಯಾಗಿದೆ. ಒಂದು ಹೆಚ್ಚಿನ ಗಿರಣಿ ಚಾಲೂ ಮಾಡಬೇಕೆಂದರೂ ಕೂಡ ಬಹಳ ತೊಂದರೆಯಾಗಿದೆ. ಇಂಥ ಸಂದರ್ಭದಲ್ಲಿ ಕೆ.ಇ.ಬಿ.ಯವರಿಗೆ ಹೇಳಿ ಸಾಧ್ಯವಾದಷ್ಟು ಈ ಹಾನಿಯಾಗಿರತಕ್ಕಂಥ ಪ್ರದೇಶದಲ್ಲಿ ತೀವ್ರಗತಿಯಲ್ಲಿ ಈ ವಿದ್ಯುಚ್ಛಕ್ತಿ ಮೆಟೇರಿಯಲ್ಸ್‌ನ್ನು ಕೊಡಬೇಕು ಎಂದು ಹೇಳಿ ತಮ್ಮ ಮುಖಾಂತರ ನಾನು ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಅನೇಕ ಜಾನುವಾರುಗಳು ಮಳೆ ಪ್ರವಾಹದಿಂದ ತೇಲಿ ಹೋಗಿವೆ. ಆಮೇಲೆ ಇವರು ಹೇಳುತ್ತಿದ್ದಾರೆ, ಡಾಕ್ಟರ್‌ಸರ್ಟಿಫಿಕೇಟ್ ಬೇಕು, ಇನ್‌ಶೂರೆನ್ಸ್ ಬೇಕು ಎಂದು ಹೇಳುತ್ತಾರೆ. ಕೆಲವು ರೈತರು ಈ ಇನ್‌ಶೂರೆನ್ಸ್ ಮಾಡಿಸಿರುವುದಿಲ್ಲ ಬ್ಯಾಂಕ್ ಲೋನ್

ತೆಗೆದುಕೊಂಡವರು ಮಾತ್ರ ಇನ್‌ಶೂರೆನ್ಸ್ ಮಾಡಿಸಿರುತ್ತಾರೆ. ಅವುಗಳನ್ನು ನೋಡಿ ಕನಿಷ್ಠ ಅದರ ಒಂದು ಬೆಲೆಯ ಅರ್ಧವನ್ನಾದರೂ ಜಾನುವಾರುಗಳಿಗೆ ಕೊಡಬೇಕು ಎಂದು ತಮ್ಮ ಮುಖಾಂತರ ನಾನು ಒತ್ತಾಯ ಮಾಡುತ್ತಿದ್ದೇನೆ. ಈ ರಾಜ್ಯಕ್ಕೆ ಪ್ರಧಾನಮಂತ್ರಿಗಳು ಬಂದರು, ಹೆಲಿಕಾಪ್ಟರ್‌ನಲ್ಲಿ ಆಕಾಶದ ಮೇಲೆ ಅಡ್ಡಾಡಿದರು. ಈ ಹಿಂದೆ ಧಾರವಾಡದಲ್ಲಿ ಅತಿವೃಷ್ಟಿಯಾದಾಗ ಪ್ರಧಾನಮಂತ್ರಿ ದಿವಂಗತ ರಾಜೀವ್‌ಗಾಂಧಿಯವರು ಸ್ವತಃ ಬಂದರು. ನಾನು ಇದ್ದ ವಸ್ತುಸ್ಥಿತಿಯನ್ನು ಹೇಳುತ್ತೇನೆ. ಈಗಿನ ಪ್ರಧಾನಮಂತ್ರಿಗಳು ನಮ್ಮ ರಾಜ್ಯದೊಳಗೆ ಇಳಿಯಲೇ ಇಲ್ಲ. ಮೇಲುಗಡೆಯೇ ನೋಡಿ ಹೋದರು. ಕಡೆಗೆ ನಮ್ಮ ಕಂದಾಯ ಸಚಿವರು ಬಂದು ಈ ಅತಿವೃಷ್ಟಿ, ಅನಾವೃಷ್ಟಿಯಾದಂಥ ಪ್ರದೇಶಕ್ಕೆ ಬರುತ್ತಾರೆ ಎಂದರೆ ಇವರೂ ಕೂಡ ಬರಲಿಲ್ಲ. ಅಧಿಕಾರಿಗಳು ಕೂಡ ಈ ರೀತಿ ಮಾಡಿದರೆ ಇದು ಒಳ್ಳೆಯದಲ್ಲ ಎಂದು ನಾನು ಭಾವಿಸಿದ್ದೇನೆ. ತೀವ್ರಗತಿಯಲ್ಲಿ ಇವರು ಕೊಡತಕ್ಕಂಥ ಪರಿಹಾರವನ್ನು ಕೊಡಬೇಕು. ಇದೇ ರೀತಿ ಹಳ್ಳಿಯಲ್ಲಿ ಕೆಲವು ಕೆರೆಗಳು ಇವೆ. ಇವು ಮಂಡಲ ಪಂಚಾಯಿತಿಗೂ ಬರುವುದಿಲ್ಲ ಎಂದು ಹೇಳುತ್ತಿದ್ದಾರೆ. ಆಮೇಲೆ ಜಿಲ್ಲಾ ಪರಿಷತ್ತಿನಲ್ಲಿ ಕೇಳಿದರೆ ನಮಗೂ ಕೊಡುವುದಕ್ಕೆ ಅದರಲ್ಲಿ ಫಂಡ್ಸ್ ಇಲ್ಲ ಎಂದು ಹೇಳುತ್ತಾರೆ. ಇವುಗಳಿಗೆ ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಕುಡಿಯುವ ನೀರಿನ ಕೆರೆಗಳು ಎನ್ನುತ್ತಾರೆ. ಆ ಕೆರೆಗಳು ಒಡೆದವು ಎಂದರೆ ಆ ಹಳ್ಳಿಗೆ ಬಹಳ ಹಾನಿಯಾಗುತ್ತದೆ. ತೀವ್ರಗತಿಯಲ್ಲಿ ಆ ಕೆರೆ ರಿಪೇರಿ ಮಾಡಬೇಕು. ಇದಲ್ಲದೆ, ಶಾಲೆ, ದೇವಸ್ಥಾನ ಅನೇಕ ಕಡೆ ಮಳೆ ಪ್ರವಾಹದಿಂದ ಬಿದ್ದು ಬಹಳ ಹಾನಿಯಾಗಿದೆ. ಅದಕ್ಕೂ ಕೂಡ ಪರಿಹಾರವನ್ನು ಕೊಡಬೇಕು ಎಂದು ಒತ್ತಾಯ ಮಾಡುತ್ತೇನೆ. ಈ ಪರಿಹಾರದಲ್ಲಿ ಕೆಲವು ಕಡೆ ಈ ತಲಾಟಿಯವರು ತಲಾಟಿ ಮಾಡಿದರೆ ಗಲಾಟೆ ಎಂದು ಹೇಳುತ್ತಾರೆ. ತಲಾಟಿಯವರು ಕೂಡ ಕೆಲವು ಕಡೆ 50-60 ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ ಎಂದು ಅನೇಕ ತಕರಾರುಗಳು ಕೂಡ ಇವೆ. ಅಂಥವು ಆಗಿದ್ದರೆ ಅದರ ಮೇಲೆ ಕ್ರಮ ತೆಗೆದುಕೊಂಡು ರೈತರಿಗೆ ಕೊಡತಕ್ಕಂಥ ಒಂದು ಪರಿಹಾರವನ್ನು ತೀವ್ರ ಗತಿಯಲ್ಲಿ ಕೊಡಬೇಕು ಎಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ. ಈಗಾಗಲೇ ನಮ್ಮ ಕೌಜಲಗಿಯವರು ಹೇಳಿದ ಹಾಗೆ ಈ ಉತ್ತರ ಕರ್ನಾಟಕ ಮತ್ತೆ ಮೈಸೂರು ಕರ್ನಾಟಕ ಎಂದು ಹೇಳಿ ಅನೇಕ ತಾರುತಮ್ಯ ಯೋಜನೆಗಳನ್ನು ಮಾಡುತ್ತಿದ್ದಾರೆ. ಈ ರೀತಿಯಾಗದಂತೆ ಸರ್ವತೋಮುಖ ಅಭಿವೃದ್ಧಿಯನ್ನು ಇಟ್ಟುಕೊಂಡು ಧಾರವಾಡಕ್ಕಾಗಲೀ, ಬೆಳಗಾಂ ಆಗಲಿ, ಬಿಜಾಪುರಕ್ಕಾಗಲೀ, ಈಗ ಕೊಡತಕ್ಕಂಥ ಪರಿಹಾರವನ್ನು ಕಾನೂನು ಪ್ರಕಾರ ತೀವ್ರಗತಿಯಲ್ಲಿ ಕೊಡಲಿ ಎಂದು ಹೇಳಿ ನಾನು ಮತ್ತೊಮ್ಮೆ ತಮ್ಮ ಮುಖಾಂತರ ವಿನಂತಿ ಮಾಡಿಕೊಂಡು ತಾವು ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):- ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ವಿಚಾರದಲ್ಲಿ ನಮ್ಮ ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದಂತಹ ದೇಶಪಾಂಡೆಯವರು ಮತ್ತು ಇತರೆ ಅನೇಕ ಸದಸ್ಯರು ಬಹಳಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ನಾನಾದರೂ ಬಹಳ ಮುಖ್ಯವಾಗಿ ಎರಡು ವಿಷಯಗಳನ್ನು ಪ್ರಸ್ತಾಪ ಮಾಡಿ ನನ್ನ ಅಭಿಪ್ರಾಯವನ್ನು ಸರ್ಕಾರ ಗಮನಕ್ಕೆ ತರಬೇಕು ಎಂದು ಹೇಳಬಯಸುತ್ತೇನೆ. ಮೊದಲನೆಯ ವಿಷಯ ನಮ್ಮ ರಾಜ್ಯ ಸರ್ಕಾರದ ರಾಜಕೀಯ ನಾಯಕತ್ವ ಸಂಪೂರ್ಣವಾಗಿ ಈ ನೆರೆ ಪರಿಹಾರದ ವಿಚಾರದಲ್ಲಿ ಕೇಂದ್ರ ಸರ್ಕಾರದಿಂದ ಸಹಾಯ ಪಡೆಯಲಿಕ್ಕೆ ಪ್ರಧಾನಿಗಳ ಗಮನವನ್ನು ಸೆಳೆಯಲಿಕ್ಕೆ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಮಾನ್ಯ ಮೊಯಿಲಿಯವರು ನಾನು ಏನೇ ಒಳ್ಳೆಯ ಸರ್ಕಾರ ಕೊಡುತ್ತೇನೆ, ಪ್ರಾಮಾಣಿಕವಾದ ಸರ್ಕಾರ ಕೊಡುತ್ತೇನೆ, ಕೆಲಸ ಮಾಡತಕ್ಕಂಥ ಸರ್ಕಾರವನ್ನು ಕೊಡುತ್ತೇವೆಂದು ಹೇಳಿದ್ದರೂ ಸಹಿತ ಮಾನ್ಯ ಪ್ರಧಾನಿಯವರನ್ನು ಇಲ್ಲಿಗೆ ಕರೆತರುವ ಕೆಲಸ ಮಾಡಲಿಲ್ಲ ಬಹಳ ದೊಡ್ಡ ವಿಚಾರವೇನಲ್ಲ ಇದು. ಸುಮಾರು 600 ಕೋಟಿ ರೂಪಾಯಿ ಲುಕ್ಸಾನು ಆಗಿ, ಆರು ಜಿಲ್ಲೆಗಳಲ್ಲಿ ಎರಡೂವರೆ ಲಕ್ಷ ಮನೆಗಳು ಕುಸಿದು ಬಿದ್ದು, ಮೂರೂವರೆ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಬೆಳೆ ಹೋಗಿರುವಂತಹ

ಮಾಡಿದೆ ಎಂದು ಅವರಿಗೆ ಗೊತ್ತಿದೆ. ನೆರೆಹಾವಳಿಯಲ್ಲಿ ಎಲ್ಲಿ ಆಗಿದೆ ಅಲ್ಲಿ ಸಂತ್ರಸ್ತರಿಗೆ ಹಣವನ್ನು ಕೊಟ್ಟಿದ್ದಾರೆ, ತಾವೂ ಕೊಟ್ಟಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ನಾನು ಕೊಡುವ ಪ್ರಶ್ನೆ ಬರುವುದಿಲ್ಲ. ನಾನು ಪ್ರಧಾನಿ ಆಗಿದ್ದರೆ, ನಾನು ಮುಖ್ಯಮಂತ್ರಿಯಾಗಿದ್ದರೆ, ನಾನು ಕೊಡುವುದು ಬಿಡುವುದು, ಇಲ್ಲಿ ನಾನು ಕೊಡುವ ಪ್ರಶ್ನೆ ಬಂದಿಲ್ಲ. ನೀವು ಕೊಟ್ಟಿದ್ದೀರಾ, ನಿಮ್ಮ ಜೇಬಿನಿಂದ ಕೊಟ್ಟಿದ್ದೀರಾ, ನಿಮ್ಮ ಮನೆಯಿಂದ ಕೊಟ್ಟಿದ್ದೀರಾ ಇದನ್ನು ಹೇಳುವುದಕ್ಕಲ್ಲ.

ಶ್ರೀ ಟಿ.ಎಂ. ಮಂಜುನಾಥ್:- ಕೊಟ್ಟಿಲ್ಲ ಎಂದು ವಾದಿಸುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ಎಲ್ಲಿದೆ ದುಡ್ಡು, ಯಾರಿಗೆ ನೀವು ಕೊಟ್ಟಿದ್ದೀರಿ.

ಉಪಾಧ್ಯಕ್ಷಿಣಿಯವರು:- ಮಾನ್ಯ ಸಿಂಧ್ಯರವರೆ ತಾವು ಮಾತನಾಡಿ. ಮಾನ್ಯ ಮಂತ್ರಿಗಳವರ ಉತ್ತರದಲ್ಲಿ ಹೇಳುತ್ತಾರೆ.

ಶ್ರೀ ಟಿ.ಎಂ. ಮಂಜುನಾಥ್:- ಅವರು ಸೌಜನ್ಯವಿಲ್ಲವೇ, ಅಧಿಕಾರಿಗಳನ್ನು ಕಳುಹಿಸಿರತಕ್ಕಂಥದ್ದು ಸರಿ, ಇಲ್ಲವೇ ಎನ್ನುವಂತಹ ಮಾತನ್ನು ಹೇಳಿದರು.

ಶ್ರೀ ವಾಟಾಳ್ ನಾಗರಾಜ್:- ನನಗೆ ಅವರ ಬಗ್ಗೆ ಬಹಳ ಗೌರವವಿದೆ. ಅವರು ಮಂತ್ರಿಪದವಿ ಸಿಗಲಿಲ್ಲವೆಂದು ಚಿಂತೆಯನ್ನು ಪಟ್ಟಿಕೊಂಡು ಏನೇನೋ ಮಾತನಾಡುತ್ತಿದ್ದಾರೆ.

5.20 ಪಿಎಂ

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷಿಣಿಯವರೇ, ಅಧಿವೇಶನ ಪ್ರಾರಂಭವಾದ ಸಂದರ್ಭದಲ್ಲಿ, ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಕೊಟ್ಟಿದ್ದಾರೆ ಎನ್ನತಕ್ಕಂಥ ಪ್ರಶ್ನೆಯನ್ನು ನಾನು ರಾಜ್ಯದ ಕಂದಾಯ ಸಚಿವರಿಗೆ ಕೇಳಿದ್ದೆ. ಅದಕ್ಕೆ ಉತ್ತರ ರೂಪದಲ್ಲಿ ಕಳೆದ ವಾರ ಏನು ಕೊಟ್ಟಿದ್ದಾರೆಂದರೆ, 1992-93ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯದ ಪ್ರಕೃತಿ ವಿಕೋಪ ನಿಧಿಗೆ ವಂತಿಗೆಯಾಗಿ 20 ಕೋಟಿ ರೂಪಾಯಿಗಳೆಂದು, 1993-94ನೇ ಸಾಲಿಗೆ ಒಂದು ಮತ್ತು ಎರಡನೇ ಕಂತಿನ ಮುಂಗಡ ವಂತಿಗೆಯಾಗಿ ರಾಜ್ಯದ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ 10 ಕೋಟಿ ರೂಪಾಯಿಗಳು, ಅಂದರೆ, ಒಟ್ಟು 30 ಕೋಟಿ ರೂಪಾಯಿಗಳು ನಮ್ಮ ರಾಜ್ಯ ಸರ್ಕಾರಕ್ಕೆ ಬರಬೇಕಾಗಿರತಕ್ಕಂಥದ್ದನ್ನು ಈ ವರ್ಷದ ಮತ್ತು ಮುಂದಿನ ವರ್ಷದ ಹಣದಲ್ಲಿ ಮುಂಗಡವಾಗಿ ಕೊಟ್ಟಿದ್ದಾರೆಯೇ ಹೊರತು ತಮಿಳುನಾಡಿಗೆ ಪ್ಲಾನ್ ಅಸಿಸ್ಟೆನ್ಸ್‌ಗೆ ಮುಂಗಡವಾಗಿ ಒರಿಸ್ಸಾಗೆ, ಕೇರಳಾಕ್ಕೆ, ಅವರದೇ ರಾಜ್ಯವಾಗಿರತಕ್ಕಂಥ ಆಂಧ್ರಪ್ರದೇಶಕ್ಕೆ ಯಾವ ರೀತಿ ಹಣವನ್ನು ಕೊಟ್ಟಿದ್ದಾರೋ, ಅದೇ ರೀತಿಯಲ್ಲಿ ನಮ್ಮ ರಾಜ್ಯಕ್ಕೆ ಹಣವನ್ನು ಪ್ರಧಾನಿಗಳು ಏತಕ್ಕೆ ಕೊಡಲಿಲ್ಲ? ನಮ್ಮಲ್ಲಿ ರಾಜಕೀಯ ಮುಖಂಡತ್ವವಿಲ್ಲವೇ? ಈ ದಿಸೆಯಲ್ಲಿ ನಾನು ಏನು ಎಚ್ಚರಿಕೆಯನ್ನು ಕೊಡುವುದಕ್ಕೆ ಬಯಸುತ್ತೇನೆಂದರೆ, ಇದರಿಂದ ಕೇಂದ್ರ ಮತ್ತು ರಾಜ್ಯಗಳ ಒಂದು ಸಂಬಂಧ ಏನಿದೆ, ಈ ಸಂಬಂಧಕ್ಕೆ ಧಕ್ಕೆ ಬರುತ್ತದೆ ಎನ್ನತಕ್ಕಂಥ ವಿಚಾರವನ್ನು ಇವೊತ್ತು ನಿಮ್ಮ ಪಕ್ಷದವರು ತಿಳಿದುಕೊಳ್ಳಬೇಕಾಗಿದೆ. ಅವರು ತಮಿಳುನಾಡಿಗೆ ಹೋಗಿದ್ದರು, ಕೇರಳಾಕ್ಕೆ ಹೋಗಿದ್ದರು, ಒರಿಸ್ಸಾಗೆ ಹೋಗಿದ್ದರು. ಒರಿಸ್ಸಾದಲ್ಲಿ ನಮ್ಮದೇ ಆದ ಜನತಾ ದಳದ ಸರ್ಕಾರವಿದೆ. ಅಲ್ಲಿಗೂ ಹೋಗಿದ್ದರು, ಇಲ್ಲಿಗೆ, ಕರ್ನಾಟಕಕ್ಕೆ ಏತಕ್ಕೆ ಬರಲಿಲ್ಲ? ಕೊನೆಯಪಕ್ಷ ಅಧಿಕಾರಿಗಳ ಒಂದು ತಂಡವನ್ನು ಕಳುಹಿಸುವುದಕ್ಕೆ ಆಗಲಿಲ್ಲವೇ? ಈ ಕುರಿತು ನಮ್ಮ ಮಂತ್ರಿಗಳು ಕೊಟ್ಟಿರತಕ್ಕಂಥ ಹೇಳಿಕೆಗಳನ್ನು ನೋಡಿದಾಗ, ಒಂದು ಕಡೆ ಗೋಪಿನಾಥ ಸಾಂಡ್ರಾರವರು ''ಕೇಂದ್ರದಿಂದ ತಂಡ ಇನ್ನೇನು ಬಂದುಬಿಡುತ್ತದೆ, ನಾಳೆಯೇ ಅವರು ಬೆಂಗಳೂರಿನಲ್ಲಿ ಇಳಿಯುತ್ತಾರೆ'' ಎಂಬ ಹೇಳಿಕೆ ಕೊಟ್ಟರೆ, ಇನ್ನೊಂದು ಕಡೆ ಮುಖ್ಯಮಂತ್ರಿಗಳು ''ಕೇಂದ್ರ ಸರ್ಕಾರದಿಂದ ನಮಗೆ 55 ಕೋಟಿ

ರೂಪಾಯಿಗಳು ಬಂದಿದೆ'' ಎಂದು ಹೇಳಿಕೆ ಕೊಟ್ಟರು. ಇದನ್ನು ನೋಡಿ ಕರ್ನಾಟಕದ ಜನರು, ರಾಜ್ಯಕ್ಕೆ 55 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ತಿಳಿದುಕೊಳ್ಳುತ್ತಾರೆ. ಆದರೆ, ವಾಸ್ತವಾಂಶ ಏನಾಗಿದೆ? ನಿಮಗೆ ಕೊಟ್ಟಿರತಕ್ಕಂಥ ಹಣದಲ್ಲಿ ಬಡ್ಡಿಯಿಲ್ಲದೆ 6 ತಿಂಗಳು ಮುಂಚಿತವಾಗಿ ನಮಗೆ ಬರತಕ್ಕಂಥ ದುಡ್ಡನ್ನು ಅವರು ಕೊಟ್ಟಿದ್ದಾರೆಯೇ ಹೊರತು ಧರ್ಮಕ್ಕಾಗಿ ಕೊಟ್ಟಿಲ್ಲ ಎನ್ನತಕ್ಕಂಥ ವಿಷಯವನ್ನು ಇವೊತ್ತು ನಾವೆಲ್ಲರೂ ತಿಳಿದುಕೊಳ್ಳಬೇಕಾಗಿದೆ. ಇದರಿಂದ ರಾಜಕೀಯವಾಗಿ ನಿಮ್ಮ ಪಕ್ಷಕ್ಕೆ ಅನುಕೂಲ ಮತ್ತು ಉಪಯೋಗವಾಗುತ್ತದೆ. ಅಲ್ಲದೆ, ಈ ಒಂದು ನೆರೆಹಾವಳಿಯಿಂದ ಯಾವ ಕರ್ನಾಟಕದ ಜನತೆ ಕಷ್ಟದಲ್ಲಿದ್ದಾರೋ, ಅಂಥವರಿಗೆ ಅನುಕೂಲವಾಗುತ್ತದೆ. ದಯವಿಟ್ಟು ಇದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಂಡು ಬನ್ನಿ. ನಾಳೆ ಇದರ ಬಗ್ಗೆ ಉತ್ತರ ಕೊಡುವುದಕ್ಕಿಂತ ಮುಂಚಿತವಾಗಿ ಈ ಸದನದಲ್ಲಿ ಒಂದು ನಿರ್ಣಯವಾಗಲಿ. ಕಳೆದ 40 ವರ್ಷಗಳಿಂದೀಚೆಗೆ ನಾವು ಇಂತಹ ನೆರೆಹಾವಳಿಯನ್ನು ನೋಡಿರಲಿಲ್ಲ. ತಾವು ಕೂಡ ನೆರೆಹಾವಳಿ ಪೀಡಿತ ಪ್ರದೇಶವನ್ನು ನೋಡಿಕೊಂಡು ಬಂದಿದ್ದೀರಿ. ನಾನು ರಾಯಚೂರಿನ ಸಿಂಧನೂರು, ಬಳ್ಳಾರಿಯ ಸಿರಗುಪ್ಪ ತಾಲ್ಲೂಕುಗಳಿಗೆ ಹೋದಾಗ ನೆರೆಹಾವಳಿ ಬಂದು ಊರು, ಮನೆಮಠ ಎಲ್ಲವೂ ಕೊಚ್ಚಿಕೊಂಡು ಹೋಗಿದೆ. ಆ ಹಳ್ಳಿಯಲ್ಲಿ ಏನೂ ಸಹ ಉಳಿದಿರಲಿಲ್ಲ. ದುರ್ನಾತದಿಂದ ಒಳಗಡೆ ಹೋಗಲು ಆಗುವುದಿಲ್ಲ. ಸುಮಾರು 60–70 ಹಳ್ಳಿಗಳು ನೀರಿನಿಂದ ಸಂಪೂರ್ಣ ನಾಶವಾಗಿವೆ. ಅನೇಕ ಕಡೆಗಳಲ್ಲಿ ರಸ್ತೆಗಳಿಲ್ಲ, ವಿದ್ಯುತ್ ಇಲ್ಲ. ಬಹುಶಃ ನನಗನಿಸುತ್ತದೆ, ಆ ಲಕ್ಷಾಂತರ ರೈತರು ಯಾರಿದ್ದಾರೆ, ಅವರು ಪುನಃ ಯಥಾಸ್ಥಿತಿಗೆ ಮರಳುವುದಕ್ಕೆ ಈ ಶತಮಾನದಲ್ಲಿ ಸಾಧ್ಯವಿಲ್ಲ. ಈ ಶತಮಾನದಲ್ಲಿ ಯಥಾಸ್ಥಿತಿಗೆ ಬರುವುದಕ್ಕೆ ಸಾಧ್ಯವಿಲ್ಲದೆ ಇರತಕ್ಕಂಥ ಪರಿಸ್ಥಿತಿಗೆಯಿರುವಾಗ ಕೇಂದ್ರ ಸರ್ಕಾರದವರು ತೆಗೆದುಕೊಂಡಿರತಕ್ಕ ನೀತಿಯ ವಿರುದ್ಧವಾಗಿ ನಾವೆಲ್ಲರೂ ಸಹ ಒಟ್ಟಾಗಿ ಹೋಗೋಣ. ಈ ಸದನದಲ್ಲಿ ಒಂದು ನಿರ್ಣಯ ಮಾಡಲಿ. ಏನೆಂದರೆ, ನೀವು 350 ಕೋಟಿ ರೂಪಾಯಿಗಳನ್ನು ಪರಿಹಾರ ನಿಧಿಗೆ ಕೊಡಿ ಎಂದು ಕೇಳಿದ್ದು, ಅದರಲ್ಲಿ 250 ಕೋಟಿ ರೂಪಾಯಿಗಳನ್ನು ನೀವು ಏನು ಕೇಳಿದ್ದೀರಿ, ಆ ದುಡ್ಡನ್ನು ತತ್‌ಕ್ಷಣ ಕೊಡಬೇಕೆಂದು ಒಂದು ನಿರ್ಣಯವನ್ನು ಈ ಸಭೆಯಲ್ಲಿ ನೀವು ಮಂಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಮತ್ತೊಂದು ವಿಚಾರವನ್ನು ಈ ಸಂದರ್ಭದಲ್ಲಿ ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಈಗ ನೆರೆಹಾವಳಿಯಾಯಿತು. ತುಂಗಭದ್ರಾ ಅಣೆಕಟ್ಟಿನಿಂದ ನೀರನ್ನು ಬಿಟ್ಟಿರತಕ್ಕಂಥ ವಿಚಾರದ ಬಗ್ಗೆ ಹೇಳುತ್ತಿದ್ದೇನೆ. ತುಂಗಭದ್ರಾ ಮಂಡಳಿ ಇದೆ. ಕರ್ನಾಟಕ ಮತ್ತು ಆಂಧ್ರಪ್ರದೇಶದ ಎರಡು ರಾಜ್ಯಗಳ ಇಂಜಿನಿಯರುಗಳು ಆ ಮಂಡಳಿಯಲ್ಲಿದ್ದಾರೆ. ಇದು ತಮಗೆ ಗೊತ್ತಿರತಕ್ಕಂಥ ವಿಚಾರ. ತುಂಗಭದ್ರಾ ಅಣೆಕಟ್ಟಿನಲ್ಲಿ ನೀರು ಸಂಪೂರ್ಣವಾಗಿ ತುಂಬಿ ಹೋಗುವವರೆಗೂ ಹೊರಗಡೆ ನೀರನ್ನು ಬಿಟ್ಟಿಲ್ಲ. ಬದಲಾಗಿ, ಎರಡು ತಿಂಗಳುಗಳ ಕಾಲ ಬಿಡುವಷ್ಟು ನೀರನ್ನು ಇವರು ಒಂದೇ ಸಲ ಬಿಟ್ಟಿದ್ದಾರೆ. ತಮಗೆ ಗೊತ್ತಿರುವ ಹಾಗೆ ಮೇಲಿನ ಅಣೆಕಟ್ಟಿನಿಂದ ಕೆಳಗಡೆ ನೀರನ್ನು ಬಿಡಬೇಕಾದರೆ ಒಂದು ವ್ಯವಸ್ಥೆ ಇದೆ. ಅಲ್ಲಿಂದ ಆಂಧ್ರಪ್ರದೇಶದ ಗಡಿಯವರೆವಿಗೂ ಸುಮಾರು 40 ಪೋಲೀಸ್ ಠಾಣೆಗಳು ಬರುತ್ತವೆ. ವೈರ್‌ಲೆಸ್ ಇದೆ, ಒಬ್ಬ ಜಿಲ್ಲಾಧಿಕಾರಿ, ಒಬ್ಬ ಎಸ್.ಪಿ. ಇದ್ದಾರೆ. ರಾಯಚೂರು ಜಿಲ್ಲೆಗೂ ಒಬ್ಬ ಎಸ್.ಪಿ. ಹಾಗೂ ಒಬ್ಬ ಡಿ.ಸಿ. ಇದ್ದಾರೆ. ನಾನು ಮತ್ತು ದೇಶಪಾಂಡೆಯವರು ಅನೇಕ ಅಧಿಕಾರಿಗಳನ್ನು ಈ ಬಗ್ಗೆ ಕೇಳಿದಾಗ ಒಬ್ಬರೂ ಸಹ ಮುಂಚಿತವಾಗಿ ನಾವು ನೀರನ್ನು ಬಿಡುತ್ತೇವೆ ಎನ್ನತಕ್ಕಂಥ ವಿಚಾರವನ್ನು ಹೇಳಲಿಲ್ಲ. ಇವರು ಏತಕ್ಕೆ ಹೇಳಲಿಲ್ಲ? ಮುಂಚಿತವಾಗಿಯೇ ನೀರನ್ನು ಬಿಡುತ್ತೇವೆಂದು ಸಂಬಂಧಪಟ್ಟ ಅಧಿಕಾರಿಗಳು ಸೂಚನೆ ಕೊಟ್ಟಿದ್ದರೆ ಇಷ್ಟೊಂದು ಅನಾಹುತವಾಗುತ್ತಿರಲಿಲ್ಲ. ಅಲ್ಲಿರುವ ರೈತರ ದುರಾದೃಷ್ಟಕ್ಕೆ ಯಾವ ದಿವಸ ಇವರು ನೀರನ್ನು ಬಿಟ್ಟಿದಾರೋ, ಆ ದಿವಸ ಒಂದು ವರ್ಷಗಳ ಕಾಲ ಆಗುವಷ್ಟು ಮಳೆ ಒಂದೇ ರಾತ್ರಿಯಲ್ಲಿ ಆಗಿದೆ. ನಾನು

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಮಂತ್ರಿಗಳು ಕನ್ನಡದಲ್ಲಿ ಹೇಳಬೇಕು. ಇದನ್ನು ಓದುವುದಕ್ಕೆ ನಾನು ಅವಕಾಶವನ್ನು ಕೊಡುವುದಿಲ್ಲ. ದಯವಿಟ್ಟು ಕನ್ನಡದಲ್ಲಿ ಓದಿ. ಮಾನ್ಯ ಹಾರ್ನಹಳ್ಳಿ ರಾಮಸ್ವಾಮಿಯವರು ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ಮಾಡಿದ ಜನ. ಅವರು ಇಲ್ಲಿ ನಿಂತುಕೊಂಡು ಇಂಗ್ಲೀಷ್‌ನಲ್ಲಿ ಓದುವುದಕ್ಕೆ ಶುರು ಮಾಡತಕ್ಕದ್ದು ನಮ್ಮ ಹಣೇಬರಹ. ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ, ದಯವಿಟ್ಟು ಇಂಗ್ಲೀಷ್‌ನಲ್ಲಿ ಓದುವುದನ್ನು ನಿಲ್ಲಿಸಿ.

### ಲಿಂಗನಮಕ್ಕಿ ಪವರ್ ಹೌಸ್‌ನಲ್ಲಿ ಸ್ಲೂಸ್‌ಗೇಟ್‌ಗಳ ರಿಪೇರಿ ಮಾಡದಿರುವುದರಿಂದ ಉಂಟಾಗಿರುವ ತೊಂದರೆ ಮಂತ್ರಿಗಳ ಹೇಳಿಕೆ

† ಶ್ರೀ ಹಾರ್ನಹಳ್ಳಿರಾಮಸ್ವಾಮಿ:- ಇಂಗ್ಲೀಷ್‌ನಲ್ಲಿದೆ, ಅದನ್ನು ಕನ್ನಡಕ್ಕೆ ಭಾಷಾಂತರ ಮಾಡಿಕೊಂಡು ಹೇಳುತ್ತೇನೆ. ಲಿಂಗನಮಕ್ಕಿಯಲ್ಲಿ 3 ಸ್ಲೂಯಿಸ್ ಇವೆ. ಅದರಲ್ಲಿ ಒಂದನೇ ಸ್ಲೂಯಿಸ್ ಒಳ್ಳೆಯ ಕಂಡಿಷನ್‌ನಲ್ಲಿದೆ. ಅದು ಕೆಲಸಮಾಡುತ್ತಿದೆ. ಇದು 10 ಯೂನಿಟ್‌ಗಳಲ್ಲಿ ಪವರ್‌ನ್ನು ಜನರೇಟ್ ಮಾಡುವುದಕ್ಕೆ ಸಾಕಷ್ಟು ನೀರನ್ನು ಒದಗಿಸುತ್ತದೆ. ಲಿಂಗನಮಕ್ಕಿಯಲ್ಲಿ 2ಯೂನಿಟ್‌ಗಳ ಪೈಕಿ 1ಯೂನಿಟ್ ಕೆಲಸ ಮಾಡುತ್ತಿಲ್ಲ. ಇನ್ನೊಂದು ಕೆಲಸಮಾಡುತ್ತಿದೆ. 3ನೇ ಸ್ಲೂಯಿಸ್ ರಿಪೇರಿಯಲ್ಲಿದೆ. ಆದರೂ ಈ ಸ್ಲೂಯಿಸ್‌ನಿಂದಲೂ ಆಗಿಂದಾಗ್ಗೆ ನೀರನ್ನು ಬಿಡುತ್ತಿದೆ ಮತ್ತು ಅವಶ್ಯಕತೆ ಇದ್ದಾಗ ಈ ಸ್ಲೂಯಿಸ್‌ನಲ್ಲಿ ನೀರನ್ನು ಬಿಡುವುದಕ್ಕೆ ಅವಕಾಶವಿದೆ. ಜೂನ್ 93ರೊಳಗೆ ಇದನ್ನು ಪೂರ್ಣವಾಗಿ ರಿಪೇರಿ ಮಾಡಿ ಮುಗಿಸುತ್ತೇವೆ. ಎರಡನೇ ಸ್ಲೂಯಿಸ್‌ನ ರಿಪೇರಿ ಕೆಲಸ ನಡೆಯುತ್ತಿದೆ. ಇದೂ ಕೂಡ 93ರ ಜೂನ್‌ನೊಳಗೆ ಮುಗಿಯುತ್ತದೆ. 3 ದಶಕಗಳಿಂದ ಈ ಗೇಟ್ ಮುಚ್ಚಿ ಹೋಗಿದೆ ಎಂದು ಪತ್ರಿಕೆಗಳಲ್ಲಿ ಬಂದಿರತಕ್ಕದ್ದು ಸರಿಯಲ್ಲ. 3 ದಶಕಗಳಿಂದ ಅವಶ್ಯಕವಾದಾಗಲೆಲ್ಲಾ ಇದನ್ನು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ. ಲಿಂಗನಮಕ್ಕಿ ಪವರ್‌ಹೌಸ್ ಏನಿದೆ ಇದು ಕೆಟ್ಟು ಹೋದಾಗ ಮಾತ್ರ ಸ್ಲೂಯಿಸ್ ಗೇಟನ್ನು ತೆರೆಯುತ್ತೇವೆ. ಆದರೆ ಇದು ಇನ್ನೂ ಅಂಥ ಪರಿಸ್ಥಿತಿಗೆ ಬಂದಿಲ್ಲ. ಎರಡು ಯೂನಿಟ್‌ಗಳು ಪೂರ್ತಿ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ತಯಾರಿಸುತ್ತಿವೆ. ಆದುದರಿಂದ ಯಾವುದೇ ತುರ್ತು ಪರಿಸ್ಥಿತಿಯೂ ಈ ಲಿಂಗನಮಕ್ಕಿ ಪ್ರಾಜೆಕ್ಟ್‌ನಲ್ಲಿ ಉಂಟಾಗಿಲ್ಲ. ಪತ್ರಿಕೆಗಳಲ್ಲಿ ಬಂದಿರತಕ್ಕ ರೀತಿಯಲ್ಲಿ ಇಲ್ಲಿನ ಕೆಲಸ ನಿಂತಿದೆ ಎಂದು ಹೇಳತಕ್ಕದ್ದು ಸರಿಯಲ್ಲ. ಈ ಗೇಟುಗಳು 1991ರಿಂದ ಕೆಟ್ಟು ಹೋಗಿವೆ, 50ಲಕ್ಷ ರೂ. ಇವುಗಳ ರಿಪೇರಿಗಾಗಿ ಖರ್ಚು ಮಾಡಲಾಗಿದೆ ಎಂದು ಹೇಳತಕ್ಕದ್ದೂ ಕೂಡ ಸರಿಯಲ್ಲ. ಎರಡು ಯೂನಿಟ್‌ಗಳು ಪೂರ್ತಿ ಪ್ರಮಾಣದಲ್ಲಿ ಕೆಲಸ ಮಾಡುತ್ತಿವೆ. ವಿದ್ಯುಚ್ಛಕ್ತಿ ತಯಾರು ಮಾಡತಕ್ಕಂಥಾದ್ದು ನಡೆಯುತ್ತಿದೆ. ಆದ್ದರಿಂದ ಯಾವ ತುರ್ತು ಪರಿಸ್ಥಿತಿಯೂ ಲಿಂಗನಮಕ್ಕಿ ಪ್ರಾಜೆಕ್ಟಿನಲ್ಲಿ ಉಂಟಾಗಿಲ್ಲ. ಪತ್ರಿಕೆಯಲ್ಲಿ ಬಂದ ರೀತಿಯಲ್ಲಿ ಈಗಾಗಲೇ ಕೆಲಸ ನಿಂತಿದೆ ಎಂದು ಹೇಳುವುದು ಸರಿಯಲ್ಲ. ಗೇಟ್ ಕೆಟ್ಟು ಹೋಗಿದೆ ಎಂದು ಹೇಳುವುದು ಸರಿಯಲ್ಲ. ತಲಕಳಲೆ ಡ್ಯಾಮಿನ ಒಡ್ಡಿನ ಕೆಳಭಾಗದಲ್ಲಿ ಸ್ಟೀಲ್‌ಲೈನಿಂಗ್ ಉಕ್ಕಿನ ಕವಚವನ್ನು ಮಾಡಬೇಕೆಂದು ಒಂದು ಪ್ರಪೋಸಲ್ ಇತ್ತು.

ಶ್ರೀ ಜೆ.ಸಿ. ಮಾಧುಸ್ವಾಮಿ:- ಇಂಗ್ಲೀಷ್‌ನಲ್ಲೇ ಓದಿ ಸರ್

ಶ್ರೀ ಶಿವಾನಂದ ಎಚ್. ಕೌಜಲಗಿ:- ಇಂಗ್ಲೀಷ್‌ನಲ್ಲೇ ಓದಿ

ಶ್ರೀ ವಾಟಾಳ್ ನಾಗರಾಜ್:- ಇಡೀ ಸದನವೇ ಹೇಳಿದರೂ ನಾನು ಅದಕ್ಕೆ ಒಪ್ಪುವುದಕ್ಕೆ ತಯಾರಿಲ್ಲ. ಅವಕಾಶ ಕೊಡುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಯಾವುದರಲ್ಲಿ ಅಚ್ಚಾಗಿ ಬಂದಿದೆಯೋ ಅದರಲ್ಲಿ ಓದಬೇಕಾಗುತ್ತದೆ. ಅಧಿಕಾರಿಗಳು ಸಹಿ ಹಾಕಿ ಕೊಡಬೇಕಾಗುತ್ತದೆ. ಹಾಗಾದರೆ ನಮಗೆ ಕಾಪಿ ಕೊಡಿ.